
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 22 ಜೂನ್ 6, 2004 ಬೆಲೆ ರೂ. 3.00



ಅಪರೂಪದ ಕ್ರಾಂತಿಕಾರಿ ನಾಯನಾರ್‌ರವರಿಗೆ ಮಹಾ ಬೀಳ್ಕೊಡುಗೆ



ಜಾತ್ಯತೀತ ಸರ್ಕಾರದ ಸ್ಥಾಪನೆ

- ‘ಷೇರಿ’ಗೆ ಸವ್ವಾ ‘ಸೇರು’
- ಬಸವಧರ್ಮ ಮತ್ತು ಮಾಂಸಾಹಾರದ ಚರ್ಚೆ ಪ್ರಸ್ತುತವೆಷ್ಟು?

ಅಪಹಾಸ್ಯಕ್ಕೀಡಾದ ಮಾಧ್ಯಮಗಳು, ಚುನಾವಣಾ ಜ್ಯೋತಿಷಿಗಳೂ

'ಸಮೂಹಸನ್ನಿ'ಯ ಸೃಷ್ಟಿಕರ್ತರಿಗೆ ಮತದಾರ ಕೊಟ್ಟ ಏಟು ಎಂತಹದು? ಟಿ.ವಿ., ಪತ್ರಿಕೆಗಳ ಪಂಡಿತರು ಸ್ವಲ್ಪವಾದರೂ ವಿಮರ್ಶೆಯಾದರೂ ಮಾಡಿಕೊಂಡಾರೆ? ಹಾದಿ ತಪ್ಪಿ(ಸಿ)ದ ಮಾಧ್ಯಮಗಳತ್ತ ಒಂದು ಚಿಕಿತ್ಸಕ ನೋಟ ಶರತ್‌ಚಂದ್ರರಿಂದ

ಭಾರತದ ಕೋಟ್ಯಾಂತರ ಮತದಾರರು ತಮ್ಮ ಮತದ ಮೂಲಕ ಕೇವಲ ಜನವಿರೋಧಿ ಆರ್ಥಿಕ ನೀತಿ ಹೊರಿಸಿದ ರಾಜಕಾರಣಿಗೆ ಮಾತ್ರವಲ್ಲ ಅವಮಾನಕಾರಿ ಏಟು ಕೊಟ್ಟಿದ್ದು ಈ ಬಾರಿಯ ಜನಾದೇಶದಿಂದ ಅತ್ಯಂತ ಅಪಹಾಸ್ಯಕ್ಕೊಳಗಾಗಿ ರುವವರು ಸುದ್ದಿ ಮಾಧ್ಯಮಗಳು, ನಾಯಿ ಕೊಡೆಗಳಂತೆ ಬೆಳೆದುಕೊಂಡಿದ್ದ ಚುನಾವಣಾ ಜ್ಯೋತಿಷಿಗಳು. ಅವರ ಎಲ್ಲಾ ವಿಶ್ಲೇಷಣೆಗಳು, ಭವಿಷ್ಯಕ್ಕಾಗಿ ಹೇಗೆ ಮತ ನೀಡಬೇಕು ಎಂಬೆಲ್ಲವನ್ನು ಗಾಳಿಗೆ ತೂರಿದ್ದಾನೆ. ತಮ್ಮ ಮಾಧ್ಯಮ ಬಲದಿಂದ ಬೀಗುತ್ತಿದ್ದ ಮಾಧ್ಯಮದೊರೆಗಳಿಗೆ ಅವರ ತೊತ್ತುಗಳಿಗೆ ಮರೆಯಲಾಗದ ಪಾಠ ಕಲಿಸಿದ್ದಾನೆ.

ವಾಜಪೇಯಿ ಚುನಾವಣೆ ಘೋಷಿಸುತ್ತಿದ್ದಂತೆ ಬಿಜೆಪಿ 'ಗೆಲುವು ಖಚಿತ' ಎಂಬ 'ಬಹುಪರಾಕು' ಗಳಿಂದ ಆರಂಭಿಸಿದ ಮಾಧ್ಯಮಗಳು ಅದ್ವಾನಿ ರಥಯಾತ್ರೆಯನ್ನು ಗಗನಕ್ಕೇರಿಸಿದವು. ಆಮೇಲೆ ಬರಲಾರಂಭಿಸಿದ ಪುಂಖಾನುಪುಂಖ ಮತ 'ಸಂಗ್ರಹ'ಗಳು ಎಲ್ಲಿ, ಎಷ್ಟು, ಹೇಗೆ ಓಟು ಮಾಡಬೇಕೆಂದು ಜನರಿಗೆ ಹೇಳುತ್ತಿದ್ದವು. ಎಲ್ಲಾ ಮಾಧ್ಯಮಗಳು ಬಿಜೆಪಿ ಕೂಟಕ್ಕೆ 340 ರಿಂದ ಆರಂಭಿಸಿ ಕಡಿಮೆ ಮಾಡುತ್ತಾ ಬಂದರೂ, ಸರಳ ಬಹುಮತ ಬಂದೇ ಬರುತ್ತದೆಂದು ಹೇಳುತ್ತಾ ಬಂದರು. ಅತ್ಯಂತ ಹಾಸ್ಯಾಸ್ಪದವೆಂದರೆ ಚುನಾವಣೆ ನಂತರ ನಡೆಸುವ 'ಎಕ್ಸಿಟ್ ಪೋಲ್'ಗಳೂ ಗುರಿ ತಪ್ಪಿದ ಬಾಣಗಳಂತೆ ಎಲ್ಲೋ ಹೋಗಿಬಿದ್ದದ್ದು 1977 ರ ನಂತರ ಎಂದೂ ಚುನಾವಣೆಗಳಲ್ಲಿ ಮಾಧ್ಯಮಗಳ ಅಂದಾಜು ಇಷ್ಟು ದಾರಿ ತಪ್ಪಿರಲಿಲ್ಲ.

ಎಕ್ಸಿಟ್ ಪೋಲ್ ಮತ್ತು ಜನಾದೇಶ -2004

ಮಾಧ್ಯಮ ಕಂಪನಿ	ಬಿಜೆಪಿ ಕೂಟ	ಕಾಂಗ್ರೆಸ್ ಕೂಟ	ಇತರರು
ಸ್ಟಾರ್ ನ್ಯೂಸ್	270-282	167-179	87-99
ಸಹಾರಾ - ಸಮಯ	263-278	171-181	92-102
ಆಜ್-ತಕ್	248	191	104
ಝಿ ನ್ಯೂಸ್	249	176	117
ಎನ್‌ಡಿಟಿವಿ	230-250	190-205	100-120
ಜನಾದೇಶ 2004	**187**	**216**	**137**

ಜನಾದೇಶ ಹೊರಬಿದ್ದ ನಂತರ ಈ ಎಲ್ಲಾ 'ತಜ್ಞರು' 'ಚುನಾವಣಾ ಜ್ಯೋತಿಷಿ'ಗಳು ತಮ್ಮ ಹಾಸ್ಯಾಸ್ಪದ ಸ್ಥಿತಿಯಲ್ಲೂ ಈ ಪ್ರಮಾದಕ್ಕೆ ಕಾರಣ ಕಂಡುಹಿಡಿಯಲು ತಿಣಕಿದರು. ಸ್ಯಾಂಪಲ್ಲುಗಳಲ್ಲಿ ತಪ್ಪು, ಇಡೀ ಪ್ರದೇಶಗಳಲ್ಲಿ ಮತದಾರನ ಒಂದೇ ರೀತಿ ಯೋಚನೆ ಮಾಡಿದ್ದು (ಅದು ಅವನ ತಪ್ಪ?!) ಬಹು-ಪಕ್ಷೀಯ ಚುನಾವಣೆಗಳಲ್ಲಿ (ಭಾರತದ ಚುನಾವಣೆ ಯಾವಾಗಲೂ ಬಹುಪಕ್ಷೀಯ ವಾಗಿದ್ದದ್ದೇ!) ಬದಲಿಸಬೇಕಾದ ಫಾರ್ಮುಲಾ, ಸ್ಯಾಂಪಲ್‌ಗಳಿಂದ ಸೀಟುಗಳನ್ನು ಭವಿಷ್ಯವಾಣಿಗೆ ಬದಲಿಸಬೇಕಾದ ಫಾರ್ಮುಲಾ - ಇತ್ಯಾದಿ ಹಾಸ್ಯಾಸ್ಪದ ಕಾರಣಗಳು ಸಹಾಯಕ್ಕೆ ಬಂದಿತು. ಆತ್ಮಪರೀಕ್ಷಣೆಗೆ ಒಳಪಡಿಸಿಕೊಂಡ ಎನ್‌ಡಿ ಟಿವಿಗೂ ಎಲ್ಲರೂ ಒಪ್ಪುವ ಯಾವುದೇ ಉತ್ತರ ಕಂಡುಕೊಳ್ಳಲು ಸಾಧ್ಯವಾಗಲಿಲ್ಲ. ಉಳಿದ ಚಾನೆಲ್‌ಗಳು ತಮ್ಮ ಪ್ರಮಾದ'ವನ್ನು ಒಪ್ಪಿಕೊಳ್ಳಲೂ ಇಲ್ಲ. 'ಆತ್ಮಪರೀಕ್ಷೆ'ಯ ಗೊಡವೆಗೂ ಹೋಗಲಿಲ್ಲ.

ಆತ್ಮ-ವಿಮರ್ಶೆಯ ಸರ್ಕಸ್ಸು

ಎಕ್ಸಿಟ್ ಪೋಲ್‌ಗಳು ನಾಲ್ಕು ಹಂತದ ಚುನಾವಣೆಗಳ ಸಂದರ್ಭದಲ್ಲಿ ಮತದಾರನ ಮೇಲೆ ಬಿಜೆಪಿ ದುಷ್ಟಕೂಟದ ಪರವಾಗಿ ಪ್ರಭಾವ ಬೀರಲು ಮಾಡಿದ ಗಂಭೀರ ಪ್ರಯತ್ನ ಎಂಬ ಬಗ್ಗೆ ಯಾರಿಗೂ ಈಗ ಸಂಶಯ ಉಳಿದಿಲ್ಲ. ಬೇರೆ ಯಾವುದೇ ರೀತಿಯ ತಪ್ಪಾಗಿದ್ದರೆ, ಎಲ್ಲಾ ಛಾನೆಲ್‌ಗಳು ತಪ್ಪಿದವು ಹೇಗೆ? ಹಲವು ಮಾಧ್ಯಮಗಳ ಎಕ್ಸಿಟ್-ಪೋಲ್'ಗಳ ನಡುವೆಯೇ 40-50 ಸೀಟ್‌ಗಳಷ್ಟು ವ್ಯತ್ಯಾಸವಿದ್ದದ್ದೆ ಅದರ ನಿಖರತೆ ಬಗ್ಗೆ ಬಹಳಷ್ಟು ಹೇಳಿರಬೇಕು. ಆದರೆ ಜನಾದೇಶಕ್ಕೆ ಹತ್ತಿರ ಬಂದ ಎನ್‌ಡಿ ಟಿವಿ ಭವಿಷ್ಯವಾಣಿಯ ತಪ್ಪು 40 ಸೀಟುಗಳಷ್ಟಾಗಿತ್ತು. ಉತ್ತರ ಪ್ರದೇಶ, ಬಿಹಾರ, ಗುಜರಾತ್, ಕೇರಳ ಗಳಲ್ಲಿ - ಅದು ಫಲಿತಾಂಶದ 'ದಿಕ್ಕು' ಹಿಡಿಯುವು ದರಲ್ಲೂ ಸಫಲವಾಗಿಲ್ಲ. ಆಂಧ್ರ, ತಮಿಳುನಾಡು ಗಳಲ್ಲಿ ಫಲಿತಾಂಶದ 'ದಿಕ್ಕು' ಹಿಡಿದರೂ, ಬಿಜೆಪಿ ಕೂಟದ 'ಧ್ವಂಸ'ದ ಸುಳಿವೇ ಸಿಗಲಿಲ್ಲ. ಎಲ್ಲಾ ಕಡೆ ಕಾಂಗ್ರೆಸ್, ಬಿಜೆಪಿ ಬಿಟ್ಟು ಇತರ ಪಕ್ಷಗಳ ಸೀಟುಗಳನ್ನು ಅಂದಾಜು ಮಾಡುವುದರಲ್ಲಿ ಇನ್ನಷ್ಟು ದೊಡ್ಡ 'ಪ್ರಮಾದ'ಗಳು ಆದವು.

ಕರ್ನಾಟಕದ ಫಲಿತಾಂಶದ ಬಗ್ಗೆ ಬಂದ 'ಎಸ್ಸಿಟ್ ಪೋಲು'ಗಳು ಕಡಿಮೆ ಹಾಸ್ಯಾಸ್ಪದ ವಾಗಿರಲಿಲ್ಲ. ಬಿಜೆಪಿಗೆ ಬಹುಮತ ಒಪ್ಪಿಸಿ ಬಿಟ್ಟವರು ಕೆಲವರಾದರೆ, ಕಾಂಗ್ರೆಸ್‌ಗೆ ಬಹುಮತ ಒಪ್ಪಿಸಿದವು ಕೆಲವು. ಆದರೂ ಯಾವುವೂ ಜೆಡಿ(ಎಸ್) 20-25ಗಿಂತ ಹೆಚ್ಚು ಸೀಟು ಕೊಟ್ಟಿರಲಿಲ್ಲ.

ಪತ್ರಕರ್ತರ ವೈಫಲ್ಯ

ಪೋಲುಗಳು ಹಾಳಾಗಿ ಹೋಗಲಿ ಜನರ ನಾಡಿಮಿಡಿತ ಹಿಡಿಯಲು ಕಳಿಸಿದ ನೂರಾರು ಪತ್ರಕರ್ತರ ಮೂಗಿಗಾದರೂ ಬಿಜೆಪಿ ದುಷ್ಟಕೂಟವನ್ನು ಮನೆಗೆ ಕಳಿಸುವ ದೃಢನಿರ್ಧಾರ ವಾಸನೆ ಬಡಿಯಲಿಲ್ಲವೆ? ಬಹುಶಃ ಎನ್‌ಡಿ ಟಿವಿಯ ರಾಜದೀಪ್ ಸರದೇಸಾಯಿ ಕೊಟ್ಟ ಪ್ರಾಮಾಣಿಕ ಉತ್ತರವೇ ಇವೆಲ್ಲಕ್ಕೂ ಉತ್ತರ "ಬಹುಶಃ ಟಿವಿ ಸ್ಟುಡಿಯೋದ ಆಚೆಗಿನ ಭಾರತ, ಸ್ಟುಡಿಯೋದ ಕೆಲವು ಕಿ.ಮಿ ಆಚೆಗಿನ ಭಾರತ ನಮಗೆ ನಿಲುಕಲಿಲ್ಲ, ತಟ್ಟಲಿಲ್ಲ"

ಮಾಧ್ಯಮ ದೊರೆಗಳು ಚುನಾವಣಾ ಸರ್ಕಸ್ಸು

ಇದರರ್ಥ ಸುದ್ದಿ ಮಾಧ್ಯಮಗಳು, ಪತ್ರಕರ್ತರು ಅಪ್ರಾಮಾಣಿಕರು ಎಂದೆ? ತೀರಾ ಹಾಸ್ಯಾಸ್ಪದ ವಿಶ್ಲೇಷಣೆ, ಭವಿಷ್ಯವಾಣಿ ಕೊಟ್ಟರೆ ತಮ್ಮ 'ನಂಬಿಗಸ್ತನ' ಕೆಡುತ್ತದೆ ಎಂಬ ಭಯ ಇಲ್ಲವೆ? ಒಂದನೆಯದಾಗಿ ಮತ ನೀಡುವ ಜನ ಇವರ ಗ್ರಾಹಕರೇ ಅಲ್ಲ. ಎಲ್ಲೋ ಪರೋಕ್ಷವಾಗಿ ಕೆಲವು ವಿಭಾಗಗಳನ್ನು ದಾರಿತಪ್ಪಿಸಲು ಸಾಧ್ಯವಾದೀತೋ ಎಂದು ಪ್ರಯತ್ನ ಮಾಧ್ಯಮ ದೊರೆಗಳು ಸ್ವತಃ ಬಿಜೆಪಿ ದುಷ್ಟಕೂಟದ ಸರ್ಕಾರದ 'ಗ್ರಾಹಕರು' ಚುನಾವಣೆ ತಂದ 'ಭಾರತ ಉದಯ' 'ಫೀಲ್ ಗುಡ್' ಜಾಹೀರಾತು ಭರಾಟೆಯ ಅತ್ಯಂತ ಹೆಚ್ಚಿನ ಲಾಭ ಪಡೆದವರು. ಇದಲ್ಲದೆ ಸರ್ಕಾರದ ಆರ್ಥಿಕ ನೀತಿಗಳ ಅತ್ಯಂತ ಹೆಚ್ಚಿನ ಪ್ರಯೋಜನ ಪಡೆದವರು. ಶ್ರೀಸಾಮಾನ್ಯರಿಗೆ ಇದರ ಪರಿಣಾಮ ಏನಾಯಿತು ಎಂಬುದು ಅವರಿಗೆ ಬೇಕಾಗೇ ಇಲ್ಲ. ಅವರಿಗೆ ಬೇಕಾಗಿದ್ದು ಪಕ್ಷಗಳ ಚುನಾವಣಾ ಜಾಹೀರಾತು, ಚುನಾವಣೆಯನ್ನು ಕ್ರಿಕೆಟ್‌ನಂತೆ ಸಮೂಹ-ಸನ್ನಿಯ 'ಆಟ' ಮಾಡಿ ಇನ್ನಷ್ಟು ಜಾಹೀರಾತು ಗಿಟ್ಟಿಸುವುದಕ್ಕಾಗಿ ಬಳಸಿದ್ದರು. ಅವರಿಗೆ ಜನಾಭಿಪ್ರಾಯ ಬಿಂಬಿಸುವ 'ದರ್ದು' ಯಾಕೆ? ಚುನಾವಣಾ ಕಾರ್ಯಕ್ರಮಗಳ ಸಮಯದ ಜಾಹೀರಾತು ಬೆಲೆಯನ್ನು ಆ ಸಮಯದಲ್ಲಿ 5-6 ಪಟ್ಟು ಹೆಚ್ಚಿಸಲಾಯಿತು. ಇದಲ್ಲದೆ ಆಳುವವರ್ಗದ ಪರವಾಗಿರುವ ಸೇವೆಗಳನ್ನು ಜನರ ಮೇಲೆ ಹೊರಿಸುವುದೇ ಅವರ ಮುಖ್ಯ ಉದ್ದೇಶ (ಹಣ ಮಾಡುವುದು ಬಿಟ್ಟರೆ) ಜನರ ನಿಜವಾದ ಕಾಳಜಿಯ ವಿಷಯಗಳನ್ನು ಬಿಟ್ಟು 'ಸೋನಿಯಾ ವಿದೇಶಿ ಮೂಲ' ಮುಂತಾದ ಅಸಂಬದ್ಧ ವಿಚಾರ ಗಳ ಹೆಚ್ಚು ಮಸಾಲೆದಾಲ್ ಅಲ್ಲವೆ? ಇದಲ್ಲದೆ ತಾವೇ ಹರಿಯಬಿಟ್ಟ ಪ್ರಚಾರದ ಭರಾಟೆಯನ್ನು ಅವರೇ ನಂಬಿದರೂ ಅಂತ ಕಾಣ್ತದೆ.

ಈಗಲೂ ಜನಾದೇಶವನ್ನು ನುಂಗಲಾರದೆ, ಉಗಿಯಲಾರದೆ ಒದ್ದಾಡುತ್ತಿದ್ದಾರೆ. ಆದರೂ ಟಿವಿಯ ನಿಲುವು ಜಾಸ್ತಿಯಾದಂತೆ ಚುನಾವಣಾ ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿಯೆಯೂ ಕುಲಷಿತ ಗೊಳಿಸುವ ಪ್ರಯತ್ನ ಮುಂದುವರೆ ಯುತ್ತದೆ. ಸದ್ಯಕ್ಕಂತೂ ಇವರಿಗೆ ಮತದಾರ ಬುದ್ಧಿ ಕಲಿಸಿದ್ದಾನೆ.

ಎಕ್ಸಿಟ್ ಪೋಲು, ಒಪಿನಿಯನ್ ಪೋಲ್ ಈಗ ಭಾರಿ ಉದ್ಯಮ

ಒಂದು ಅಂದಾಜಿನ ಪ್ರಕಾರ ಚುನಾವಣಾ ಸಮಯದಲ್ಲಿ ವಿವಿಧ ಮಾಧ್ಯಮ ಗುಂಪುಗಳು, ರಾಜಕೀಯ ಪಕ್ಷಗಳು, ಕಂಪನಿಗಳು ನಡೆಸಿದ ಚುನಾವಣಾ ಸಮೀಕ್ಷೆ ಭಾರಿ ದೊಡ್ಡ ಉದ್ಯಮವಾಗಿದೆ. ಎಲ್ಲರೂ ಸೇರಿದಂತೆ ಇಂತಹ ಸಮೀಕ್ಷೆಯ ಮೇಲೆ 10 ಕೋಟಿ ರೂ. ವೆಚ್ಚ ಮಾಡಲಾಯಿತು ಎಂದು ಅಂದಾಜು. 1999 ರ ಚುನಾವಣೆ ಸಮಯದಲ್ಲಿ ಇದ್ದದ್ದಕ್ಕಿಂತ ಎರಡು ಪಟ್ಟು ಟಿವಿ ಚಾನೆಲ್‌ಗಳು ಬೆಳೆದಿವೆ.

ಜನಾದೇಶ 2004 ಏನು ಹೇಳುತ್ತದೆ?

ಪಕ್ಷಗಳ ಮತ ಗಳಿಕೆ

ನಮ್ಮ ಚುನಾವಣೆಗಳಲ್ಲಿ ಪಕ್ಷಗಳು ಗಳಿಸಿದ ಸೀಟುಗಳಿಗೆ ಮಾತ್ರ ಸುದ್ದಿಯಾಗುತ್ತವೆ. ಪಕ್ಷಗಳು ಪಡೆದ ಮತಗಳು, ಕಳೆದ ಚುನಾವಣೆಯಿಂದ ಆದ ಹೆಚ್ಚಳ/ ಇಳಿಕೆ ಸುದ್ದಿಯಾಗುವುದಿಲ್ಲ. ಜನ ಏನು ಹೇಳಬಯಸುತ್ತಾರೆ ಎಂದು ಅರ್ಥ ಮಾಡಿಕೊಳ್ಳುವುದಕ್ಕೆ ಪಕ್ಷಗಳ ಮತಗಳಿಕೆ ಮಹತ್ವದ ಒಳನೋಟ ಕೊಡುತ್ತವೆ. ಜತೆಗಿರುವ ಕೋಷ್ಟಕ 2004 ಚುನಾವಣೆಗಳಲ್ಲಿ ಮತಗಳಿಕೆ ಮತ್ತು 1999 ರ ಮತಗಳಿಕೆ ಜತೆ ಹೋಲಿಕೆ ಹೊಂದಿದೆ.

ಮೊದಲ ಸ್ಥಾನ ಪಡೆದ ಬಿಜೆಪಿ ಬೆಂಗಳೂರಲ್ಲಿ ಹಿನ್ನಡೆ ಸಾಧಿಸಿದೆ. ಮತಗಳಿಕೆಯಲ್ಲಿ ಶೇಕಡಾ 2.3 ಮತ ಕಳೆದುಕೊಂಡಿದೆ. ಮಾತ್ರವಲ್ಲ ಮತದಾರರ ಸಂಖ್ಯೆ 1.56 ಲಕ್ಷ ಹೆಚ್ಚಿದ್ದರೂ ಪಡೆದ ಮತಗಳಲ್ಲಿ 20 ಸಾವಿರ ಮತ ಕಳೆದುಕೊಂಡಿದೆ. ಕಾಂಗ್ರೆಸ್ ಶೇಕಡಾ 3.5 ಮತಗಳಿಕೆ ಹೆಚ್ಚಿಸಿಕೊಂಡಿದೆ. ಜನತಾದಳ (ಎಸ್) ಶೇಕಡಾ 2.2 ಮತ ಹೆಚ್ಚಿಸಿಕೊಂಡಿದೆ.

ಕೆಲಸ ಮಾಡದಿದ್ದರೆ ಷೋಕ್!

ಕೆಲಸ ಮಾಡದ ಸರ್ಕಾರಗಳನ್ನು ಮಾತ್ರವಲ್ಲ, ಕೆಲಸ ಮಾಡದ ವಿಧಾನಸಭಾ ಸದಸ್ಯರಿಗೆ ಮತದಾರ ಷೋಕ್ ಕೊಟ್ಟಿದ್ದಾನೆ. ಪುನಃ 187 ವಿಧಾನಸಭಾ ಸದಸ್ಯರಲ್ಲಿ 70 ಜನ ಮಾತ್ರ ಪುನಃ ಆಯ್ಕೆಯಾಗಿದ್ದಾರೆ. ಕಾಂಗ್ರೆಸ್ 139 ತನ್ನ ಹಾಗೂ ಪಕ್ಷಾಂತರವಾದ ಸದಸ್ಯರನ್ನು ಕಣಕ್ಕೆ ಇಳಿಸಿತ್ತು. ಅದರಲ್ಲಿ 42 ಸದಸ್ಯರು ಬಿಟ್ಟು ಉಳಿದವರನ್ನೆಲ್ಲಾ ಮತದಾರ ಸೋಲಿಸಿದ್ದಾನೆ. ಬಿಜೆಪಿಯ 30 ಮಾಜಿ ಎಮ್‌ಎಲ್‌ಎ ಗಳಲ್ಲಿ 19 ಜನ ಪುನರಾಯ್ಕೆ ಯಾಗಿದ್ದಾರೆ. 31 ಕಾಂಗ್ರೆಸ್ ಮಂತ್ರಿಗಳು ಪರಾಭವಗೊಂಡಿದ್ದಾರೆ.

ಪಕ್ಷ	ಸ್ಪರ್ಧಿಸಿದ ಸೀಟುಗಳು	ಗೆದ್ದ ಸೀಟುಗಳ ಸಂಖ್ಯೆ	ಗೆದ್ದ ಸೀಟುಗಳ ಶೇಕಡಾ	ಶೇಕಡಾ ಮತ ಗಳಿಕೆ	1999 ಶೇಕಡಾ ಮತಗಳಿಗೆ	ವ್ಯತ್ಯಾಸ
ಕಾಂಗ್ರೆಸ್	417	145	34.8	26.7	28.3	-1.6
ರಾಷ್ಟ್ರೀಯ ಜನತಾದಳ	41	21	51.2	2.2		
ಡಿಎಂಕೆ	16	16	100.0	1.8		
ಎನ್‌ಸಿ.ಪಿ.	32	9	28.1	1.8	2.3	
ಬಿಜೆಪಿ	364	138	37.9	22.1	23.8	
ಬಿಜು ಜನತಾದಳ	12	11	91.7	1.3		
ಜನತಾದಳ(ಯು)	73	8	11	2.2		
ತೆಲುಗು ದೇಶಂ	33	5	15.2	3.0		
ಅಕಾಲಿದಳ	10	8	80.0	0.9		
ಬಿಜೆಪಿ ಕೂಟ	185	35.31				
ಸಿಪಿಐ(ಎಂ)	69	43	62.3	5.7	5.4	
ಸಿಪಿಐ	34	10	29.4	1.4	1.5	
ಇತರ ಎಡಪಕ್ಷಗಳು	10	9	+1			
ಸಮಾಜವಾದಿ ಪಾರ್ಟಿ	237	36	15.2	4.2	3.8	
ಬಿಎಸ್‌ಪಿ	435	19	4.4	5.3	4.2	
ಇತರರು				17.58		

ಕರ್ನಾಟಕದಲ್ಲಿ ಲೋಕಸಭೆ ಚುನಾವಣೆಯಲ್ಲಿ ಮತಗಳಿಕೆ

- ಕಾಂಗ್ರೆಸ್ ಶೇಕಡಾ 45.4 (1999 ರಲ್ಲಿ) ಮತಗಳಿಕೆಯಿಂದ ಶೇಕಡಾ 36.9 (2004 ರಲ್ಲಿ) ಮತಗಳಿಕೆ ಕುಸಿದಿದೆ. ಅಂದರೆ ಶೇಕಡಾ 9.5 ರಷ್ಟು ಕುಸಿದಿದೆ.
- ಬಿಜೆಪಿ ತನ್ನ ಮತಗಳಿಕೆಯನ್ನು ಶೇಕಡಾ 27.2 ರಿಂದ 34.8 ಅಂದರೆ ಶೇಕಡಾ 7.6 ರಷ್ಟು ಏರಿಸಿಕೊಂಡಿದೆ.
- ಜನತಾದಳ(ಎಸ್) ಕಳೆದ ಬಾರಿಯ ಶೇಕಡಾ 10.5 ಮತಗಳಿಕೆ ಹೆಚ್ಚುಕಡಿಮೆ ಇಮ್ಮಡಿ ಗೊಳಿಸಿ ಶೇಕಡಾ 20.50 ಮತಗಳಿಸಿದೆ.
- ಜನತಾದಳ(ಯು) ಶೇಕಡಾ 13 ರಿಂದ ಶೇಕಡಾ 1.87 ಕ್ಕೆ ಕುಸಿದಿದೆ.
- ಆದರೂ ಜನತಾದಳ(ಎಸ್) ಮತ್ತು ಯು ಒಟ್ಟು ಮತಗಳಿಕೆ 1999 ರಲ್ಲಿ ಶೇಕಡಾ 23.8 ರಿಂದ ಶೇಕಡಾ 22.4 ಕ್ಕೆ ಇಳಿದಿದೆ.

ಬಿಜೆಪಿಗೆ ಬೆಂಗಳೂರಲ್ಲೂ ಹಿನ್ನಡೆ

ಬಿಜೆಪಿಯ ಜಾಹೀರಾತುಗಳು, ಕನಿಷ್ಟ ನಗರ ಪ್ರದೇಶದಲ್ಲಾದರೂ ಪರಿಣಾಮ ಬೀರಬಹುದು ಎಂಬ ನಿರೀಕ್ಷೆ ಇತ್ತು. ಹೆಚ್ಚಿನ ಮಹಾನಗರಗಳಲ್ಲಿ ಬಿಜೆಪಿ ಹಿಂದಿಗಿಂತಲೂ ಹಿನ್ನಡೆದಿದೆ. ಇಡೀ ರಾಜ್ಯದಲ್ಲಿ ವಿಧಾನಸಭೆ ಚುನಾವಣೆಯಲ್ಲಿ

ಅಪರಾಧಿ ಸದಸ್ಯರಲ್ಲಿ ಬಿಜೆಪಿ ಮುಂದೆ

ಈ ಚುನಾವಣೆಯಲ್ಲಿ ಮೊದಲ ಬಾರಿಗೆ ಎಲ್ಲಾ ಅಭ್ಯರ್ಥಿಗಳು ತಮ್ಮ ಆಸ್ತಿ, ಅಪರಾಧ ಗಳ ಬಗ್ಗೆ ಹೇಳಿಕೆ ಕೊಡಬೇಕಾಗಿತ್ತು. ಹಲವು ಸ್ವಯಂಸೇವಾ ಸಂಸ್ಥೆಗಳು ಈ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಿದ್ದವು. 1900 ವಿಧಾನಸಭೆ ಸ್ಪರ್ಧಿಗಳಲ್ಲಿ 211 ಅಪರಾಧದ ಹಿನ್ನೆಲೆಯುಳ್ಳ ವರು ಸ್ಪರ್ಧಿಸಿದ್ದು, 43 ಜನ ಆಯ್ಕೆಯಾಗಿ ದ್ದಾರೆ. ಇದರಲ್ಲಿ ಬಿಜೆಪಿ ಸದಸ್ಯರು ಮುಂದಿದ್ದಾರೆ. 24 ಬಿಜೆಪಿ ಸದಸ್ಯರು ಅಪರಾಧ ಹಿನ್ನೆಲೆಯವರು ಎಂದು ತಿಳಿದು ಬಂದಿದೆ ಎಂಟು ಕಾಂಗ್ರೆಸ್ ಸದಸ್ಯರು, ಹನ್ನೊಂದು ಜನತಾದಳ(ಎಸ್) ಸದಸ್ಯರು ಅಪರಾಧ ಹಿನ್ನೆಲೆಯವರು.

ಮೋದಿ ಸಂತತಿಯ ಕೈಗೆ ರಾಜ್ಯವನ್ನು ಒಪ್ಪಿಸಲಾಗದು. ಅಂದರೆ ಉಳಿದಿರುವುದು ಜಾತ್ಯಾತೀತ ಸರ್ಕಾರ

ರಾಜ್ಯದಲ್ಲಿ ಎಂತಹ ಸರ್ಕಾರ?

ದೇಶದ ಪ್ರಧಾನಿಯಾಗುವುದನ್ನು ನಿರಾಕರಿಸಿದ ಸೋನಿಯಾಗಾಂಧಿಯವರ ನಿರ್ಧಾರದಿಂದ ಉಂಟಾಗಿದ್ದ ಉದ್ವಿಗ್ನತೆ ಆ ಸ್ಥಾನಕ್ಕೆ ಮನಮೋಹನ್‌ಸಿಂಗರನ್ನು ಆಯ್ಕೆ ಮಾಡಿದ ಬಳಿಕ ಇಳಿದಿದೆ. ಸಚಿವಸಂಪುಟ ರಚನೆಯಾಗಿದೆ.

ರಾಷ್ಟ್ರವುಟ್ಟದಲ್ಲಾದ ಈ ಗಂಭೀರ ವಿದ್ಯಮಾನಗಳಿಂದಾಗಿ ಕರ್ನಾಟಕದಲ್ಲಿ ಸರ್ಕಾರ ರಚಿಸುವ ಪ್ರಶ್ನೆ ಸುದ್ದಿಗಳ - ಊಹಾಪೋಹಕ್ಕಷ್ಟೇ ಸೀಮಿತಗೊಂಡಿತ್ತು. ಜಾತ್ಯಾತೀತ ಜನತಾದಳ ಮತ್ತು ಕಾಂಗ್ರೆಸ್‌ನ ರಾಜ್ಯ ನಾಯಕರು ದೆಹಲಿಯಲ್ಲಿ ಬೀಡುಬಿಟ್ಟಿದ್ದರೂ ದಿನಕ್ಕೊಂದು ಹೇಳಿಕೆ ಹೊರಡಿಸುವತ್ತಾ ಕಾದು ನೋಡುವ ಮುಖ್ಯ ಕಾಯಕವಾಗಿಸಿಕೊಂಡಿದ್ದರು.

ಪ್ರಧಾನಿ ಪ್ರಶ್ನೆ ಇತ್ಯರ್ಥಗೊಳ್ಳುತ್ತಿದ್ದಂತೆ ಈಗ ಎಲ್ಲರ ಗಮನ ಕರ್ನಾಟಕದತ್ತ ಹರಿದಿದೆ. ಉದ್ವಿಗ್ನತೆ ಸ್ಥಳಾಂತರವಾಗಿದೆ. ಕರ್ನಾಟಕದಲ್ಲಿ ಸರ್ಕಾರ ರಚಿಸಲು ದೇವೇಗೌಡ ಹಾಗೂ ಸೋನಿಯಾ ಗಾಂಧಿಯವರ ನಡುವೆ ನಡೆದ ಮಾತುಕತೆಗಳು ಈ ಸದ್ಯ ಯಾವುದೇ ನಿರ್ದಿಷ್ಟ ಫಲಿತಾಂಶ ನೀಡದೆ ಪರಿಸ್ಥಿತಿ ಗೊಂದಲಮಯವಾಗಿದೆ, ಮಹಾರಾಷ್ಟ್ರ ಮಾದರಿ ಅನುಸರಿಸಿ ಕಾಂಗ್ರೆಸ್ ಪಕ್ಷಕ್ಕೆ ಮುಖ್ಯಮಂತ್ರಿ ಪದವಿ ಬಿಡಬೇಕೆಂದೂ ಈ ಸರ್ಕಾರದಲ್ಲಿ ಜನತಾದಳ (ಎಸ್)ನ ನಾಯಕರು ಮಂತ್ರಿಗಳಾಗಬಹುದೆಂಬ ಪಟ್ಟು ಇನ್ನಷ್ಟು ಉದ್ವಿಗ್ನತೆಯನ್ನು ಬಿಸಿ ವಾತಾವರಣವನ್ನು ಹುಟ್ಟುಹಾಕಿದೆ. ಕಾಂಗ್ರೆಸ್‌ನ್ನು ಚುನಾವಣೆಯಲ್ಲಿ ಜನತೆ ತಿರಸ್ಕರಿಸಿದ್ದು ತೀರ್ಪು ಜಾತ್ಯಾತೀತ ಸರ್ಕಾರದ ಪರವಾಗಿರುವುದರಿಂದ ಜೆಡಿ(ಎಸ್)ಗೆ ಮುಖ್ಯಮಂತ್ರಿ ಪದವಿ ಬಿಡಬೇಕೆಂಬುದನ್ನು ಕಾಂಗ್ರೆಸ್ ನಾಯಕರು ಪರಿಗಣಿಸುತ್ತಿಲ್ಲ. ಹೀಗಾಗಿ ಅವರದ್ದೇ ಆದ ಸೂತ್ರ ರೂಪಿಸಲು ಸೋಮವಾರ (24 ರಂದು) ಪ್ರತ್ಯೇಕವಾಗಿ ಕಾಂಗ್ರೆಸ್-ಜೆಡಿ(ಎಸ್)ನ ಶಾಸಕಾಂಗ ಸೇರುತ್ತಲಿವೆ. ದೆಹಲಿಯಲ್ಲಾದ ಮಾತುಕತೆಗಳ ಬಳಿಕ ಇಲ್ಲಿ ಸೇರುತ್ತಿರುವುದು ಏನಾದರೂ ಹೊಸ ನಿರ್ಧಾರಗಳಿಗೆ ಎಡೆ ಮಾಡುವುದೇ ಎಂಬುದು ಕುತೂಹಲ.

ಅಧಿಕಾರದಲ್ಲಿದ್ದು ತನ್ನ ದುರಾಡಳಿತ ಜನದ್ರೋಹಿ ನೀತಿಗಳಿಂದ ಜನತೆಯಿಂದ ತಿರಸ್ಕಾರಕ್ಕೆ ಒಳಗಾಗಿರುವ ಕಾಂಗ್ರೆಸ್ ಪಕ್ಷವು ಜನರ ತೀರ್ಪನ್ನು ಮನ್ನಿಸಬೇಕಾದುದು ಕನಿಷ್ಠವಾದ ನೈತಿಕ ಕ್ರಮವಾಗಿದೆ. ಆದರೆ ಮುಖ್ಯಮಂತ್ರಿ ಗಾದಿಗೇರಲು ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್ ಪೈಪೋಟಿಗೆ




ಜನತೆಯ ಆಪೇಕ್ಷೆ ಆಗದಿರಲಿ ಉಪೇಕ್ಷೆ

ಇಳಿದಿದ್ದಾರೆ. ಇದಕ್ಕೂ ನಾಚಿಕೆಗೇಡಿನ ಸಂಗತಿಯೆಂದರೆ ಎಸ್.ಎಂ.ಕೃಷ್ಣರವರೇ ಪುನಃ ಮುಖ್ಯಮಂತ್ರಿಯಾಗಲು ಪ್ರಯತ್ನಿಸುತ್ತಿರುವುದು. ಕುಖ್ಯಾತ ಸಚಿವ ಡಿ.ಕೆ.ಶಿವಕುಮಾರ್ ಮೂಲಕ ಇದನ್ನು ಮಂಡಿಸುತ್ತಿರುವುದು, ಅದಕ್ಕಾಗಿ ಎಲ್ಲಾ

ಈವಾರ ಕರ್ನಾಟಕ ಒಂದು ನೋಟ
ಎಸ್.ವೈ.ಗುರುಶಾಂತ್

ಪ್ರಯತ್ನಕ್ಕೆ ಇಳಿದಿರುವುದು. ಇಂತಹ ಸರ್ಕಾರದಲ್ಲಿ ಜೆಡಿ(ಎಸ್) ಸಹ ಭಾಗಿದಾರನಾಗಿ ಮಂತ್ರಿ ಪದವಿಗಳನ್ನು ಹಂಚಿಕೊಳ್ಳಬೇಕೆಂಬ ಒಂದು ಸೂತ್ರ ಪ್ರಧಾನವಾಗಿ ಕೇಳುತ್ತಿದೆ. ಜೆಡಿ(ಎಸ್) ಪ್ರಮುಖರು ಕೇಂದ್ರದ ಮಂತ್ರಿಯಾಗುವುದು ಇದರಲ್ಲಿ ಸೇರಿದೆಯಂತೆ!

ಸರ್ಕಾರದ ಸ್ವರೂಪದ ಬಗ್ಗೆ ಕೆಲವು ರಾಜ್ಯಗಳ ಮಾದರಿಗಳನ್ನು ಮಂಡಿಸಲಾಗುತ್ತಿದೆ. ಮಹಾರಾಷ್ಟ್ರ ಮಾದರಿ. ಅಂದರೆ ಕಾಂಗ್ರೆಸ್ ಮುಖ್ಯಮಂತ್ರಿ ಇದರಲ್ಲಿ ಜೆಡಿ(ಎಸ್)ಗೆ ಕೆಲವು ಮಂತ್ರಿಗಳು! ಬೇಕಾದಲ್ಲಿ ಉಪ ಮುಖ್ಯಮಂತ್ರಿ ಹುದ್ದೆ. ಇನ್ನೊಂದು ಜಮ್ಮು ಕಾಶ್ಮೀರ ಮಾದರಿ ಜೆಡಿ(ಎಸ್)ಗೆ ಮುಖ್ಯಮಂತ್ರಿ ಪದವಿ ಬಿಟ್ಟು ಕಾಂಗ್ರೆಸ್ ಬೆಂಬಲಿಸುವುದು, ಈ ನಡುವೆ ಕೆಲವರು ಒರಿಸ್ಸಾ ಮಾದರಿ'ಯನ್ನು ತೇಲಿಬಿಟ್ಟಿದ್ದಾರೆ. ಅಂದರೆ ಬಿಜೆಪಿ ಬೆಂಬಲದಿಂದ ಸರ್ಕಾರ ರಚಿಸುವುದು ಇಂತಹ ಯೋಚನೆಗಳು ಜೆಡಿ(ಎಸ್)ನ ಕೆಲ ಶಾಸಕರಲ್ಲಿದೆಯೆಂದು ವರದಿಗಳಿವೆ. ಆದರೆ ಜೆಡಿ(ಎಸ್)ನ ರಾಷ್ಟ್ರ ಅಧ್ಯಕ್ಷರಾದ ಹೆಚ್.ಡಿ.ದೇವೇಗೌಡ, ರಾಜ್ಯ ಅಧ್ಯಕ್ಷರಾದ ಸಿದ್ಧರಾಮಯ್ಯ ಬಿಜೆಪಿ ಜೊತೆಗೆ ಸೇರಲಾಗದು ಎಂದು ಸ್ಪಷ್ಟಪಡಿಸಿದ್ದಾರೆ. ಸಿದ್ಧರಾಮಯ್ಯನವರನ್ನು ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆ ಮಾಡಿದ ಬಳಿಕ ಬಿಜೆಪಿಯೊಂದಿಗೆ ಸೇರದಿರುವ ನಿರ್ಣಯ ಕೈಗೊಂಡಿದ್ದಾರೆ.

ಬಿಜೆಪಿ ಪಕ್ಷವು ಈ ವಿದ್ಯಮಾನಗಳನ್ನು ಗಮನಿಸುತ್ತಿದೆ. ಅದು ಬಿಟ್ಟು ಬೇರೆ ಹಾದಿಯಿಲ್ಲ. ಆದರೆ ಜೆಡಿ(ಎಸ್)ಗೆ ಬೆಂಬಲಿಸಲು ಸಿದ್ಧವೆಂದೂ ಹೇಳಿದೆ. ಈ ಹಂತದಲ್ಲಿ ಬಿಜೆಪಿ 'ಭೂಗತ'ವಾಗಿದ್ದು ಕೊಂಡು ಜನತಾದಳ(ಯು) ಪಕ್ಷದ ನಾಯಕರನ್ನೇ ಮುಂದೆ ಮಾಡಿ ಆಟ ಆಡುತ್ತಿದೆ. ಎಂತಹ ಸ್ಥಿತಿಯಲ್ಲಿಯೂ ಬಿಜೆಪಿ ಸರ್ಕಾರ ರಚಿಸುವುದಾಗಲೀ ಅಥವಾ ಅದರೊಂದಿಗೆ ಕೈಜೋಡಿಸಿ ಇಲ್ಲವೇ ಬೆಂಬಲ ಪಡೆದು ಸರ್ಕಾರ ರಚಿಸುವುದು ಸಂದರ್ಭಸಾಧಕವಾಗುತ್ತಿದೆ. ಕರ್ನಾಟಕವನ್ನು ಮೋದಿ ಸಂತತಿಯ ಕೈಗೆ ಒಪ್ಪಿಸದಂತೆ ಕಾಂಗ್ರೆಸ್-ಜನತಾದಳ(ಎಸ್) ಪಕ್ಷಗಳು ಜಾಗರೂಕತೆ ಹಾಗೂ ಜವಾಬ್ದಾರಿಯಿಂದ ವರ್ತಿಸಬೇಕು. ಆದಷ್ಟು ಬೇಗ ಒಂದು ಇತ್ಯರ್ಥಕ್ಕೆ ಬರಬೇಕು.

ಬಾಬಾಬುಡನ್‌ಗಿರಿಯಲ್ಲಿ ದಾಂಧಲೆಗಿಳಿದ ಶಾಸಕರು

ಇತ್ತ ಕರ್ನಾಟಕದಲ್ಲಿ ಸದ್ಯದ ರಾಜಕೀಯ ಸಂದರ್ಭದ ದುರ್ಲಾಭ ಹೊಡೆದು 79 ಸ್ಥಾನಗಳನ್ನು ಪಡೆದ ಮದದಲ್ಲಿರುವ ಬಿಜೆಪಿ ಮೆಲ್ಲನೆ ತನ್ನ ದುಷ್ಟ ಆಟ ತೆರೆಯುತ್ತಿದೆ. ವಿಶೇಷವಾಗಿ ಚಿಕ್ಕಮಗಳೂರಿನ ಸಂಸತ್ ಸದಸ್ಯರಾಗಿ, ಅಲ್ಲದೇ ಚಿಕ್ಕಮಗಳೂರು ಒಳಗೊಂಡು ಜಿಲ್ಲೆಯಲ್ಲಿ ಶಾಸಕರನ್ನು ಜನ ಬಿಜೆಪಿಗೆ ನೀಡಿದರು.




ತಕ್ಷಣವೇ ಸಂಸತ್ ಸದಸ್ಯರಾದ ಶ್ರೀಕಂಠಪ್ಪ, ಮತ್ತು ಬಜರಂಗದಳದ ಸಿಟಿ ರವಿ ಒಳಗೊಂಡ ಶಾಸಕರ ತಂಡ ನೇರವಾಗಿ ಬಾಬಾಬುಡನ್‌ಗಿರಿಗೆ ತೆರಳಿ, ದರ್ಗಾ-ಪೀಠವಿರುವ ಗುಹೆಗೆ ನುಗ್ಗಿ ಅಲ್ಲಿನ ಆರಾಧನೆಯ ಸಾಂಪ್ರದಾಯಿಕ ವಿಧಿ ವಿಧಾನಗಳನ್ನು ಉಲ್ಲಂಘಿಸಿ, ಮನಬಂದಂತೆ ನಡೆದುಕೊಂಡಿದ್ದಾರೆ. ತಾವು ಜಾತ್ಯಾತೀತ ಸಂವಿಧಾನದ ಶಾಸನಬದ್ಧ ಅಧಿಕಾರ ಕಾಯಬೇಕಾದ ಜವಾಬ್ದಾರಿ ಪ್ರತಿನಿಧಿಗಳು ಎಂದು ತಿಳಿಯದೇ ಬಜರಂಗದಳ ವಿಶ್ವಹಿಂದೂ ಪರಿಷತ್‌ನ ಗೂಂಡಾಗಳಂತೆ ನಡೆದುಕೊಂಡಿರುವುದಾಗಿ ವರದಿಯಾಗಿದೆ. ಈ ಬಳಿಕ ಇವರ ಮೇಲೆ ಪೊಲೀಸರು ಮೊಕದ್ದಮೆ ಹೂಡಿದ್ದಾರೆ. ನ್ಯಾಯಾಲಯದ ಆದೇಶ ಉಲ್ಲಂಘಿಸಿದ್ದಲ್ಲದೆ, ದರ್ಗಾಪೀಠದಲ್ಲಿ ಅಕ್ರಮವಾಗಿ ನಡೆದುಕೊಂಡಿರುವುದಕ್ಕೆ ಈ ಕ್ರಮ ಅಗತ್ಯವಾಗಿದೆ. ಆದರೆ ಅವರ ವಿರುದ್ಧವೇ ಶಾಸನ ಸಭೆಯಲ್ಲಿಯೂ ಹೋರಾಡುವುದಾಗಿ ಎಚ್ಚರಿಸಿದ್ದಾರೆ! ಜನ ಇವರನ್ನು ಗೆಲ್ಲಿಸಿದ್ದು ದಾಂಧಲೆ ಮಾಡಲು ಅಲ್ಲ.

ಜನರ ತೀರ್ಪನ್ನು ಮನಬಂದಂತೆ ತಿರುಚಿ ವ್ಯಾಖ್ಯಾನಿಸುವ ಈ ಖಾವಿ ಪಡೆಗಳಿಗೆ ಪುಂಡಾಟಿಕೆಗೆ ಜನತೆ ಕಡಿವಾಣ ಹಾಕಬೇಕಿದೆ. ಜನ ಈ ಪುಂಡಾಟಿಕೆಗೆ ಮತ ನೀಡಿಲ್ಲ ಬದಲಾಗಿ ಕಾಂಗ್ರೆಸ್‌ನ ಜನದ್ರೋಹಿ ನೀತಿ ಹಾಗೂ ಬೇಜವಾಬ್ದಾರಿತನಕ್ಕೆ ಪರ್ಯಾಯವಾಗಿ ಮತ ನೀಡಿದ್ದಾರೆ ಎಂಬುದನ್ನು ತಿಳಿದು ನಡೆದಷ್ಟು ಒಳ್ಳೆಯದು ಎಂಬ ಎಚ್ಚರ.

ಸಿಂಘಾಲ್‌ನಿಂದ ವಿವರಣೆ : ಆರ್‌ಎಸ್‌ಎಸ್‌ನ ಚಿತಾವಣೆ

ಚುನಾವಣೆ ಫಲಿತಾಂಶಗಳ ಬಳಿಕ ಬಿಜೆಪಿ ನಾಯಕ ಮಣಿಗಳು 'ಭೂಗತ'ರಾಗಿದ್ದಾರೆ. ತಮ್ಮನ್ನು ಹೀಗೇಕೆ ಜನ ಹೀನಾಯ ಸೋಲಿಸಿದರು ಎಂಬುದಕ್ಕೆ, ಜನರ ತೀರ್ಪಿಗೆ ಏನಾದರೂ ಮಾತು ಆಡಬೇಕಿದ್ದವರು, ಆಡುತ್ತಿಲ್ಲ. ತಮ್ಮ ಘೋರ ಅಪರಾಧಗಳಲ್ಲಿ ಒಂದನ್ನಾದರೂ ಒಪ್ಪಿಸಿಕೊಳ್ಳದ, ತಿದ್ದಿಕೊಳ್ಳದ, ಜನತೆಯ ತೀರ್ಪನ್ನು ಗೌರವಿಸದ ಫ್ಯಾಸಿಸ್ಟ್ ತಳಿ ಇವರು ಎಂಬುದನ್ನು ಮತ್ತೆ ಸಾಬೀತು ಮಾಡಿದ್ದಾರೆ. ವಾಜಪೇಯಿ, ಅದ್ವಾನಿಗಳು ಏನೂ ಮಾತನಾಡದೇ ಮೌನಾಗಿದ್ದೇ ಮಸಲತ್ತು ನಡೆಸಿದ್ದಾರೆ. ಅದು ಸೋನಿಯಾ ಪ್ರಧಾನಿಯಾಗುವ ನಿರ್ಧಾರದ ಸುತ್ತಮುತ್ತ ಶುಷ್ಮಾಸ್ವರಾಜ್, ಉಮಾ ಭಾರತಿಯಂತಹ ಅನಾಗರೀಕ ವರ್ತನೆಗಳ ನಡುವೆಯೂ ಗೋಚರವಾದ ಸತ್ಯ ಸಂಗತಿ.

ವಿಷಯ ಹೀಗಿರುವಾಗ ಮೆಲ್ಲನೆ ಈಗ ಸಂಘಪರಿವಾರದ ವೈರಸ್‌ಗಳು ಹೊರಬಂದು ಮಾತನಾಡತೊಡಗಿವೆ. ಜನಾದೇಶವನ್ನು ತಮ್ಮದೇ ಆದ ದುಷ್ಟ ಅಜೆಂಡಾಕ್ಕನುಗುಣವಾಗಿ ವ್ಯಾಖ್ಯಾನಿಸುತ್ತಿವೆ. ವಿಶ್ವಹಿಂದೂ ಪರಿಷತ್‌ನ ಅಶೋಕ ಸಿಂಘಲ್ ಮಹಾಶಯ ಬೆಂಗಳೂರಿನಲ್ಲಿ ಪತ್ರಿಕಾ ಗೋಷ್ಠಿಯಲ್ಲಿಯೂ ಕಾರ್ಯಕ್ರಮಗಳಲ್ಲಿಯೂ 'ಹಿಂದುತ್ವ' ಹಿಂದೂ ಜನರ ಹಿತ ಕೈಬಿಟ್ಟದ್ದೇ ವಾಜಪೇಯಿ ಸರ್ಕಾರದ ಸೋಲಿಗೆ ಕಾರಣವೆಂದು ತನ್ನ ಕೋಮುವಾದಿ ಫ್ಯಾಸಿಸ್ಟ್ ಅಜೆಂಡಾ ಖಾರಿದ್ದಾನೆ. ಇದು ಮುಂಬರುವ ದಿನಗಳಲ್ಲಿ ಆರ್.ಎಸ್.ಎಸ್ ಹಾಗೂ ಬಿಜೆಪಿ ಸಾಗುವ ಅನಾಹುತಕಾರಿ ಹಾದಿಯ ಒಂದು ಸಂಕೇತವಾಗಿದೆ.



ಮೆಲ್ಲನೆ ಹೆಡೆ ಎತ್ತಿರುವ ಸಿಂಘಾಲ್

ಬಸವಧರ್ಮ ಮತ್ತು ಮಾಂಸಾಹಾರದ ಚರ್ಚೆ ಎಷ್ಟು ಅಪ್ರಸ್ತುತ?

ಜಾತಿತಾರತಮ್ಯ, ಲಿಂಗ ಅಸಮಾನತೆ, ಮೌಢ್ಯಗಳ ತಾಂಡವದಂತಹ ಗಂಭೀರ ಪ್ರಶ್ನೆಗಳೆದುರು ಮಾಂಸಾಹಾರದ ಚರ್ಚೆ-ವಿವಾದ ಹುಟ್ಟುಹಾಕುವುದು ಎಷ್ಟು ಪ್ರಸ್ತುತ? ಶರಣರ ಚಿಂತನೆಯ ಚೈತನ್ಯ ಅಸ್ತ್ರವಾಗಬಾರದೇಕೆ?

'ಬಸವಧರ್ಮ' ಮತ್ತು 'ಮಾಂಸಾಹಾರ'ದ ಸುತ್ತ ಕಳೆದ ಮೇ 1 ರಿಂದ ಪರ-ವಿರೋಧದ ಬಿರುಸಿನ ಚರ್ಚೆಗಳು ನಡೆಯುತ್ತಿವೆ. ಇದು ವಿಶೇಷವಾಗಿ ಲಿಂಗಾಯತರಲ್ಲಿ ಅದರಲ್ಲೂ ಲಿಂಗಾಯಿತ ನಾಯಕರು ಯುದ್ಧಕ್ಕೇ ಇಳಿದಂತೆ ಆವೇಶದಿಂದ ಮಾತನಾಡುತ್ತಿದ್ದಾರೆ. ಆದರೆ ಬಹುತೇಕ ಅಸಮತೋಲನದ, ಭಾವನಾತ್ಮಕತೆಯಿಂದ ಆಕ್ರಮಣಶೀಲರಾಗಿಯೂ ಪ್ರತಿಕ್ರಿಯಿಸುತ್ತಿದ್ದಾರೆ.

ಈ ವಾದ ವಿವಾದ ಹೊತ್ತಿಕೊಂಡ ಹಿನ್ನೆಲೆ ಹೀಗಿದೆ. ಮೇ 1 (ವಿಶ್ವ ಕಾರ್ಮಿಕ ದಿನಾಚರಣೆ) ರಂದು ಕೂಡಲಸಂಗಮದಲ್ಲಿ ಚಿತ್ರದುರ್ಗದ ಮುರುಘರಾಜೇಂದ್ರ ಮಠದ ಸ್ವಾಮಿಗಳ ಮುತುವರ್ಜಿಯಿಂದ 'ಬಸವಧರ್ಮ'ದ ಉದ್ಘಾಟನೆಯ ಸಮಾವೇಶ ಜರುಗಿತು. ವಿವಿಧ ಗೋಷ್ಠಿಗಳಲ್ಲಿ ಹಲವಾರು ಪ್ರಗತಿಪರರನ್ನು ಪಾಲ್ಗೊಳಿಸಲಾಗಿತ್ತು. ಎರಡು ದಿನಗಳ ಗೋಷ್ಠಿಗಳ ಬಳಿಕ. ಹಲವಾರು ನಿರ್ಣಯಗಳನ್ನು ಕೈಗೊಳ್ಳಲಾಯಿತು. ಅದರಲ್ಲಿ ಮಾಂಸಾಹಾರವು ಬಸವಧರ್ಮ ಪರಿಪಾಲನೆಗೆ ಅಡ್ಡಿಯಾಗಬಾರದು ಎಂಬುದು ಒಂದು ಇದೇ ಈಗ ವಿವಾದಕ್ಕೆ ಎಡೆ ಮಾಡಿಕೊಟ್ಟಿದೆ. ಬಸವಣ್ಣ ಮುಂತಾದ ಶರಣರು ಹೀಗೆಂದೂ ಹೇಳಲಿಲ್ಲವೆಂದೂ ವೀರಶೈವ ಧರ್ಮದಲ್ಲಿ ಮಾಂಸಾಹಾರಕ್ಕೆ ಜಾಗವಿಲ್ಲವೆಂದು ವಾದಿಸಲಾಗುತ್ತಿದೆ. ಮುರುಘರಾಜೇಂದ್ರ ಸ್ವಾಮಿಗಳ ಹೇಳಿಕೆಯನ್ನು ಅಲ್ಲಿ ಕೈಗೊಂಡ ನಿರ್ಣಯವನ್ನು ಅವರಿಗನ್ನಿಸಿದಂತೆ ವ್ಯಾಖ್ಯಾನಿಸಿ ಮಠದಿಂದ ಹೊರ ಹೋಗಬೇಕೆಂದು ಮರಘುರಾಜೇಂದ್ರರಿಗೆ ದಬಾಯಿಸಲಾಗುತ್ತಿದೆ.


ಆಹಾರ ಪದ್ಧತಿ ಅವರವರ ವೈಯಕ್ತಿಕ ವಿಷಯ. ಒಂದು ಘಟ್ಟದಲ್ಲಿ ಮಾಂಸಾಹಾರ ನಿಷೇಧದಂತಹ ಕಟ್ಟುಪಾಡುಗಳು ಶರಣ ಚಳುವಳಿ - ಶರಣರ ಧರ್ಮ ವಿಸ್ತೃತಗೊಳ್ಳದೆ ಮಿತಿಗೊಳಪಟ್ಟದ್ದು, ಮಾಂಸಾಹಾರ ಸೇವಿಸುವ ಜಾತಿ ಜನಾಂಗಗಳು ಅಲ್ಲಿಂದ ದೂರ ಉಳಿದಿದ್ದು ವಾಸ್ತವ. ಇದಲ್ಲದೆ ಶರಣ ಚಳುವಳಿ ವಿಸ್ತರಣೆ ಲಿಂಗಾಯಿತ ಧರ್ಮದ ಅನುಯಾಯಿಗಳ ಒಳಗೊಳ್ಳುವಿಕೆಗೂ ಕೃಷಿಯ ಬೆಳವಣಿಗೆಗೂ ಸಂಬಂಧವಿರುವುದು ಪ್ರಮುಖ ಅಂಶ. ಇದು ಬೇರೆ ಚರ್ಚೆ. ಬಸವಧರ್ಮ ಎಂಬುದು ಇಂದಿನ ಅಗತ್ಯವೇ ಎಂಬುದು ಮಹತ್ವದ ಪ್ರಶ್ನೆ. ಒಬ್ಬ ವ್ಯಕ್ತಿ ಈ ಧರ್ಮದಲ್ಲಿರಲು ಆತನ ಆಹಾರ ಪದ್ಧತಿಯ ಪರಿಗಣನೆ ಮುಖ್ಯ ಎಂಬುದು ಸರಿಯಲ್ಲ.

ಮುರುಘರಾಜೇಂದ್ರ ಸ್ವಾಮಿಗಳು ಅಸ್ಪೃಶ್ಯರ ಕೇರಿಗಳಿಗೆ ಹೋಗುವ ಮೂಲಕ, ಕೀಳುಜಾತಿಯಿಂದ ಮಠಾಧೀಶರೊಬ್ಬರನ್ನು ನೇಮಿಸುವ ಮೂಲಕ ಹಿಂದುತ್ವದ ಕೋಮುವಾದೀ ಶಕ್ತಿಗಳ ವಿರುದ್ಧ ನಡೆವ ಹೋರಾಟದಲ್ಲಿ ದೃಢವಾಗಿ ನಿಂತವರು,

ಪುಟ 4 ಕ್ಕೆ

ಅಪ್ರತಿಮ ಕ್ರಾಂತಿಕಾರಿಗೆ ಹೃದಯ ಸ್ಪರ್ಶಿ ವಿದಾಯ

ಲಾಲ್ ಸಲಾಂ ಕಾಮ್ರೇಡ್ ಇ.ಕೆ.ನಾಯನಾರ್



ಜನಸಮೂಹದ ಈ ವೀರ ನಾಯಕನಿಗೆ ಇಡೀ ಜನತೆ ಮನದಾಳದಿಂದ ವಿದಾಯ ಸಲ್ಲಿಸಿತು. ತಿರುವನಂತಪುರದಿಂದ ಹುಟ್ಟೂರು ಕಣ್ಣೂರಿನವರೆಗೂ ಒಂದಿಂಚೂ ಜಾಗ ಬಿಡದೆ ನಡೆದ ಜನ ಸಮೂಹವೇ ನಾಯನಾರ್‌ರವರ ಮೇಲಿನ ಪ್ರೀತಿಗೆ ಸಾಕ್ಷಿ.

ಎಳೆಯ ವಯಸ್ಸಿನಲ್ಲಿಯೇ ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿ ಮೊರಾಳ ಮತ್ತು ಕಯ್ಯೂರು ರೈತ ಹೋರಾಟದಲ್ಲಿ ಪಾಲ್ಗೊಂಡು ಅಪ್ರತಿಮ ಕ್ರಾಂತಿಕಾರಿಯಾಗಿದ್ದ ಕಾಮ್ರೇಡ್ ಎರಂಬಳ್ಳಿ ಕೃಷ್ಣನ್ ನಯನಾರ್ ಇನ್ನಿಲ್ಲ. ಕೆಲಕಾಲದಿಂದ ಅಸ್ವಸ್ಥೆತೆಯಿಂದ ಬಳಲುತ್ತಿದ್ದ ಅವರು ನವದೆಹಲಿಯ ಅಖಿಲಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ(AIIMS) ಯಲ್ಲಿ ಮೇ 19 ರಂದು ತಮ್ಮ 85ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು.

ಶ್ರದ್ಧಾಂಜಲಿ

ಅವರ ನಿಧನದ ಸುದ್ದಿ ತಿಳಿಯುತ್ತಿದ್ದಂತೆ ದೇಶದೆಲ್ಲೆಡೆಯಿಂದ ಶೋಕ ಸಂದೇಶಗಳು ಬರತೊಡಗಿದ್ದು ನವದೆಹಲಿಯಲ್ಲಿ ರಾಷ್ಟ್ರಪತಿ ಅಬ್ದುಲ್ ಕಲಾಂ, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ ಕಿಶನ್ ಸಿಂಗ್ ಸುರ್ಜಿತ್, ಪಾಲಿಟ್ ಬ್ಯೂರೋ ಸದಸ್ಯ ಹಾಗೂ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಜ್ಯೋತಿ ಬಸು ಮೊದಲಾದ ಮುಖಂಡರು ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛವನ್ನಿರಿಸಿ ಸಂತಾಪ ಸಲ್ಲಿಸಿದರು.


ದೆಹಲಿಯಿಂದ ವಿಮಾನದ ಮೂಲಕ ಕೇರಳದ ರಾಜಧಾನಿ ತಿರುವನಂತಪುರಕ್ಕೆ ಪಾರ್ಥಿವ ಶರೀರವನ್ನು ತರಲಾಗಿದ್ದು ಪಾಲಿಟ್ ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರತ್, ಎಸ್.ರಾಮಚಂದ್ರನ್ ಪಿಳ್ಳೆ ಜತೆಗೂಡಿದ್ದರು.

ತಿರುವನಂತಪುರದ ವಿಮಾನ ನಿಲ್ದಾಣದಲ್ಲಿ ಪಾರ್ಥಿವ ಶರೀರವನ್ನು ತರುತ್ತಿದ್ದಂತೆಯೇ ಅಲ್ಲಿ ನೆರೆದಿದ್ದ ಅಸಂಖ್ಯಾತ ಸಿಪಿಐ(ಎಂ) ಮುಖಂಡರು, ಕಾರ್ಯಕರ್ತರು ಹಾಗೂ ಹಿತೈಷಿಗಳು ಅಶ್ರುತರ್ಪಣ ಸಲ್ಲಿಸಿದರು. ಕಾಮ್ರೇಡ್ ನಯನಾರ್ ಲಾಲ್ ಸಲಾಂ ಘೋಷಣೆ ಮುಗಿಲು ಮುಟ್ಟಿತು. ಅಲ್ಲಿಂದ ಪಾರ್ಥಿವ ಶರೀರವನ್ನು ಸಿಪಿಐ(ಎಂ)ನ ಪ್ರಧಾನ ಕಾರ್ಯಾಲಯ ಎ.ಕೆ.ಜಿ ಸೆಂಟರ್ ಗೆ ಪುಷ್ಪಗಳಿಂದ ಅಲಂಕೃತವಾಗಿದ್ದ ಬಸ್ಸಿನಲ್ಲಿ ತರಲಾಯಿತು.



ಕಂಬನಿ ಹೇಳತೀರದು

ದಾರಿಯುದ್ದಕ್ಕೂ ಸುರಿಯುತ್ತಿದ್ದ ಮಳೆಯನ್ನು ಲೆಕ್ಕಿಸದೆ ಅಗಲಿದ ವೀರನಿಗೆ ಅಂತಿಮ ನಮನ ಸಲ್ಲಿಸಿದರು. ಜನರ ಕಂಬನಿ ಹೇಳ ತೀರದು. ಇ.ಕೆ.ನಾಯನಾರ್ ಅವರ ಪಾರ್ಥಿವ ಶರೀರವನ್ನು ಎ.ಕೆ.ಜಿ.ಕೇಂದ್ರದಲ್ಲಿ ಇಡುತ್ತಲೆ ಪಕ್ಷದ ರಾಜ್ಯ ಕಾರ್ಯದರ್ಶಿ ಪಿನರಾಯಿ ವಿಜಯನ್ ಮತ್ತು ಹಿರಿಯ ಮುಖಂಡ ವಿ.ಎಸ್. ಅಚ್ಯುತಾನಂದನ್ ಹೊಸ ಕೆಂಪು ಬಾವುಟವನ್ನು ಹೊದಿಸಿ ಗೌರವಿಸಿದರು. ಪಾಲಿಟ್ ಬ್ಯೂರೋ ಸದಸ್ಯರಾದ ಇ.ಬಾಲಾನಂದನ್, ಪಾಲಿಟ್‌ಬ್ಯೂರೋ ಸದಸ್ಯ ಹಾಗೂ ಪಶ್ಚಿಮ ಬಂಗಾಳದ ಎಡರಂಗದ ಅಧ್ಯಕ್ಷ ಬಿಮನ್ ಬೋಸ್ ಮೊದಲಾದವರು ತಮ್ಮ ಗೌರವನ್ನು ಸಲ್ಲಿಸಿದ ಬಳಿಕ ಅಸಂಖ್ಯಾತ ಜನಸಮೂಹ ನಯನಾರ್ ಅವರ ಅಂತಿಮದರ್ಶನ ಪಡೆಯಲು ಮುನ್ನುಗ್ಗಿದಾಗ ಒಂದು ಹಂತದಲ್ಲಿ ನೂಕುನುಗ್ಗಲಿಗೆ ಕಾರಣವಾಗಿತ್ತು.



'ನಿಮ್ಮ ಪ್ರಿಯರಾದ ಜನಸಮೂಹವನ್ನೊಮ್ಮೆ ನೋಡಿ' ಎಂದು ... ಕುಟುಂಬ. ಪತ್ನಿ ಶಾರದಾ ಟೀಚರ್ ಮತ್ತು

ನಯನಾರ್ ಅವರ ಪತ್ನಿ ಶಾರದಾ ಟೀಚರ್ ತನ್ನ ದುಃಖವನ್ನು ತಡೆಯಲಾಗದೆ ಶವಪೆಟ್ಟಿಗೆಯ ಮೇಲೆ ಎರಗುತ್ತಾ 'ನಿಮಗೆ ಪ್ರಿಯರಾಗಿದ್ದ ಜನ ಸಮೂಹವನ್ನೊಮ್ಮೆ ನೋಡು' ಎಂದು ಅಳುತ್ತಿದ್ದದ್ದು ಮನ ಕಲುಕುವಂತಿತ್ತು.

11 ವರ್ಷಗಳ ಕಾಲ ಮುಖ್ಯ ಮಂತ್ರಿಯಾಗಿದ್ದ ರಾಜ್ಯ ಸಚಿವಾಲಯದಲ್ಲಿ ನಯನಾರ್ ಅವರ ಪಾರ್ಥಿವ ಶರೀರವನ್ನು 2 ಗಂಟೆಗಳ ಕಾಲ ಇಡಲಾಗಿದ್ದು ರಾಜ್ಯಪಾಲ ಟಿ.ಎನ್.ಚತುರ್ವೇದಿ ಹಾಗೂ ಮುಖ್ಯಮಂತ್ರಿ ಎ.ಕೆ.ಆಂಟೋನಿಯವರೆ ಪರವಾಗಿ ಪುಷ್ಪಗುಚ್ಛವನ್ನು ಇರಿಸಿ ಗೌರವಿಸಲಾಯಿತು.

ಹುಟ್ಟೂರಿಗೆ..

ತಿರುವನಂತಪುರದಿಂದ ಕಣ್ಣೂರಿಗೆ : 20ನೇ ತಾರೀಖು ಮಧ್ಯಾಹ್ನ 2.30 ಕ್ಕೆ ಪಾರ್ಥಿವ ಶರೀರವನ್ನು ಮೋಟಾರು ವಾಹನಗಳ ಮೆರವಣಿಗೆಗಳ ಮೂಲಕ ಕಣ್ಣೂರಿಗೆ ಕೊಂಡೊಯ್ಯಲಾಗಿದ್ದು, ದಾರಿಯುದ್ದಕ್ಕೂ ಪ್ರಮುಖ ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ಜನರು ಅಂತಿಮ ದರ್ಶನ ಪಡೆದರು. ನಯನಾರ್ ಅವರು ಪಕ್ಷದ ಜಿಲ್ಲಾ ಕಾರ್ಯದರ್ಶಿಯಾಗಿ ದುಡಿದಿದ್ದ ಕ್ಯಾಲಿಕಟ್ (ಕೋಝಿಕೋಡ್) ನಲ್ಲಿ ಅಸಂಖ್ಯಾತ ಜನರು ತಮ್ಮ ಗೌರವವನ್ನು ಸಲ್ಲಿಸಿದರು. 21 ರಂದು ಸಂಜೆ 5.15 ಕ್ಕೆ ಕಣ್ಣೂರಿಗೆ ತಲುಪಿದ ಜನಪ್ರಿಯ ನಾಯಕನ ಪಾರ್ಥಿವ ಶರೀರವನ್ನು ಕಲ್ಯಸೇರಿಯಲ್ಲಿರುವ ಅವರ ಮನೆಗೆ ಕೊಂಡೊಯ್ಯಲಾಯಿತು. ನಾಯನಾರ್ ಅವರ ಬಂಧುಗಳು ಮತ್ತು ಆಪ್ತರು ಅಂತಿಮ ನಮನ ಸಲ್ಲಿಸಿದ ಬಳಿಕ ನಗರದ ಪುರಭವನದಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಗಿತ್ತು.



ಗಣ್ಯರಿಂದ ಶ್ರದ್ಧಾಂಜಲಿ

ಅಲ್ಲಿ ರಾಜ್ಯಪಾಲ ಟಿ.ಎನ್.ಚತುರ್ವೇದಿ ಹಣಕಾಸು ಸಚಿವ ಶಂಕರ ನಾರಾಯಣನ್ ಮತ್ತಿತರ ಸಚಿವರು ಸಿಪಿಐ ಮುಖಂಡ ಹಾಗೂ ಸಂಸತ್ ಸದಸ್ಯ ಪಿ.ಕೆ.ವಾಸುದೇವನ್ ನಾಯರ್ ಜನತಾದಳ(ಎಸ್) ಮುಖಂಡ ಹಾಗೂ ಸಂಸತ್ ಸದಸ್ಯ ಎಂ.ಪಿ. ವೀರೇಂದ್ರ ಕುಮಾರ್ ಮೊದಲಾದ ಮುಖಂಡರಲ್ಲದೆ, ಹಳ್ಳಿ, ಪೇಟೆಗಳಿಂದ ಬಂದಿದ್ದ ಅಸಂಖ್ಯಾತ ಜನರು ತಮ್ಮ ಅಂತಿಮ ಗೌರವ ಸಲ್ಲಿಸಿದರು.

ರಾತ್ರಿ 10.45 ಕ್ಕೆ ನಯನಾರ್ ಅವರ ಹಿರಿಯ ಮಗ ಕೃಷ್ಣಕುಮಾರ್ ಅಗ್ನಿ ಸ್ಪರ್ಶ ಮಾಡುವುದರ ಮೂಲಕ ಕೇರಳ ರಾಜ್ಯ ಮತ್ತು ದೇಶದ ಇತರೆಡೆಗಳಲ್ಲಿ ಕಮ್ಯುನಿಸ್ಟ್ ಚಳುವಳಿಯ ಅಪ್ರತಿಮ ವೀರ ಇ.ಕೆ.ನಾಯನಾರ್ ನಮ್ಮನ್ನೆಲ್ಲ ಅಗಲಿ ದೂರ ಹೋದರು. ಕಣ್ಣೂರು ಜಿಲ್ಲೆಯ ಸಮುದ್ರ ತೀರದ ಪಯ್ಯಂಬಲಂನಲ್ಲಿ ಎ.ಕೆ.ಗೋಪಾಲನ್ ಚಡಯಾನ್ ಗೋವಿಂದನ್ ಮೊದಲಾದ ಕಮ್ಯುನಿಸ್ಟ್ ವೀರರ ಸಮಾಧಿಯ ಪಕ್ಕದಲ್ಲೇ ಇ.ಕೆ.ನಾಯನಾರ್ ಅವರ ಪಾರ್ಥಿವ ಶರೀರ ಚಿತಾಭಸ್ಮವಾಯಿತು. ಆದರೆ ಇ.ಕೆ.ನಾಯನಾರ್ ಮಾತ್ರ ಎಲ್ಲರ ಹೃದಯದಲ್ಲಿ ಅಚ್ಚಳಿಯದೆ ಉಳಿದರು.

· ವಿವರ ಲೇಖನಗಳು ಪುಟ 6-7

ಕರ್ನಾಟಕದ ಜನತೆಗೆ ಸಿಪಿಐ(ಎಂ) ಅಭಿನಂದನೆ

ಜಾತ್ಯತೀತ ಸರ್ಕಾರದ ರಚನೆಗೆ ಜನತೆಯ ಅಪೇಕ್ಷೆ ಜನತಾ ದಳ(ಎಸ್) ಹಾಗೂ ಕಾಂಗ್ರೆಸ್ ಪಕ್ಷಗಳಿಗೆ ಆಗ್ರಹ

13ನೇ ವಿಧಾನಸಭೆಗಾಗಿ ನಡೆದ ಚುನಾವಣೆಯಲ್ಲಿ ಜಾಗತೀಕರಣ, ಖಾಸಗೀಕರಣ ಪರ ನೀತಿಗಳನ್ನು ಸ್ಪಷ್ಟವಾಗಿ ತಿರಸ್ಕರಿಸಿದ ರಾಜ್ಯದ ಜನತೆಯನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಅಭಿನಂದಿಸಿದೆ.

ಕಾಂಗ್ರೆಸ್ ಸರ್ಕಾರವು ಕಳೆದ ನಾಲ್ಕುವರೆ ವರ್ಷಗಳಿಂದ ಅನುಸರಿಸುತ್ತಾ ಬಂದ ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳಿಂದಾಗಿ ರಾಜ್ಯದ ರೈತರು, ಕಾರ್ಮಿಕರು ಮತ್ತು ಇತರ ಜನ ವಿಭಾಗಗಳು ತೀವ್ರ ಸಂಕಷ್ಟಗಳಿಗೆ ಒಳಗಾಗಿದ್ದರು. ಅದರ ಫಲವಾಗಿ ಜನತೆ ಕಾಂಗ್ರೆಸ್ ಪಕ್ಷದ ವಿರುದ್ಧ ತೀರ್ಪು ನೀಡಿದೆ. ಅದೇ ಸಮಯದಲ್ಲಿ ರಾಜ್ಯವನ್ನು ಇನ್ನೊಂದು ಗುಜರಾತ್ ಮಾಡಲು ಹೊರಟಿದ್ದ ಕೋಮುವಾದಿ ಬಿಜೆಪಿಗೆ ಜನತೆ ರಾಜ್ಯದಲ್ಲಿ ಆಡಳಿತ ನಡೆಸುವ ಅವಕಾಶವನ್ನು ನಿರಾಕರಿಸಿದ್ದಾರೆ. ಇದರಿಂದಾಗಿ ರಾಜ್ಯದಲ್ಲಿ ಒಂದು ಜಾತ್ಯಾತೀತ ಸರ್ಕಾರವನ್ನು ರಚಿಸುವ ಜನತೆಯ ಅಪೇಕ್ಷೆ ಸ್ಪಷ್ಟವಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಜನತಾದಳ(ಎಸ್) ಮತ್ತು ಕಾಂಗ್ರೆಸ್ ಪಕ್ಷಗಳು ರಾಜ್ಯದಲ್ಲಿ ಒಂದು ಜಾತ್ಯಾತೀತ ಸರ್ಕಾರ ರಚಿಸಲು ಮುಂದಾಗಬೇಕೆಂದು ಸಿಪಿಐ(ಎಂ) ಆಗ್ರಹಿಸುತ್ತದೆ.

ಇದೇ ಸಮಯದಲ್ಲಿ ಕೋಲಾರ ಜಿಲ್ಲೆಯ ಬಾಗೇಪಲ್ಲಿ ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿ ಜಿ.ವಿ.ಶ್ರೀರಾಮರೆಡ್ಡಿಯವರನ್ನು 11 ಸಾವಿರ ಮತಗಳ ಅಂತರದಿಂದ ಗೆಲ್ಲಿಸಿದ ಕ್ಷೇತ್ರದ ಜನತೆಯನ್ನೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಅಭಿನಂದಿಸುತ್ತದೆ.

........ಮಾಂಸಾಹಾರದ ಚರ್ಚೆ ಅಪ್ರಸ್ತುತ

ಪುಟ 3 ರಿಂದ

ಆ ಹೋರಾಟಕ್ಕೆ ಶರಣರ ಚಿಂತನೆಗಳಿಂದಲೂ ಸ್ಫೂರ್ತಿ ಪಡೆದ ಪ್ರಗತಿಪರರು. ಅವರ ಪ್ರಗತಿಪರ ತೀವ್ರತೆ ಹಾಗೂ ಗುರುತಿಸಿಕೊಳ್ಳುವ ಹಂಬಲ ನೋಡಿದಾಗ ಸಾಮಾಜಿಕವಾಗಿ ಯಥಾಸ್ಥಿತಿಯನ್ನು ಕಲಕುವ ಇಚ್ಛೆ ಸ್ವಾಮಿಯವರಿಗಿದೆ ಎನಿಸುತ್ತದೆ.

ಆದರೆ ಕರ್ನಾಟಕದ-ದೇಶದ ಇಂದಿನ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದಲ್ಲಿ ಶರಣಧರ್ಮ ತತ್ವ ಅನುಸರಿಸುವವರು ಎತ್ತಿಕೊಳ್ಳಬೇಕಾದ ಪ್ರಮುಖ ಪ್ರಶ್ನೆಗಳೇನು? ಅದು ಖಂಡಿತವಾಗಿಯೂ ಮಾಂಸಾಹಾರ- ಸಸ್ಯಾಹಾರದ ಪ್ರಶ್ನೆಗಳಂತೂ ಅಲ್ಲ.

ಪ್ರಮುಖವಾಗಿ ಜಾತಿ ವ್ಯವಸ್ಥೆ - ಅದರ ತಾರತಮ್ಯಗಳ ವಿರುದ್ಧ ಅಸ್ಪೃಶ್ಯತೆ, ಜಾತಿವಿನಾಶದ, ಜಾತಿಗಳ ನಡುವಿನ ಸಮಾನತೆಯ ಸಲುವಾಗಿ, ಸ್ತ್ರೀಯರ ಶೋಷಣೆ, ಅವರ ಮೇಲಿನ ದಬ್ಬಾಳಿಕೆಗೆ ವಿರೋಧವಾಗಿ, ಸ್ತ್ರೀ ಪುರುಷರ ಸಮಾನತೆಗಾಗಿ, ದೇವಾಲಯ ಕಟ್ಟುವೆವೆಂದು - ಸಂಪನ್ಮೂಲ ಸುರಿಯುವುದರ ವಿರುದ್ಧ - ಮೂಢನಂಬಿಕೆ, ಕಂದಾಚಾರಗಳ ವಿರುದ್ಧ ದಣಿವರಿಯದ ಸಮರ ಹೂಡಬೇಕಾದುದೇ ಇಂದಿನ ಅಗತ್ಯವಾಗಿದೆ. ಈ ಚಳುವಳಿಯಲ್ಲಿ ಎಲ್ಲರನ್ನೂ ವಿಶಾಲವಾಗಿ ಸಂಘಟಿಸಿ ಸಂಘರ್ಷಕ್ಕೆ ಇಳಿಯಬೇಕಾಗಿದೆ. ಇದಕ್ಕೆ ಶರಣರ ವಿಚಾರಧಾರೆ ಸ್ಫೂರ್ತಿಯಾಗಿ ತೆಗೆದುಕೊಳ್ಳಬಹುದು, ಆಧಾರವಾಗಿಟ್ಟುಕೊಳ್ಳಬಹುದು. ಇವೇ ಪ್ರಸ್ತುತವಾದ ವಿಷಯಗಳು. ಆದರೆ ಇಂತಹ ಪ್ರಸ್ತುತ ಸಂಗತಿಗಳನ್ನು ಬಿಟ್ಟು ಮಾಂಸಾಹಾರದ ಸುತ್ತ ಚರ್ಚೆ ನಡೆಸುತ್ತಿರುವುದು ಅಪ್ರಸ್ತುತ ಮಾತ್ರವಲ್ಲ ಅಗತ್ಯವಾದ ವಿಷಯಗಳನ್ನು ಗೌಣಗೊಳಿಸಿ, ಮರೆಮಾಚುವ ಸಂಗತಿಯಾಗಿದೆ.

ಆದ್ದರಿಂದ ಈ ಪ್ರಶ್ನೆಗಳತ್ತ ಗಮನಹರಿಸುವುದು ಅತ್ಯಗತ್ಯ. ಅಪ್ರಸ್ತುತ ಅಮುಖ್ಯ ವಿಷಯಗಳನ್ನು ಎತ್ತಿರುವುದು ತಪ್ಪು ಹಾಗೇ ಇದನ್ನೇ ಬಳಸಿ ಅಂತಹ ವಿಚಾರಗಳನ್ನೇ ವಿರೋಧಿಸುವುದು ತಪ್ಪು. ಶರಣರ ಚಲನಶೀಲ ವಿಚಾರಗಳನ್ನು ಮರೆ ಮಾಚಿ ಅಥವಾ ವಿಕೃತವಾಗಿ ವ್ಯಾಖ್ಯಾನಿಸಿ ಧಾರ್ಮಿಕ ಮೂಲಭೂತವಾದಿತನವನ್ನು ಬೆಳೆಸುವ ಶಕ್ತಿಗಳ ಬಗ್ಗೆ ಎಚ್ಚವಿರಬೇಕಿದೆ. ಆದರಲ್ಲೂ ಹಿಂದುತ್ವದ ಕೋಮುವಾದಿ ಶಕ್ತಿಗಳು ಇದನ್ನು ಬಳಸಿ ಮುರುಘಾಮಠದ ಸ್ವಾಮಿಯವರ ಪ್ರಗತಿಪರ ಚಿಂತನೆ - ಕಾರ್ಯಗಳನ್ನು ಹೊಸಕಿ ಹಾಕುವ ಯತ್ನಗಳ ಬಗ್ಗೆಯೂ.

ಕಳೆದ ವಾರ ಹಲವಾರು ನಾಟಕೀಯ ಬೆಳವಣಿಗೆಗಳನ್ನು ಕಂಡಿತು. ನೆಲಕಚ್ಚಿದ ಬಿಜೆಪಿ ಮೀಸೆ ಮಣ್ಣಾಗಲಿಲ್ಲವೆಂದು ತೋರಿಸಿಕೊಳ್ಳುವ ಹತಾಶ ಯತ್ನಗಳು, ಸೋನಿಯಾರವರ ಪ್ರಧಾನಿ ಪದವಿಯ ತ್ಯಾಗ, ಮನಮೋಹನ ಸಿಂಗ್‌ರ ಆಯ್ಕೆ, ಷೇರು ಮಾರುಕಟ್ಟೆಯಲ್ಲಿ ಅಭದ್ರತೆ ಹುಟ್ಟುಹಾಕುವ ಯತ್ನಗಳು.... ಈಗ ಕೇಂದ್ರದಲ್ಲಿ ಜಾತ್ಯತೀತ ಹೊಸ ಸರ್ಕಾರದ ರಚನೆಯಾಗಿದೆ. ಜನರ ನಿರೀಕ್ಷೆಗಳೇನು? ವಿದ್ಯಮಾನಗಳತ್ತ ಒಂದು ಸ್ಥೂಲ ಅವಲೋಕನ...

ಜಾತ್ಯತೀತ ಸರ್ಕಾರದ ಸ್ಥಾಪನೆ : ಅಂತ್ಯಗೊಂಡ ನಾಟಕೀಯ ವಾರ


ಕಳೆದ ವಾರ, ನಾಟಕೀಯ ಬೆಳವಣಿಗೆಗಳನ್ನು ಕಂಡಿದೆ. ಈ ಪತ್ರಿಕೆ ನಿಮ್ಮ ಕೈ ಸೇರುವ ವೇಳೆಗೆ, ಡಾ.ಮನಮೋಹನ್ ಸಿಂಗ್ ನೇತೃತ್ವದ ಪ್ರಜಾಸತ್ತಾತ್ಮಕ ಪರ್ಯಾಯ ಸರ್ಕಾರವೊಂದು ಅಧಿಕಾರಕ್ಕೆ ಬಂದಿರುತ್ತದೆ. ಸೋನಿಯಾ ಗಾಂಧಿಯವರು ಪ್ರಧಾನಿ ಹುದ್ದೆಯನ್ನು ನಿರಾಕರಿಸಿದ್ದೇ ಈ ವಾರದ ವಿಶೇಷ. ಇರಲಿ, ಆ ವಿಷಯಕ್ಕೆ ನಂತರ ಬರೋಣ.

ಆರ್‌ಎಸ್‌ಎಸ್/ಭಾಜಪಗಳ ಅಸಭ್ಯ ಆಟಾಟೋಪವೂ ಸಹ ಈ ವಾರ ವ್ಯಕ್ತಗೊಂಡಿತು. ನಿರ್ಣಾಯಕವಾದ ಸೋಲನ್ನು ಅನುಭವಿಸಿದ ನಂತರವೂ, ಅವರು 'ವಿದೇಶೀ' ಪ್ರಶ್ನೆಯನ್ನೇ ಮುಂದಿಟ್ಟುಕೊಂಡು ಹೋರಾಟವೊಂದನ್ನು ಬೆಳೆಸಲು ಪ್ರಯತ್ನಿಸಿದರು. 'ಪ್ರಮಾಣ ವಚನ ಸ್ವೀಕಾರ' ಸಮಾರಂಭವನ್ನು ಬಹಿಷ್ಕರಿಸುವ ನಿರ್ಧಾರವನ್ನೂ ಎನ್‌ಡಿಎ ಪ್ರಕಟಿಸಿತು. ಪಕ್ಷದೊಳಗಿನ ತಮ್ಮ ಆಂತರಿಕ ಸ್ಥಾನಮಾನಗಳನ್ನು ಬೆಳೆಸಿಕೊಳ್ಳುವ ಸಲುವಾಗಿ, ಭಾಜಪದ ಕೆಲವು ನಾಯಕರು ಉಮಾಭಾರತಿಯವರಂತೆ ರಾಜೀನಾಮೆ ನೀಡುವ ಬೆದರಿಕೆಯೊಡ್ಡಿದರು ಅಥವಾ ಸುಷ್ಮಾ ಸ್ವರಾಜ್‌ರವರಂತೆ ತಲೆಯನ್ನು ಬೋಳಿಸಿಕೊಂಡು ಸನ್ಯಾಸದ ಜೀವನ ನಡೆಸುವುದಾಗಿ ಹೆದರಿಸಿದರು.

'ವಿದೇಶೀ' ಪ್ರಶ್ನೆಯನ್ನೆತ್ತಿಕೊಂಡು ಭಾವನಾತ್ಮಕ ಪ್ರಚೋದನೆಗಳನ್ನು ಇನ್ನಷ್ಟು ಉಲ್ಬಣಗೊಳಿಸುವ ಪ್ರಯತ್ನದಲ್ಲಿ, ಆರ್‌ಎಸ್‌ಎಸ್‌ನ ಫ್ಯಾಸಿಸ್ಟ್ ಮನೋಭಾವ ಉತ್ಕಟವಾಗಿ ವ್ಯಕ್ತಗೊಂಡಿದೆ. ಅಂತಹ ಯತ್ನಗಳಿಗೆ ಜನರ ಪ್ರತಿಕ್ರಿಯೆ ನೀರಸವಾಗಿತ್ತು ಎಂಬುದು ಬೇರೆಯೇ ವಿಚಾರ.

ಸಂಸದೀಯ ಪ್ರಜಾಸತ್ತೆಯಲ್ಲಿ ವಿರೋಧ ಪಕ್ಷಗಳು ರಚನಾತ್ಮಕ ಪಾತ್ರ ವಹಿಸಬೇಕೆಂದು ತೀರಾ ಇತ್ತೀಚಿನವರೆಗೂ ಬಡಬಡಿಸುತ್ತಿದ್ದ ವಾಜಪೇಯಿಯವರ ಇಬ್ಬಂದಿತನವೂ ವಾಕರಿಕೆ ಬರಿಸುವಷ್ಟು ಬಟ್ಟಬಯಲಾಗಿದೆ. ರಚನಾತ್ಮಕ ಪಾತ್ರದಬಗ್ಗೆ ದೇಶದ ಜನತೆಗೆ ಆವೇಶಪೂರಿತ ಭೋದನೆಗಳನ್ನು ನೀಡುವುದರಲ್ಲಿ ವಾಜಪೇಯಿಯವರು ಹಿಂದೆ ಬಿದ್ದಿರಲಿಲ್ಲ. ಚುನಾವಣೆಯಲ್ಲಿ ನೆಲೆ ಕಳೆದುಕೊಂಡ ಬಳಿಕ, ಪುನಃ ಅಲ್ಪಸ್ವಲ್ಪ ಪ್ರತಿಷ್ಠೆಯನ್ನು ಗಳಿಸಿಕೊಳ್ಳುವ ನಿಟ್ಟಿನಲ್ಲಿ ಅವರು ನಡೆಸಿದ ಪ್ರಚಾರ, ಒಂದು ದುರ್ಬಲವಾದ ಪ್ರಯತ್ನವೇ ಹೊರತು ಬೇರೇನಲ್ಲ.

ಇಂತಹುದೇ ಅಬ್ಬರದ ಪ್ರಯತ್ನ ಆರ್ಥಿಕ ರಂಗದಲ್ಲೂ ನಡೆಯಿತು. ಷೇರು ಮಾರುಕಟ್ಟೆಯಲ್ಲಿನ ಹೂಡಿಕೆಗಳ ಹಿಂತೆಗೆತದ ಮೂಲಕ ಷೇರು ಸೂಚ್ಯಂಕ ಗಮನಾರ್ಹವಾಗಿ ಇಳಿಯುವಂತೆ ಮಾಡಲಾಯಿತು. ಒಂದೆಡೆ, ಎಡಪಕ್ಷಗಳತ್ತ ಬೊಟ್ಟು ಮಾಡುತ್ತಲೇ, ಇನ್ನೊಂದೆಡೆ ತನ್ನ ಆಡಳಿತಾವಧಿಯಲ್ಲಿ ಅಕ್ರಮವಾಗಿ ಸಂಪಾದಿಸಿ, ಷೇರು ಮಾರುಕಟ್ಟೆಯಲ್ಲಿ ಹೂಡಿದ್ದ ತನ್ನ ಹೇರಳ ಸಂಪತ್ತನ್ನು ಆಘಾತಕರವಾದ ಚುನಾವಣಾ



ನೂತನ ಪ್ರಧಾನಿ ಮನಮೋಹನ್ ಸಿಂಗ್ ಆದ್ಯತೆ ಗುರುತಿಸುವತ್ತ

ಸೋಲಿನ ಹಿನ್ನೆಲೆಯಲ್ಲಿ ಹಿಂತೆಗೆದುಕೊಳ್ಳುವ ವಾಸ್ತವಾಂಶವನ್ನು ಮುಚ್ಚಿ ಹಾಕಲು ಭಾಜಪ ಪ್ರಯತ್ನಿಸಿತು.

ಚುನಾವಣಾ ಸಮೀಕ್ಷೆಗಳು (Opinion Polls) ಮತ್ತು ಮತಗಟ್ಟೆ ಅಭಿಪ್ರಾಯಗಳಿಂದ (Exit Polls) ಅವರು ಎಷ್ಟೊಂದು ಪ್ರಭಾವಿತರಾಗಿದ್ದರೆಂದರೆ, ಚುನಾವಣಾ ಫಲಿತಾಂಶಗಳನ್ನು ನಂಬಲಿಕ್ಕೆ ಅವರಿಗಾಗಲಿಲ್ಲ! ಇದರ ಪರಿಣಾಮವಾಗಿ ಅತೀವ ಆತಂಕಕ್ಕೊಳಗಾದ ಅವರು ಅತ್ಯಂತ ತರಾತುರಿಯಲ್ಲಿ ತಮ್ಮ ಅಕ್ರಮ ಗಳಿಕೆಯನ್ನು 'ಭದ್ರ ನೆಲೆಗಳಿಗೆ' ವರ್ಗಾಯಿಸಲು ತಿಣುಕಾಡಿದರು. ಷೇರು ಮಾರುಕಟ್ಟೆಯ ಕುಸಿತದ ನಿಜವಾದ ಗಾಥೆ ಇದು. ಈ ಬಗ್ಗೆ ಹೊಸ ಸರ್ಕಾರ ವಿಚಾರಣೆ ನಡೆಸಬೇಕಾಗಿದೆ. ಈ ನಡುವೆ, ಅಭದ್ರತೆಯನ್ನು ಹುಟ್ಟು ಹಾಕುವ ಇಂತಹ ಪ್ರಯತ್ನಗಳು ಫಲ ನೀಡಲಿಲ್ಲ. ಷೇರು ಮಾರುಕಟ್ಟೆ ಯಥಾಸ್ಥಿತಿಗೆ ಮರಳಿತು.

ಆರ್‌ಎಸ್‌ಎಸ್/ಭಾಜಪಗಳ ಹಾರಾಟ, ಆರ್ಭಟಗಳಿಗೆ ಸೋನಿಯಾ ಗಾಂಧಿಯವರ ತ್ಯಾಗದ ನಿರ್ಧಾರ ಇತಿಶ್ರೀ ಹಾಡಿತು. ಈ ಸಂಬಂಧದಲ್ಲಿ **ಶ್ರೀಮತಿ ಸೋನಿಯಾ ಗಾಂಧಿಯವರು ಸಾಕಷ್ಟು ಮುಂಚಿತವಾಗಿಯೇ ನಿರ್ಧಾರ ತಳೆದಿದ್ದರು ಎಂಬುದು ಸುಸ್ಪಷ್ಟ. ಹಾಗಿರುವಾಗ, ಕಾಂಗ್ರೆಸ್ ಸಂಸದೀಯ ದಳದ ನಾಯಕಿಯಾಗಿರುವ ಸಂದರ್ಭದಲ್ಲೇ ತನ್ನ ನಿರ್ಧಾರವನ್ನು ಹೇಳುವುದು ಸೂಕ್ತವಾಗುತ್ತಿತ್ತು.** ಆದರೆ, ಆಕೆಯೇ ವ್ಯಕ್ತಗೊಳಿಸಿರುವ ಪ್ರಕಾರ, ಚುನಾವಣೆ ಫಲಿತಾಂಶಗಳು ಮತ್ತು ಇತರ ಪಕ್ಷಗಳಿಂದ ಮೂಡಿ ಬಂದ ಬೆಂಬಲ- ಇವೆರಡೂ ತನ್ನ ನಿರ್ಧಾರವನ್ನು ಪ್ರಕಟಿಸುವಲ್ಲಿ ಆಕೆಗೆ ಅಡ್ಡಿಯಾದವು. ಏನಾದರಾಗಲಿ ಆಕೆ ತಾನು ಎಣಿಸಿದ್ದನ್ನು ಮಾಡಿದ್ದಾರೆ. ಆಕೆಯ ನಿರ್ಧಾರವನ್ನು ಅರ್ಥೈಸುವ ನಿಟ್ಟಿನಲ್ಲಿ ಹಲವಾರು ಮೂಲಗಳಿಂದ ವಿಶ್ಲೇಷಣೆ ನಡೆಯಲಿದೆ. ಈ ನಡುವೆ, ಶ್ರೀಮತಿ ಗಾಂಧಿಯವರ ತ್ಯಾಗವನ್ನು ಹೋಲಿಸಿದಾಗ, ಅಧಿಕಾರಕ್ಕಾಗಿ ಏನನ್ನೂ ಮಾಡಲು ಹೇಸದ ಆರ್‌ಎಸ್‌ಎಸ್/ಭಾಜಪ



ನಾಯಕರು ತಮ್ಮ ಅತೀವ ಅಧಿಕಾರದಾಹದ ನಿರ್ಲಜ್ಜ ಪ್ರದರ್ಶನದಿಂದಾಗಿ ಇಂದು ಜನರೆದುರು ಬತ್ತಲಾಗಿದ್ದಾರೆ. ಅವರಲ್ಲಿ ಕೆಲವರಂತೂ ತಮ್ಮ ವ್ಯಕ್ತಿತ್ವಕ್ಕೂ ಮೀರಿದ ಭ್ರಾಮಕ ವರ್ಚಸ್ಸನ್ನು ಗಳಿಸಿಕೊಂಡು ಕಲ್ಪನಾ ಲೋಕದಲ್ಲಿ ತೀರಾ ಇತ್ತೀಚಿನವರೆಗೂ ವಿಹರಿಸುತ್ತಿದ್ದವರು! ಅದೇನೇ ಇರಲಿ, ಕಾಂಗ್ರೆಸ್ ನೇತೃತ್ವದಲ್ಲಿ, ಜಾತ್ಯತೀತಶಕ್ತಿಗಳು ಇಂದು ಕೇಂದ್ರ ದಲ್ಲಿ ಅಧಿಕಾರ ಗ್ರಹಣ ಮಾಡಿವೆ ಎಂಬುದಂತೂ ಸತ್ಯ.

ಸರ್ಕಾರಗಳು ಅನುಸರಿಸುವ ನೀತಿಗಳ ಆಧಾರದಲ್ಲಿ ಮಾತ್ರವೇ ಅಂತಹ ಸರ್ಕಾರಗಳ ಜೊತೆಗಿನ ಸಾಮೀಪ್ಯವನ್ನು ಸಿಪಿಐ(ಎಂ) ನಿರ್ಧರಿಸುತ್ತದೆ ವಿನಹ ಅಂತಹ ಸರ್ಕಾರಗಳನ್ನು ನಡೆಸುತ್ತಿರುವ ವ್ಯಕ್ತಿಗಳ ಆಧಾರದಲ್ಲಿ ಅಲ್ಲ. ಈ ಜಾತ್ಯಾತೀತ ಸರ್ಕಾರ ಸಾಮಾನ್ಯ ಕನಿಷ್ಟ ಕಾರ್ಯಕ್ರಮವೊಂದರ ಆಧಾರದಲ್ಲಿ ಕಾರ್ಯ ನಿರ್ವಹಿಸಬೇಕಾಗಿದೆ. ಅಂತಹ ಒಂದು ಕಾರ್ಯಕ್ರಮ ಮೂಡಿ ಬರುವುದನ್ನು ಸಿಪಿಐ(ಎಂ) ನಿರೀಕ್ಷಿಸುತ್ತಿದೆ ಮತ್ತು ಅಂತಹ ಕಾರ್ಯಕ್ರಮದ ಆಧಾರದಲ್ಲಿ ತನ್ನ ಮುಂದಿನ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ.

ಕರ್ನಾಟಕ - ಲೋಕಸಭೆಗೆ ಆಯ್ಕೆಯಾದವರು

	ಕ್ಷೇತ್ರ	ಗೆದ್ದ ಅಭ್ಯರ್ಥಿ	ಪಡೆದ ಮತಗಳು	ಪ್ರತಿಸ್ಪರ್ಧಿ	ಪಕ್ಷ.	ಪಡೆದು ಮತಗಳು
			ಜನತಾದಳ(ಎಸ್)			
1.	ಚಾಮರಾಜನಗರ	ಕಾಗಲವಾಡಿ ಶಿವಣ್ಣ	3,20,941	ವಿ.ಸಿದ್ದರಾಜು	ಕಾಂಗ್ರೆಸ್	2,77443
2.	ಹಾಸನ	ಹೆಚ್.ಡಿ.ದೇವೇಗೌಡ	4,62,625	ಹೆಚ್.ಸಿ.ಶ್ರೀಕಂಠಯ್ಯ	ಕಾಂಗ್ರೆಸ್	2,72,320
			ಕಾಂಗ್ರೆಸ್			
3.	ಮಂಡ್ಯ	ಅಂಬರೀಶ್	3,94,392	ಡಾ.ಎಸ್.ರಾಮೇಗೌಡ	ಜನತಾದಳ(ಎಸ್)	2,72,643
4.	ಕೋಲಾರ	ಕೆ.ಹೆಚ್.ಮುನಿಯಪ್ಪ	3,85,582	ಡಿ.ಎಸ್.ವೀರಯ್ಯ	ಬಿಜೆಪಿ	373947
5.	ಚಿಕ್ಕಬಳ್ಳಾಪುರ	ಆರ್.ಎಲ್.ಜಾಲಪ್ಪ	3,75,642	ಶಶಿಕುಮಾರ್	ಜನತಾದಳ(ಎಸ್)	3,15,829
6.	ಚಿತ್ರದುರ್ಗ	ಎನ್.ವೈ.ಹನುಮಂತಪ್ಪ	3,24,307	ಪಿ.ಕೋದಂಡರಾಮಯ್ಯ	ಜನತಾದಳ(ಎಸ್)	2,86,986
7.	ಕನಕಪುರ	ತೇಜಸ್ವಿನಿ ಶ್ರೀರಮೇಶ್	5,26,888	ಹೆಚ್.ಡಿ.ದೇವೇಗೌಡ	ಜನತಾದಳ(ಎಸ್)	4,27,020
8.	ಕೊಪ್ಪಳ	ಕೆ.ವಿರುಪಾಕ್ಷಪ್ಪ	3,56,000	ನಾಗಪ್ಪ ಸಾಲೋಣಿ	ಬಿಜೆಪಿ	3,13000
9.	ರಾಯಚೂರು	ವೆಂಕಟೇಶನಾಯಕ	2,89,160	ರಾಜಾಮದನಗೋಪಾಲ ನಾಯಕ	ಜನತಾದಳ(ಎಸ್)	288574
10.	ಗುಲ್ಬರ್ಗಾ	ಇಕ್ಬಾಲ್ ಅಹಮದ್ ಸರಡಗಿ	3,12,432	ಬಸವರಾಜ ಪಾಟೀಲ್ ಸೇಡಂ	ಬಿಜೆಪಿ	189001
			ಬಿಜೆಪಿ			
11.	ಬೀದರ್	ರಾಮಚಂದ್ರಪ್ಪ ವೀರಪ್ಪ	312329	ನರಸಿಂಗರಾವ್ ಸೂರ್ಯವಂಶಿ	ಕಾಂಗ್ರೆಸ್	288.852
12.	ಬಳ್ಳಾರಿ	ಕರುಣಾಕರ ರೆಡ್ಡಿ	3,18,978	ಕೆ.ಸಿ.ಕೊಂಡಯ್ಯ	ಕಾಂಗ್ರೆಸ್	2,87,299
13.	ದಾವಣಗೆರೆ	ಜಿ.ಎಂ.ಸಿದ್ದೇಶ್	3,68,767	ಎಸ್.ಎಸ್.ಮಲ್ಲಿಕಾರ್ಜುನ	ಕಾಂಗ್ರೆಸ್	3,37,788
14.	ತುಮಕೂರು	ಎಸ್.ಮಲ್ಲಿಕಾರ್ಜುನಯ್ಯ	3,03,016	ಡಿ.ಎಲ್.ಜಗದೀಶ್	ಜನತಾದಳ(ಎಸ್)	300661
15.	ಬೆಂಗಳೂರು ಉತ್ತರ	ಹೆಚ್.ಟಿ.ಸಾಂಗ್ಲಿಯಾನ	4,73,354	ಸಿ.ಕೆ.ಜಾಫರ್‌ಷರೀಫ್	ಕಾಂಗ್ರೆಸ್	4,43,524
16.	ಬೆಂಗಳೂರು ದಕ್ಷಿಣ	ಅನಂತಕುಮಾರ್	3,86,669	ಲೇಔಟ್‌ಕೃಷ್ಣಪ್ಪ	ಕಾಂಗ್ರೆಸ್	3,24,408
17.	ಮೈಸೂರು	ಸಿಹೆಚ್‌ವಿಜಯಶಂಕರ್	3,16,421	ಸಿ.ಎಸ್.ಗುರುಸ್ವಾಮಿ	ಜನತಾದಳ(ಎಸ್)	3,06,272
18.	ಮಂಗಳೂರು	ಸದಾನಂದಗೌಡ	3,84,760	ವೀರಪ್ಪಮೋಯಿಲಿ	ಕಾಂಗ್ರೆಸ್	3,51,345
19.	ಉಡುಪಿ	ಮನೋರಮ ಮಧ್ವರಾಜ್	3,69,627	ವಿನಯಕುಮಾರ್ ಸೊರಕೆ	ಕಾಂಗ್ರೆಸ್	3,40,624
20.	ಚಿಕ್ಕಮಗಳೂರು	ಡಿ.ಸಿ.ಶ್ರೀಕಂಠಪ್ಪ	3,41,341	ಬಿ.ಎಲ್.ಶಂಕರ್	ಕಾಂಗ್ರೆಸ್	2,67,719
21.	ಶಿವಮೊಗ್ಗ	ಎಸ್.ಬಂಗಾರಪ್ಪ	4,50,097	ಆಯನೂರು ಮಂಜುನಾಥ	ಕಾಂಗ್ರೆಸ್	3,73,952
22.	ಕೆನರಾ	ಅನಂತಕುಮಾರ್ ಹೆಗಡೆ	4,31,866	ಮಾರ್ಗರೇಟ್ ಆಳ್ವಾ	ಕಾಂಗ್ರೆಸ್	2,60,206
23.	ಧಾರವಾಡ ದಕ್ಷಿಣ	ಮಂಜುನಾಥ ಕುನ್ನೂರ	4,42,755	ಪ್ರೊ.ಐ.ಜಿ ಸನದಿ	ಕಾಂಗ್ರೆಸ್	2,97,64[illegible]
24.	ಧಾರವಾಡ ಉತ್ತರ	ಪ್ರಹ್ಲಾದ್ ಜೋಷಿ	3,84,621	ಬಿ.ಎಸ್.ಪಾಟೀಲ್	ಕಾಂಗ್ರೆಸ್	3,01,7[illegible]
25.	ಬೆಳಗಾವಿ	ಸುರೇಶ ಅಂಗಡಿ	4,10,843	ಅಮಾರಸಿಂಗಪಾಟೀಲ	ಕಾಂಗ್ರೆಸ್	3,26,090
26.	ಚಿಕ್ಕೋಡಿ	ರಮೇಶ್ ಜಿಗಜಿಣಗಿ	3,79,580	ಶ್ಯಾಮಭೀಮಘಾಟಿಗೆ	ಕಾಂಗ್ರೆಸ್	3,36,088
27.	ಬಾಗಲಕೋಟೆ	ಪಿ.ಸಿ.ಗದ್ದಿಗೌಡರ	4,21,647	ಆರ್.ಎಸ್.ಪಾಟೀಲ್	ಕಾಂಗ್ರೆಸ್	2,69,145
28.	ಬಿಜಾಪುರ	ಬಸವನಗೌಡ ಯತ್ನಾಳ	344905	ಬಿ.ಎಸ್.ಪಾಟೀಲ ಮನಗೋಳಿ	ಕಾಂಗ್ರೆಸ್	3,07,372

ಅಪ್ರತಿಮ ಕಾಮ್ರೇಡ್ ಇ.ಕೆ.ನಾಯನಾರ

ಸಾಮ್ರಾಜ್ಯಶಾಹಿಯನ್ನು ಹೊರಗಟ್ಟಿ ನಾಡಿನ ವಿಮೋಚನೆಗಾಗಿ ನಡೆದ ಮಹಾನ್ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ, ಬ್ರಿಟಿಷರ, ದೇಶೀಯ ಪಾಳೆಗಾರರ, ಸುಲಿಗೆಖೋರರ ಎದೆ ನಡುಗಿಸಿದ, ಜನ ಬಂಡಾಯಗಳನ್ನು ಸಂಘಟಿಸಿ ಅಪಾರ ದಬ್ಬಾಳಿಕೆ ಎದುರಿಸಿದ ಸಮರೋತ್ಸಾಹಿ, ಅಪ್ರತಿಮ ಕ್ರಾಂತಿಕಾರಿ ಇ.ಕೆ.ನಾಯನಾರ್ ಇನ್ನಿಲ್ಲ. ಹಾಸ್ಯಲೇಪಿತ ಹರಿತ ಮಾತುಗಳಿಂದ, ಬರಹಗಳಿಂದ ಜನ ಸಮ್ಮೋಹನಗೊಳಿಸುತ್ತಿದ್ದ ರಾಜಕೀಯ ಶಿಕ್ಷಕನ ಧ್ವನಿ ಇನ್ನು ಕೇಳದು. ಅದು ನಾಡಿನೊಳಗಿನ ನಡೆದಾಟವೋ, ಕಾಡಿನೊಳಗಿನ ಭೂಗತ ಜೀವನವೋ, ಮುಖ್ಯಮಂತ್ರಿ, ಸಂಸದ ಎಲ್ಲೇ ಇರಲಿ ಹೇಗೇ ಇರಲಿ ಶೋಷಿತ ಜನತೆಗಾಗಿ ಸದಾ ಮಿಡಿಯುತ್ತಿದ್ದ, ದುಡಿಯುತ್ತಿದ್ದ ಚೈತನ್ಯಪೂರ್ಣ ಹೃದಯವೊಂದರ ಬಡಿತ ನಿಂತ ಘಳಿಗೆ ಕಾಂ. ನಾಯನಾರ್ ಇನ್ನಿಲ್ಲವಾದರು. ಹಿರಿಯ ಕ್ರಾಂತಿಕಾರಿಯು ಅಗಲಿದ ಸಂದರ್ಭದಲ್ಲಿ ಮಿಡಿದ ಕಂಬನಿ, ಕಾಡಿದ ನೆನಪುಗಳಿಲ್ಲಿ...

ಕೇರಳದ ಜನತೆಯೊಡನೆ ಆತ್ಮೀಯ ಸಂವಾದ ನಡೆಸಿದ ಅಪರೂಪದ ಕ್ರಾಂತಿಕಾರಿ ಕಾಂ. ಇ.ಕೆ.ನಾಯನಾರ್

ಜಿ.ಎನ್.ನಾಗರಾಜ್

ಅಪರೂಪದ ಕ್ರಾಂತಿಕಾರಿ ಇ.ಕೆ.ನಾಯನಾರ್‌ರವರು ಮಹಾನ್ ನಾಯಕರಾಗಿ ಮೇಲೇರಿದ ಬಗೆಯನ್ನು ವಿಶ್ಲೇಷಿಸಿ, ಕರ್ನಾಟಕದೊಂದಿಗೆ ಅವರಿಗಿದ್ದ ಸಂಬಂಧ-ಕೊಡುಗೆಗಳನ್ನು ನೆನಪಿಸಿಕೊಂಡಿದ್ದಾರೆ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿಯವರು

ಕಾಂ. ಇ.ಕೆ.ನಾಯನಾರ್ ಕೇರಳದ ಕ್ರಾಂತಿಕಾರಿಗಳಲ್ಲಿ ಕಾಂ||ಎ.ಕೆ.ಜಿ., ಕಾಂ||ಇ.ಎಂ.ಎಸ್ ಮತ್ತು ಕೃಷ್ಣ ಪಿಳ್ಳೆಯವರ ನಂತರದ ಅತ್ಯಂತ ಹಿರಿಯ ನಾಯಕ. ಎಳೆಯ ವಯಸ್ಸಿನಲ್ಲಿಯೇ ಕ್ರಾಂತಿಕಾರಿ ಚಳುವಳಿಗೆ ಸೆಳೆಯಲ್ಪಟ್ಟ ಚಳುವಳಿಯನ್ನೇ ವಿಶ್ವವಿದ್ಯಾಲಯ ಮಾಡಿಕೊಂಡು ಎತ್ತರಕ್ಕೇರಿದ ಸಂಗಾತಿ.

ಉತ್ತರ ಮುಲಬಾರಿನ ಹಲವು ಹಳ್ಳಿಗಳಲ್ಲಿ ಕ್ರಾಂತಿಯ ಕಿಡಿ ಹೊತ್ತಿಸಿದ ಅಲ್ಲಿಯ ಕ್ರೂರ ಭೂಮಾಲಿಕರಿಗೆ ಹಾಗೂ ಬ್ರಿಟೀಷ್ ಸರ್ಕಾರಕ್ಕೆ ಸವಾಲಾದ ಕಾಂ| ಇ.ಕೆ.ನಯನಾರ್ ಕನ್ನಡಿಗರಿಗೆ ಚಿರಪರಿಚಿತವಾದ ಕಯ್ಯೂರಿನಲ್ಲಿಯೂ ರೈತ ಹೋರಾಟದ ಬೀಜ ಬಿತ್ತಿದವರು. ಆ ಮೂಲಕ "ಚಿರಸ್ಮರಣೆ" ಕಾದಂಬರಿಯ ರಚನೆಗೆ ಆ ಮೂಲಕ ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲ ಸಾಹಿತ್ಯದ ಹೊಸ ಗಾಲಿಗೆ ಕಾರಣರಾದವರು. ಕಯ್ಯೂರು ಹೋರಾಟವೇ ನಿರಂಜನರನ್ನು ಕಮ್ಯೂನಿಸ್ಟ್ ಸಿದ್ಧಾಂತ ಹಾಗೂ ಚಳುವಳಿಯ ಕಡೆಗೆ ಸೆಳೆದದ್ದು. ಹತ್ತಾರು ವರ್ಷಗಳ ಕಾಲ ಭೂಗತರಾಗಿಯೇ ಊರಿಂದೂರಿಗೆ ಸಂಚರಿಸುತ್ತಾ ಬ್ರಿಟೀಷ್ ಸರಕಾರಕ್ಕೆ ಮಣ್ಣುಮುಕ್ಕಿಸಿದ ಯಶಸ್ವಿ ಭೂಗತ ಕ್ರಾಂತಿಕಾರಿ. ಇವರನ್ನು ಹಿಡಿಯುವುದಕ್ಕಾಗಿಯೇ ಮಲಬಾರ್ ಪೊಲೀಸ್ ಎಂಬ ಅತ್ಯಂತ ಕ್ರೂರ ಪೊಲೀಸ್ ಪಡೆಯೊಂದನ್ನು ಸೃಷ್ಟಿಸಲಾಯಿತಂತೆ.

ಹೀಗೆ ಕ್ರಾಂತಿಕಾರಿ ಚಳುವಳಿಯ ಮೂಸೆಯಲ್ಲಿ ಅಪ್ಪಟ ಬಂಗಾರವಾಗಿ ಹೊರಹೊಮ್ಮಿದ ನಯನಾರ್‌ರವರು ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ ಪಕ್ಷದ ಅತ್ಯುತ್ತಮ ಸಂಘಟಕರಾಗಿ ಮತ್ತು ರಾಜಕೀಯ ಆಂದೋಲನಗಳ ನೇತಾರರಾಗಿ ಬೆಳೆದರು. ಪಕ್ಷದ ಕಾರ್ಯಕರ್ತರೊಡನೆ ಆತ್ಮೀಯ ಒಡನಾಟ ಅತ್ಯಂತ ಎತ್ತರಕ್ಕೇರಿದ ಮೇಲೆ ಕೂಡ ಹಿಂದಿನ ಸಂಗಾತಿಗಳೊಡನೆ ಪ್ರೀತಿಯ ಬಾಂಧವ್ಯ ಅಪಾರ ಹಿರಿಮೆ.



1997 ಕೋಲಾರದಲ್ಲಿ ನಡೆದ 16ನೇ ರಾಜ್ಯ ಸಮ್ಮೇಳನದ ಬಹಿರಂಗ ಸಭೆಯಲ್ಲಿ ಜನತೆಗೆ ವಂದಿಸುತ್ತಿರುವ ಇ.ಕೆ.ಎನ್. ಜೊತೆಯಲ್ಲಿ ಎನ್.ಕೆ., ಪಿ.ಆರ್., ಜಿ.ವಿ.ಎಸ್., ಪಿ.ಆರ್.ಸಿ., ಬಾಲಾನಂದನ್,ಸೂರಿ ಮುಂತಾದವರು

ಶಿಕ್ಷಣವನ್ನು ಪ್ರಾಥಮಿಕ ಹಂತದಲ್ಲಿಯೇ ತ್ಯಜಿಸಿದರೂ ಕೂಡ ಕಷ್ಟಪಟ್ಟು ಸ್ವಯಂ ಅಭ್ಯಾಸ ನಡೆಸಿ ಮಾರ್ಕ್ಸ್‌ವಾದದ ಸೈದ್ಧಾಂತಿಕ ಪದರುಗಳ ಒಳಹೊಕ್ಕು ಅರ್ಥಮಾಡಿಕೊಂಡ ಹಾಗೂ ಅದರಿಂದಾಗಿ ಅನೇಕ ಒಳನೋಟಗಳನ್ನು ಪಡೆದುಕೊಂಡ ರಾಜಕೀಯ ವಿಜ್ಞಾನಿ.

ಮಾರ್ಕ್ಸ್‌ವಾದದ ಸಿದ್ಧಾಂತ ಹಾಗೂ ರಾಜಕೀಯಗಳಲ್ಲಿ ಅವರು ಗಳಿಸಿಕೊಂಡ ಪರಿಣತಿ ಅವರನ್ನು ಕೋಟ್ಯಾಂತರ ಜನಸಮುದಾಯದ ರಾಜಕೀಯ ಶಿಕ್ಷಕನನ್ನಾಗಿಸಿತು. ಕಾಂ|| ಇ.ಎಂ.ಎಸ್.ರವರ ಜೊತೆಯಲ್ಲಿ ಮತ್ತು ನಂತರ ಅವರ ವಾರಸುದಾರರೆಂಬಂತೆ ದೇಶದ ಹಾಗೂ ರಾಜ್ಯದ ಮಹತ್ವದ ರಾಜಕೀಯ ತಿರುವುಗಳಲ್ಲಿ ಕೇರಳದ ಜನತೆ ದೃಢವಾಗಿ ಹೆಜ್ಜೆ ಹಾಕುವುದನ್ನು ಕಲಿಸಿದರು. ಅವರು ಇಡೀ ಜನತೆಯನ್ನೇ ತಮ್ಮ ಮಾತಿನ ಚಾಟಿಯೇಟುಗಳಿಂದ, ಹರಿತ ವ್ಯಂಗ್ಯದಿಂದ ಬಡಿದೆಬ್ಬಿಸುತ್ತಿದ್ದ ಸಂಮೋಹಗೊಳಿಸುತ್ತಿದ್ದ ರೀತಿ ಅತ್ಯಂತ ಅಪೂರ್ವವಾದುದು. ಜನತೆಯೊಡನೆ ನಿರಂತರವಾಗಿ ಒಡನಾಡುತ್ತಿದ್ದುದರ ಜೊತೆಗೆ, ಕ್ರಾಂತಿಕಾರಿ ಚಳುವಳಿಯು ಸೆಳೆತಕ್ಕೆ ಅವರನ್ನು ಸೆಳೆದ ಅನುಭವದ ಜೊತೆಗೆ, ಮಾರ್ಕ್ಸ್‌ವಾದಿ ಸಿದ್ಧಾಂತದ ಅಪಾರವಾದ ಅಧ್ಯಯನ ಅವರನ್ನು ಕೇರಳದ ಮಹಾನಾಯಕರಲ್ಲೊಬ್ಬರನ್ನಾಗಿಸಿತು. ಕೇರಳದ ಇದೇ ಜನತೆ ಪ್ರತಿ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಅದನ್ನು ವಿವರಿಸಿ ವಿಶ್ಲೇಷಿಸಿ ತಮ್ಮ ಭಾಷೆಯಲ್ಲಿಯೇ ತಮಗೆ ಮನದಟ್ಟು ಮಾಡಿಸುತ್ತಿದ್ದ ಈ ನೇತಾರರನ್ನು ಪ್ರೀತಿಯಿಂದ, ಗೌರವದಿಂದ, ಆತ್ಮೀಯತೆಯಿಂದ ಕಂಡರು. ಅವರೊಡನೆ ಉತ್ಸಾಹದಿಂದ ಸಂವಾದಿಸಿದರು. ಅವರು ಮೊದಲು ಏಷಿಯನೇಟ್ ಟಿ.ವಿ.ಯಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ ಆರಂಭವಾದ ಒಂದು ಗಂಟೆಯ ಪ್ರಶ್ನೋತ್ತರ ಅವರು ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟಮೇಲೂ ಅದೇ ಜನಪ್ರಿಯತೆಯಿಂದ ಮುಂದುವರೆದದ್ದು ಕೇರಳದ ಜನತೆ ಅವರೊಡನೆ ಹೊಂದಿದ್ದ ಅಪೂರ್ವ ಆತ್ಮೀಯತೆಗೊಂದು ಸಾಕ್ಷಿಯಾಗಿತ್ತು.

ಈ ಕ್ರಾಂತಿಕಾರಿ ಉತ್ತರ ಮಲಬಾರಿನಲ್ಲಿ ಇತರ ಸಂಗಾತಿಗಳೊಡಗೂಡಿ ತಾವು ಬಡಿದೆಬ್ಬಿಸಿದ ಕ್ರಾಂತಿಕಾರಿ ಚಳುವಳಿಯಿಂದ ಕರ್ನಾಟಕದ ಮೇಲೆ ಪರಿಣಾಮ ಬೀರಿದ್ದಾರೆ. ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿಯ ಮೊಟ್ಟಮೊದಲ, ಇಂದಿಗೂ ಮುಖ್ಯನೆಲೆಯಾದ ದಕ್ಷಿಣ ಕನ್ನಡದ ಚಳುವಳಿಗೆ ಮಲಬಾರಿನ ಚಳುವಳಿ ದೊಡ್ಡ ಕಾಣಿಕೆ ನೀಡಿದೆ. ಅದರೊಂದಿಗೆ ಕರ್ನಾಟಕದ ಅನೇಕ ಜಿಲ್ಲಾ ಕೇಂದ್ರಗಳು ತಾಲ್ಲೂಕು ಕೇಂದ್ರಗಳಿಗೂ ಕೂಡ ಅವರು ಬಂದು ಕರ್ನಾಟಕದ ದುಡಿಯುವ ಜನತೆಗೆ ರಾಜಕೀಯ ಶಿಕ್ಷಣ ನೀಡಿದ್ದಾರೆ. ನಮ್ಮ ಬಹಳಷ್ಟು ರಾಜ್ಯ ಸಮ್ಮೇಳನಗಳ ಮುಖ್ಯ ಭಾಷಣಕಾರರಾಗಿರುತ್ತಿದ್ದರು.


ಜನ ಬಂಡಾಯಗಳ ನಾಯಕ, ರಾಜಕೀಯ ಶಿಕ್ಷಕ - ಕಾಮ್ರೇಡ್ ನಾಯನಾರ್

ವಿ.ಜೆ.ಕೆ.ನಾಯರ್

ಮೊನಚು ಮಾತುಗಾರ, ಜನ ಬಂಡಾಯಗಳ ಸಂಘಟಕ, ಪ್ರೀತಿಯ ನಾಯಕನೊಂದಿಗೆ ಒಡನಾಟ-ವ್ಯಕ್ತಿತ್ವದ ಒಳನೋಟವಿಲ್ಲಿ..

2004 ಮೇ 19 ರಂದು ನಿಧನರಾದ ಇ.ಕೆ.ನಾಯನಾರ್ ಕೇರಳದಾದ್ಯಂತ ಜನಸಮೂಹದ ಆತ್ಮೀಯ ನಾಯಕರಾಗಿದ್ದರು. ಅವರು ತಮ್ಮನಾಯಕರಾಗಿದ್ದ ಇ.ಎಂ.ಎಸ್.ನಂಬೂದರಿಪಾಡ್ ರವರ ರೀತಿಯಲ್ಲಿ ಬರಹದ ಮೂಲಕ ತಮ್ಮ ಸ್ಥಾನವನ್ನು ರೂಪಿಸಿಕೊಂಡವರಲ್ಲ. ತಮ್ಮ ಮಾತು ಹಾಗೂ ಮಾತಿಗೆ ತಕ್ಕ ನಡೆ ಅವರ ವಿಶೇಷತೆಯಾಗಿತ್ತು. ಇದರ ಅರ್ಥ ಬರವಣಿಗೆಗೆ ಅವರೇನೂ ಕೊಡುಗೆ ನೀಡಲಿಲ್ಲ ಎಂದಲ್ಲ. ತಮ್ಮ ಪ್ರೌಢ ಶಿಕ್ಷಣವನ್ನು ಪೂರ್ಣಗೊಳಿಸದಿದ್ದ ನಾಯನಾರ್ ಅನೇಕ ಬರಹಗಳನ್ನು ಬರೆದಿದ್ದರು. ಅದರಲ್ಲಿ ಮಲೆಯಾಳಂನ ಪ್ರಗತಿಪರ ಸಾಹಿತ್ಯ ಇತಿಹಾಸ ಪ್ರಮುಖವಾದದ್ದು. ಸಾಹಿತ್ಯಿಕ ಪ್ರತಿಭೆಗಿಂತ ಹೆಚ್ಚಾಗಿ ಅವರು ಸದಾ ಜನಸಮೂಹಗಳ ಮಧ್ಯೆ ನಿಂತವರಾಗಿದ್ದರು. ಎ.ಕೆ.ಜಿ. ಮತ್ತು ಇ.ಎಂ.ಎಸ್. ರಂತಹವರ ನಂತರ ಮೂಡಿಬಂದ ನೇತಾರರಲ್ಲಿ ಅವರು ಪ್ರಮುಖರಾದವರು. ಇ.ಎಂ.ಎಸ್. ನಂತರ ಕಮ್ಯುನಿಸ್ಟ್ ಮಂತ್ರಿಮಂಡಲವನ್ನು ಮುನ್ನಡೆಸಿದವರು. ಸ್ವಾತಂತ್ರ್ಯಪೂರ್ವದಲ್ಲಿ ಕಾಂ|| ನಾಯನಾರ್ ಮೊರಾಜ, ಕಯ್ಯೂರುನಂತಹ ಪ್ರಖ್ಯಾತ ಬಂಡಾಯದಲ್ಲಿ ಭಾಗವಹಿಸಿದ್ದ ಪರಿಣಾಮವಾಗಿ ಭೂಗತ ಜೀವನ ನಡೆಸಬೇಕಾಯಿತು.

ಸ್ವಾತಂತ್ರ್ಯದ ನಂತರ ಪಕ್ಷವನ್ನು ನಿಷೇಧಿಸಲಾಗಿದ್ದ ಸಮಯದಲ್ಲಿ ಒಂದೆಡೆ ಕಾರ್ಯಕರ್ತರಾಗಿ ಪಕ್ಷದ ಪ್ರೆಸ್‌ನಲ್ಲಿ ಪತ್ರಿಕೆಗೆ ಕೆಲಸ ಮಾಡಿದ್ದರು. ಪಕ್ಷದ ಪತ್ರಕರ್ತರಾಗಿ ಅವರು ಗಳಿಸಿದ ಅನುಭವ ಅವರ ಜೀವನ ಉದ್ದಕ್ಕೂ



ಅವರೊಂದಿಗೆ ನಿಂತಿತ್ತು. ದೇಶಾಭಿಮಾನಿಯ ಪ್ರಧಾನ ಸಂಪಾದಕರ ಮಟ್ಟಕ್ಕೂ ಏರಿದ್ದರು. ದೇಶಾಭಿಮಾನಿಯೊಂದಿಗಿನ ಅವರ ಭಾವನಾತ್ಮಕ ಸಂಬಂಧವನ್ನು ಅವರ ಮಾತುಗಳಲ್ಲಿ ವ್ಯಕ್ತಪಡಿಸುವುದಾದರೆ "ಸಾಯುವಾಗಲು ದೇಶಾಭಿಮಾನಿಯನ್ನು ನನ್ನ ಹೃದಯದ ಬಳಿ ಇರಿಸಿಕೊಂಡೆ ಸಾಯಬಯಸುತ್ತೇನೆ" ಎಂಬ ಅವರ ಮಾತು ಉಲ್ಲೇಖನೀಯ.

ಕೇರಳಾದ ಅತೀ ಹೆಚ್ಚು ಕಾಲಾವಧಿಯ ಮುಖ್ಯಮಂತ್ರಿಯಾಗಿದ್ದ ನಾಯನಾರ್ ಮೂರು ಬಾರಿ ಮುಖ್ಯಮಂತ್ರಿಯಾಗಿದ್ದರು. ರಾಜ್ಯ ಶಾಸನಸಭೆಯ ನಾಯಕತ್ವ ವಹಿಸಿಕೊಳ್ಳುವ ಮುನ್ನ ಅವರು ಸಂಸತ್ ಸದಸ್ಯರಾಗೂ ಕಾರ್ಯನಿರ್ವಹಿಸಿದ್ದರು.

ಅವರನ್ನು ಬಣ್ಣಿಸುವಾಗ ಅವರ ಸರಳತೆ, ಸಾಮಾನ್ಯರ ನಡುವೆ ಬೆರೆಯುವಿಕೆ ಬೀಡಿ ಸೇದುವುದು, ಹಾಸ್ಯ ಭರಿತ ಮಾತುಗಳು. ತೀಕ್ಷ್ಣ ಹಾಸ್ಯಮಿಶ್ರಿತ ಟೀಕೆಗಳನ್ನು ಹೊರತು ಪಡಿಸಿದರೆ ಬಣ್ಣನೆ ಪೂರ್ಣವಾಗುವುದು.


ಜನಸಮೂಹಗಳಿಗೆ ರಾಜಕೀಯವನ್ನು ಆಕರ್ಷಕಗೊಳಿಸಿದ ನಾಯಕರೆಂದರೆ ನಾಯನಾರ್ ಎಂದಲ್ಲಿ ಅತಿಶಯೋಕ್ತಿಯಲ್ಲ. ಜನಸಾಮಾನ್ಯರ ಮಾತುಗಳಲ್ಲಿಯೇ ಅವರೊಂದಿಗೆ ಸಂಭಾಷಿಸುವುದು ಅವರಿಗೆ ಅರ್ಥವಾಗುವಂತೆ ವಿವರಿಸುವುದರಲ್ಲಿ ಅವರು ನಿಪುಣರು. ದೈನಂದಿನ ಜೀವನ ಅನುಭವಗಳು ಅವರ ಮಾತುಗಳ ಭಾಷಣಗಳ ಪ್ರಮುಖ ವಿಷಯವಾಗಿತ್ತು. ಅವುಗಳ ಮೂಲಕವೇ ವರ್ಗಶತ್ರುವಿನ ವಿರುದ್ಧ ಜನಸಾಮಾನ್ಯರು ಬಂಡೇಳುವಂತೆ ಮಾಡುತ್ತಿತ್ತು.

ಕೇರಳದವರಾಗಿ ಅವರ ಸಾಮರ್ಥ್ಯಕ್ಕನುಗುಣವಾಗಿ ಕಾರ್ಯ ನಿರ್ವಹಿಸಲು ಅವರಿಗೆ ಸಾಧ್ಯವಾಗಲಿಲ್ಲ, ಕಾರಣ ಅವರಿಗಿದ್ದ ಭಾಷಾ ಮಿತಿಗಳು.

ಆದರೂ ಸಹ ಪಕ್ಷ ಸೂಚಿಸಿದ ಕೆಲಸವನ್ನು ದೇಶಾದ್ಯಂತ ಅವರು ಕರ್ತವ್ಯವೆಂಬಂತೆ ನಿಭಾಯಿಸಿದ್ದಾರೆ. 1985ರ ಕರ್ನಾಟಕ ಚುನಾವಣೆಗಳ ಸಂದರ್ಭದಲ್ಲಿ ಇಡೀ ಉತ್ತರ ಕರ್ನಾಟಕ ಉದ್ದಗಲಕ್ಕೂ ಪ್ರಚಾರ ಕೈಗೊಂಡಿದ್ದರು. ಹರಿಹರ, ದಾಂಡೇಲಿ, ಸವದತ್ತಿ ಮುಂತಾದ ಕಡೆ ಚುನಾವಣಾ ಪ್ರಚಾರ ನಡೆಸಿದ್ದಾರೆ.

ಮಹಾನ್ ಲೇಖಕರಾದ ನಿರಂಜನ ರವರ ಬಳಿಗೆ ನಾನೂ ಸಹ ಅವರೊಂದಿಗೆ ಹೋಗಿದ್ದೆ. ಕಯ್ಯೂರು ಬಂಡಾಯವನ್ನು ಚಿರಸ್ಮರಣೆ ಕಾದಂಬರಿ ಮೂಲಕ ಕನ್ನಡದ ಜನತೆಗೆ ನೀಡಿದ್ದ ನಿರಂಜನರು ನಾಯನಾರ್ ರವರನ್ನು ನೋಡಿದೊಡನೆ ಅತ್ಯಂತ ಭಾವುಕರಾದರು. ತನ್ನ ಕಾದಂಬರಿಯ ಜೀವಂತ ನಾಯಕ ನಾಯನಾರ್ ರವರನ್ನು ಕಂಡು ಅವರನ್ನು ಸ್ವಾಗತಿಸುತ್ತಾ ಕಾಂ|| ನಾಯನಾರ್ ನೀವೊಬ್ಬ ದಂತಕತೆ ಎಂದೂ ಆತ್ಮೀಯವಾಗಿ ಮನೆಗೆ ಬರಮಾಡಿಕೊಂಡರು. ನಾಯನಾರ್ ಒಬ್ಬ ಹುಡುಗನಾಗಿದ್ದಾಗಲೇ ಮಾಡಿದ ಸಾಧನೆ ಅಂತಹದ್ದಾಗಿತ್ತು. ಚಿರಸ್ಮರಣೆಯ ನಾಯಕ ಪಂಡಿತ್ ಬೇರಾರು ಅಲ್ಲದೇ ನಾಯನರ್ ರವರೇ ಆಗಿದ್ದರು ಎಂಬುದು ಅವರ ಮಹತ್ತರ ಸಾಧನೆ. ಚಿರಸ್ಮರಣೆ ಕಯ್ಯೂರು ಬಂಡಾಯದ ವಿವರಣೆ ಹೋದದ್ದು ನಾಯನಾರ್‌ರವರ ಸಾಧನೆಯನ್ನು ಬಿಂಬಿಸುತ್ತದೆ.

...ಕಾರಿ ...ವರಿಗೆ ಮಹಾ ಬೀಳ್ಕೊಡುಗೆ



ನಾಯನಾರ್ ನಿಧನ ಎಡ ಚಳುವಳಿಗೆ ಅಪಾರ ನಷ್ಟ

ಕರ್ನಾಟಕ ರಾಜ್ಯ ಸಮಿತಿ ಸಂತಾಪ

ಸ್ವಾತಂತ್ರ್ಯ ಹೋರಾಟಗಾರರು, ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರೂ, ಕೇರಳದ ಮಾಜಿ ಮುಖ್ಯಮಂತ್ರಿಗಳೂ ಆಗಿದ್ದ, ಇ.ಕೆ.ನಾಯನಾರ್ ನಿಧನಕ್ಕೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ತೀವ್ರ ಸಂತಾಪ ವ್ಯಕ್ತಪಡಿಸಿದೆ. ಕಳೆದ ಕೆಲವು ದಿನಗಳಿಂದ ತೀವ್ರ ಅಸ್ವಸ್ಥರಾಗಿದ್ದ ಅವರು ದೆಹಲಿಯ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನ ಆಸ್ಪತ್ರೆಯಲ್ಲಿ ನಿಧನರಾದರು. ಸುದ್ದಿ ತಿಳಿಯುತ್ತಲೇ ಪಕ್ಷದ ರಾಜ್ಯ ಸಮಿತಿ ಕಛೇರಿಯಲ್ಲಿ ಪಕ್ಷದ ಧ್ವಜವನ್ನು ಅರ್ಧಕ್ಕೆ ಇಳಿಸಲಾಯಿತು. ಪಕ್ಷದ ಕಾರ್ಯಕರ್ತರು ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರದ್ಧಾಂಜಲಿ ಸಲ್ಲಿಸಿದರು. ಇತಿಹಾಸ ಪ್ರಸಿದ್ಧ ಕಯ್ಯೂರು ಹೋರಾಟ ದಿಂದ ತಮ್ಮ ಕ್ರಾಂತಿಕಾರಿ ಜೀವನವನ್ನು ಆರಂಭಿಸಿದ ಅವರು ಮುಂದೆ ಕೇರಳದ ಕಮ್ಯುನಿಸ್ಟ್ ಚಳುವಳಿಯ ಪ್ರಮುಖ ನಾಯಕರಲ್ಲಿ ಒಬ್ಬರಾಗಿ ಬೆಳೆದು ಬಂದರು. ಮೂರು ಸಲ ಕೇರಳ ರಾಜ್ಯದ ಮುಖ್ಯಮಂತ್ರಿಗಳಾಗಿ ಆಯ್ಕೆಯಾಗಿದ್ದರು. ದೇಶದ ಜನತೆ ಇಂದು ಹೆಚ್ಚೆಚ್ಚಾಗಿ ಎಡಪಕ್ಷಗಳ ಮೇಲೆ ವಿಶ್ವಾಸ ವ್ಯಕ್ತಪಡಿಸುತ್ತಿರುವ ಈ ಕಾಲಘಟ್ಟದಲ್ಲಿ ನಾಯನಾರ್ ಅವರ ನಿಧನ ಪಕ್ಷಕ್ಕೆ ಹಾಗೂ ಎಡ ಚಳುವಳಿಗೆ ದೊಡ್ಡ ನಷ್ಟವಾಗಿದೆ ಎಂದು ಜಿ.ಎನ್.ನಾಗರಾಜ್ ಹೇಳಿದರು. ಎರಡು ನಿಮಿಷ ಮೌನ ಆಚರಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಕಣ್ಣೂರಿನ 21 ರ ಅಂತಿಮ ಯಾತ್ರೆಯಲ್ಲಿ ಪಕ್ಷದ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಪಾಲ್ಗೊಂಡಿದ್ದರು.

'ಸಮರ್ಪಿತ ಕ್ರಾಂತಿಕಾರಿಯ ಕೊಡುಗೆ ಶಾಶ್ವತ'

ಸಿಪಿಐ(ಎಂ) ತೀವ್ರ ಸಂತಾಪ

ಕಾಮ್ರೇಡ್ ಇ.ಕೆ.ನಯನಾರ್‌ರವರ ನಿಧನಕ್ಕೆ ಸಿಪಿಐ(ಎಂ)ನ ಪೊಲಿಟ್‌ಬ್ಯೂರೋ ತೀವ್ರ ಸಂತಾಪ ವ್ಯಕ್ತಪಡಿಸಿದೆ. ನಯನಾರ್ ಸಿಪಿಎಂನ ಅತ್ಯುನ್ನತ ನಾಯಕರು, ಕೇರಳ ಜನತೆಯ ಪ್ರೀತಿಪಾತ್ರ ನಾಯಕರು ಅಷ್ಟೇ ಅಲ್ಲದೆ ಒಬ್ಬ ಸಮರ್ಪಿತ ಕ್ರಾಂತಿಕಾರಿಯಾಗಿದ್ದರು. ಅನಾರೋಗ್ಯದ ಕಾರಣಕ್ಕಾಗಿ ಆಸ್ಪತ್ರೆ ಸೇರಿದ್ದ ಅವರು 19 ಮೇ 2004 ರಂದು ನಿಧನ ಹೊಂದಿದರು. ಅವರಿಗೆ 85 ವರ್ಷ ವಯಸ್ಸಾಗಿತ್ತು.

ಚಿಕ್ಕವಯಸ್ಸಿನಲ್ಲೇ ಸ್ವಾತಂತ್ರ್ಯ ಚಳುವಳಿಗೆ ಆಕರ್ಷಿತರಾಗಿ ಕಮ್ಯೂನಿಸ್ಟ್ ನಾಯಕರಾದ ನಯನಾರ್‌ರವರು, ಸ್ವಾತಂತ್ರ್ಯ ಹೋರಾಟಗಾರರು ಮತ್ತು ಕ್ರಾಂತಿಕಾರಿಗಳಿದ್ದ ಕುಟುಂಬಕ್ಕೆ ಸೇರಿದವರು. ಅವರ ದಾಯಾದಿಗಳಲ್ಲಿ ಒಬ್ಬರಾದ ಕೆ.ಪಿ.ಆರ್ ಗೋಪಾಲನ್ ಪ್ರಮುಖ ಕಮ್ಯೂನಿಸ್ಟ್ ಕ್ರಾಂತಿಕಾರಿಗಳಲ್ಲಿ ಒಬ್ಬರಾಗಿದ್ದವರು. ಚಿಕ್ಕ ಬಾಲಕನಾಗಿದ್ದಾಗಲೇ 'ಬಾಲಸಂಘಂ'ನಲ್ಲಿ ಕ್ರಿಯಾಶೀಲವಾಗಿದ್ದ ಅವರು ಉತ್ತರ ಮಲಬಾರಿನಲ್ಲಿ ಪ್ರಾರಂಭವಾಗಿದ್ದ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯಲ್ಲಿ ಭಾಗವಹಿಸಿದ್ದರು. 1940 ರಲ್ಲಿ ಮೊದಲಬಾರಿಗೆ ಜೈಲುವಾಸ ಅನುಭವಿಸಿದರು. ಮಲಬಾರಿನ ರೈತ ಹೋರಾಟದ ಭಾಗವಾಗಿದ್ದ ಕಯ್ಯೂರು ಮತ್ತು ಮೊರಾಜಾ ಹೋರಾಟದಲ್ಲಿ ಭಾಗವಹಿಸಿದ್ದ ಕಾರಣಕ್ಕಾಗಿ ಭೂಗತರಾಗಿದ್ದರು. ಒಟ್ಟಾರೆಯಾಗಿ ಅವರ ಕ್ರಾಂತಿಕಾರಿ ಜೀವನದಲ್ಲಿ 11 ವರ್ಷ ಭೂಗತರಾಗಿ ಮತ್ತು 4 ವರ್ಷ ಜೈಲಿನಲ್ಲಿದ್ದರು.

1939 ರಲ್ಲಿ ನಯನಾರ್‌ರವರು ಕಮ್ಯೂನಿಸ್ಟ್ ಪಕ್ಷದ ಸದಸ್ಯರಾದರು. ಆನಂತರ ರೈತ ಚಳುವಳಿ ಕಾರ್ಯಕರ್ತ ಮತ್ತು ಪಕ್ಷದ ಸಂಘಟಕರಾಗಿದ್ದರು.

ಮಹಾಧಿವೇಶನದಿಂದ ಕೇಂದ್ರಸಮಿತಿ ಸದಸ್ಯರಾಗಿದ್ದರು. 1992 ರ 14ನೇ ಮಹಾಧಿವೇಶನದಲ್ಲಿ ಪೊಲಿಟ್‌ಬ್ಯೂರೋ ಸದಸ್ಯರಾಗಿ ಚುನಾಯಿತರಾಗಿದ್ದರು.

1972 ರಿಂದ 1980 ರವರೆಗೆ ಹಾಗೂ 1992 ರಿಂದ 1996 ರವರೆಗೆ ಸಿಪಿಐ(ಎಂ) ಕೇರಳ ರಾಜ್ಯಸಮಿತಿ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದ ಅವರು ಪಕ್ಷ ಕಟ್ಟುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು ಹಾಗೂ ಪಕ್ಷದ ಪ್ರಭಾವವನ್ನು ಮತ್ತಷ್ಟು ವಿಸ್ತರಿಸಿದರು.

1974 ರಲ್ಲಿ ಅವರು ಶಾಸಕಾಂಗ ಜೀವನ ಆರಂಭಿಸಿದರು. ಒಂದು ಅವಧಿಗೆ ಸಂಸತ್ ಸದಸ್ಯರೂ ಆಗಿದ್ದರು. ಆರು ಬಾರಿ ಕೇರಳ ವಿಧಾನಸಭೆಗೆ ಆಯ್ಕೆಯಾಗಿದ್ದರು. 3 ಬಾರಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದರೆ ಅದರ ಕೊನೆ ಅವಧಿ 1996 ರಿಂದ 2001 ಆಗಿತ್ತು. ಒಟ್ಟು 11 ವರ್ಷ ಮುಖ್ಯಮಂತ್ರಿಯಾಗಿ ಕೇರಳದ ಅತಿ ದೀರ್ಘ ಕಾಲ ಮುಖ್ಯಮಂತ್ರಿಯಾಗಿದ್ದವರು ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ.

ಎಲ್ಲಾ ರೀತಿಯ ಜನರಿಗೂ ಅರ್ಥವಾಗುವ ರೀತಿಯಲ್ಲಿ ಪಕ್ಷದ ನೀತಿ- ನಿಲುವುಗಳನ್ನು ತಿಳಿಸುತ್ತಿದ್ದ ಪ್ರಸಿದ್ಧ ಭಾಷಣಕಾರರಾಗಿದ್ದ ನಾಯನಾರ್, ಜನರಿಗೆ ಅತ್ಯಂತ ಪ್ರೀತಿಪಾತ್ರವಾಗುವ ಆಳವಾದ ಹಾಸ್ಯಪ್ರಜ್ಞೆ ಉಳ್ಳವರಾಗಿದ್ದರು. ದೇಶಾಭಿಮಾನಿ ದಿನಪತ್ರಿಕೆಯ ಸಂಪಾದಕರಾಗಿಯೂ ಕೆಲಸ ಮಾಡಿದ ಹಾಗೂ ಅಸಂಖ್ಯಾತ ಲೇಖನಗಳನ್ನು ಬರೆದಿರುವ ಅವರು ಹೆಸರಾಂತ ಪತ್ರಕರ್ತರಾಗಿದ್ದರು.

ಸಾಮಾನ್ಯ ಜನ ಇಷ್ಟಪಡುತ್ತಿದ್ದ ಕೇರಳದ ನಾಯಕರಲ್ಲಿ ನಾಯನಾರ್ ಒಬ್ಬರು. ಪಕ್ಷದೊಳಗೂ ಕೂಡ ಕಾರ್ಯಕರ್ತರ ಹಾಗೂ ಸದಸ್ಯರೊಂದಿಗಿನ ಸ್ನೇಹಪರತೆ, ಅತ್ಯುತ್ಸಾಹಕ್ಕೆ ಹೆಸರಾಗಿದ್ದವರು. ಎ.ಕೆ.ಗೋಪಾಲನ್, ಇಎಂಎಸ್ ನಂಬೂದರಿಪಾದ್ ಮತ್ತು ಸಿಎಚ್‌ಕನರಾನ್ ರೀತಿ ನಯನಾರ್‌ರವರು ಕೂಡ ಕೇರಳದಲ್ಲಿನ ಕಮ್ಯೂನಿಸ್ಟ್ ಚಳುವಳಿಗೆ ಅವರ ಕಾಣಿಕೆಯಿಂದಾಗಿ ಅವರು ಶಾಶ್ವತವಾಗಿರುತ್ತಾರೆ.



ಪೊಲಿಟ್‌ಬ್ಯೂರೋ ಶ್ರದ್ಧಾಂಜಲಿ
ಹಲವು ದಶಕಗಳ ಒಡನಾಡಿಗೆ ಹಿರಿಯ ನಾಯಕ
ಸುರ್ಜಿತ್‌ರಿಂದ ವಿಪ್ಲವಾಂಜಲಿ

1956 ರಿಂದ 1964ರವರೆಗೆ ಅವಿಭಜಿತ ಕಮ್ಯೂನಿಸ್ಟ್ ಪಕ್ಷದ ಕೊಜಿಕ್ಕೊಡ್ ಜಿಲ್ಲಾಸಮಿತಿ ಕಾರ್ಯದರ್ಶಿಯಾಗಿದ್ದು, ಸಿಪಿಐ(ಎಂ) ಸ್ಥಾಪನೆಯಾದ ನಂತರವೂ 1967 ರವರೆಗೆ ಆ ಸ್ಥಾನದಲ್ಲಿ ಮುಂದುವರೆದರು.

ಮಾರ್ಕ್ಸ್‌ವಾದಿ ದೃಷ್ಟಿಕೋನವನ್ನು ಮೈಗೂಡಿಸಿಕೊಂಡಿದ್ದ ನಾಯನಾರ್ ಅವರು ಮಾರ್ಕ್ಸ್‌ವಾದಿ - ಲೆನಿನ್‌ವಾದಿ ತತ್ವಗಳಿಗೆ ಜೀವನ ಪರ್ಯಂತ ನಿಷ್ಠರಾಗಿದ್ದರು. ಪರಿಷ್ಕರಣವಾದದ ವಿರುದ್ಧ ನಡೆದ ಹೋರಾಟದಲ್ಲಿ ಪ್ರಮುಖ ಪಾತ್ರ ಅವರು ವಹಿಸಿದ್ದರು.

ಸಿಪಿಐನಿಂದ ಹೊರಬಂದು ಸಿಪಿಐ(ಎಂ) ಸ್ಥಾಪಿಸಿದ 32 ರಾಷ್ಟ್ರೀಯ ಮಂಡಳಿ ಸದಸ್ಯರಲ್ಲಿ ಅವರು ಒಬ್ಬರಾಗಿದ್ದರು. 1964 ರ 7ನೇ

ಅವರ ಸಾವಿನ ಮೂಲಕ ಸಿಪಿಐ(ಎಂ) ಮತ್ತು ಎಡ ಚಳುವಳಿ ಒಬ್ಬ ಅನುಭವಿ ಜನನಾಯಕನನ್ನು ಕಳೆದುಕೊಂಡಿದೆ. ಪೊಲಿಟ್‌ಬ್ಯೂರೋ, ಪ್ರೀತಿಪಾತ್ರ ಸಂಗಾತಿ ಹಾಗೂ ಸರಿಸಾಟಿ ಇಲ್ಲದ ನಾಯಕನ ನಿಧನಕ್ಕೆ ಸಂತಾಪ ಸೂಚಿಸುತ್ತಿವೆ. ಅವರ ಪತ್ನಿ ಶಾರಧಾ ಟೀಚರ್, ಅವರ 4 ಮಕ್ಕಳಿಗೆ ಮತ್ತು ಇನ್ನಿತರ ಅವರ ಕುಟುಂಬಕ್ಕೆ ಸಾಂತ್ವನ ತಿಳಿಸಿದೆ.

ಕಿಲುಬುಗಟ್ಟಿದ ಅಧಿಕಾರ ಯಂತ್ರ, ಅಸಂಖ್ಯಾತ ಫೈಲ್‌ಗಳನಡುವೆ ನನ್ನ ಸಂಗಾತಿಗಳನ್ನು ಮರೆತೇನೆ?



ನಾನು ಪಕ್ಷದ ಒಬ್ಬ ಅಮೂಲ್ಯ ಸದಸ್ಯನಾಗಿ ಹೆಚ್ಚು ಹೆಚ್ಚಾಗಿ ದುಡಿಯಬೇಕಿದೆ ಎಂದು ಮತ್ತೆ ಮತ್ತೆ ಅನಿಸುತ್ತಿದೆ. ಅಂತಹ ಅನೇಕ ಸಂಗಾತಿಗಳು ನನ್ನ ಕಣ್ಣೆದುರು ಬೆಳಗಿದ್ದಾರೆ, ಇನ್ನೂ ಅನೇಕರು ಅಮೂಲ್ಯ ಕಾರ್ಯಕರ್ತರು ನನ್ನ ಜೊತೆಗಿದ್ದಾರೆ, ದುಡಿಯುತ್ತಿದ್ದಾರೆ.

ನನ್ನ ಹಳ್ಳಿಯ ಬಡ ರೈತರು ಅವರ ಹಸಿವು, ಪುಟ್ಟ ಗುಡಿಸಲು, ಬಟ್ಟೆ ಇಲ್ಲದ ಮಕ್ಕಳು ಇವೆಲ್ಲವನ್ನು ನೋಡಿದಾಗ ಅವರಿಗಾಗಿ ಮಾಡುತ್ತಿರುವ ನನ್ನ ಕೆಲಸಗಳು ಯಾವುದಕ್ಕೂ ಸಾಲದಾಗಿದೆ ಎಂದು ಅಂದುಕೊಂಡೆ. ಅವರಿಗಾಗಿ ನಾನು ಮಾಡಬೇಕಿರುವುದು ಏನು? ಮುಖ್ಯಮಂತ್ರಿಯಾಗಿಯೂ ಆಡಳಿತಶಾಹಿಯ ಸಮಸ್ಯೆ ಹಾಗೂ ಅಸಂಖ್ಯಾತ ಫೈಲುಗಳ ಮಧ್ಯೆ ಬಿಡುವಿರದ ದಿನಗಳಲ್ಲಿ ನಾನು ನನ್ನ ರೈತ ಸಂಗಾತಿಗಳನ್ನು ಮರೆತೆನೆ? ಸರ್ಕಾರದ ಜಡ ಯಂತ್ರದ ಜೊತೆಯಲ್ಲಿ ಮಾಡಬೇಕಾದ ಈ ಕೆಲಸಗಳಲ್ಲಿ ನಾನು ಎಷ್ಟರಮಟ್ಟಿಗೆ ಯಶಸ್ವಿಯಾಗಬಲ್ಲೆ? ನಾನಷ್ಟೆ ಅಲ್ಲದೆ ಪ್ರತಿಯೊಬ್ಬ ಪ್ರಾಮಾಣಿಕ ಸಂಗಾತಿಯೂ ಈ ರೀತಿಯ ಪ್ರಶ್ನೆಗಳನ್ನು ಕೇಳಿಕೊಳ್ಳಲೇಬೇಕು. ನನ್ನ ಹಾಗೆಯೇ ಅವರು ಕೂಡ ಈ ರೀತಿಯ ಅತೃಪ್ತಿಯನ್ನು ಅನುಭವಿಸಬೇಕು. ಏನಾದರೂ ಸ್ವಲ್ಪ ಸರ್ಕಾರ ಮಟ್ಟದಲ್ಲಿ ಮಾಡಿದಾಗಲೂ ಅದು ಬಡ ರೈತರಿಗೆ ತಲುಪುವುದೇ ಇಲ್ಲ. ಕೆಳಗಡೆ ಹೋಗುತ್ತಾ ಹೋಗುತ್ತಾ ಫಲಗಳು ಚದುರಿಹೋಗಿ ಯಾರಿಗೆ ದಕ್ಕಬೇಕಿತ್ತೋ ಅವು ಅವರ ಹತ್ತಿರಕ್ಕೂ ಬಂದಿರುವುದಿಲ್ಲ. ಇದು ಈಗಲೂ ನನ್ನನ್ನು ದುಃಖಿತನನ್ನಾಗಿಸಿದೆ. ಸರ್ಕಾರದ ಜಿಡ್ಡುಗಟ್ಟಿದ ಸಂರಚನೆಗಳು ನನ್ನನ್ನೂ ನಿರ್ಬಂಧಿಸಿದ್ದಾಗಲೂ ನಾನು ಮಾಡಬಹುದಾದದ್ದನ್ನೆಲ್ಲಾ ಮಾಡುತ್ತಿದ್ದೆನೆಂದು ನನ್ನ ರೈತ ಸಂಗಾತಿಗಳು ಭಾವಿಸಿದ್ದಾರೆಯೆ?

ರೈತರು ತಮ್ಮ ಎಲ್ಲಾ ಕನಸುಗಳು ಮತ್ತು ಭರವಸೆಯ ಈಡೇರಿಕೆಗೆ ಹೋಗುವ ದಾರಿಯ ಹೆಬ್ಬಾಗಿಲಾಗಿಯೇ ನನ್ನನ್ನು ಪರಿಗಣಿಸಿದ್ದಾರೆ. ನಾನು ಅವರ ನಂಬುಗೆಯ ಸೇವಕ ಮತ್ತು ಕೆಲಸಗಾರ. ನನ್ನ ದುಃಖ ಸಂತೋಷ, ಅಷ್ಟೇ ಏಕೆ ನನ್ನ ಇಡೀ ಜೀವನ ರೈತ ಸಂಗಾತಿಗಳಿಗಾಗಿಯೇ ಮೀಸಲಾಗಿದೆ. ಅವರೇ ನನ್ನ ಮಾರ್ಗದರ್ಶಕರು ಹಾಗೂ ಶಿಕ್ಷಕರು. ನನ್ನ ವಿಜಯದ ರೂವಾರಿಗಳು ಕೂಡ ಅವರೆ, ನಾನು ನಾಳೆ ಏನಾಗಬೇಕು ಎಂಬುದನ್ನು ನಿರ್ಧರಿಸಬೇಕಾದವರು ಅವರೇ.

ಸಂಗಾತಿಗಳೆ, ಅತ್ಯಂತ ವಿನೀತನಾಗಿ ನಿಮ್ಮ ಆದೇಶಗಳಿಗೆ ಕಾಯುತ್ತೇನೆ. ನಿಮ್ಮ ತೃಪ್ತಿಗೆ ಭಂಗ ತರದಂತೆ ನಿಮ್ಮ ಆದೇಶಗಳನ್ನು ಪೂರೈಸಲು ನಾನು ಇನ್ನೂ ಹೆಚ್ಚು ಶಕ್ತಿ ಮತ್ತು ಸಾಮರ್ಥ್ಯವನ್ನು ಹೊಂದಬೇಕೆಂಬ ಯೋಚನೆಯೊಂದನ್ನು ಹೊರತುಪಡಿಸಿ ಇನ್ನಾವುದೇ ಯೋಚನೆ ಮಾಡೆನೆ."

(ಇ.ಕೆ.ನಾಯನಾರ್‌ರವರ ಆತ್ಮಕಥೆ 'ನನ್ನ ಹೋರಾಟಗಳು' ಗ್ರಂಥದಿಂದ 'ಭೂಗತ ದಿನಗಳು ಮತ್ತು ಪಕ್ಷಕ್ಕಾಗಿ ನನ್ನ ಕೆಲಸ'- ಅಧ್ಯಾಯದಿಂದ)

ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಮೇಲೆ ಗುರುತರವಾದ ಹೊಣೆಯಿದೆ

ಹರ್ಕಿಶನ್ ಸಿಂಗ್ ಸುರ್ಜಿತ್

ಚುನಾವಣಾ ಫಲಿತಾಂಶಗಳನ್ನು ವಿಶ್ಲೇಷಿಸಿರುವ ಸುರ್ಜಿತ್‌ರವರು, ಎಡಪಕ್ಷಗಳ ಮೇಲಿರುವ ಹೊಣೆಗಾರಿಕೆಯನ್ನು ಗುರುತಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಸೋನಿಯಾ ಗಾಂಧಿಯುವರ ವಿರುದ್ಧ ಅವರ ವಿದೇಶೀ ಮೂಲವನ್ನು ಕುರಿತಂತೆ ಶ್ರೀಮತಿ ಸುಷ್ಮಾಸ್ವರಾಜ್, ಗೋವಿಂದಾಚಾರ್ಯ ಮತ್ತು ಶ್ರೀಮತಿ ಉಮಾ ಭಾರತಿಯುವರ ಇತ್ತೀಚಿನ ಅರಚಾಟ ಹತಾಶೆಯಿಂದ ಹೊಮ್ಮಿದ್ದು ಎಂಬುದಂತೂ ಖಂಡಿತ. ಆರ್‌ಎಸ್‌ಎಸ್ ಉದ್ರೇಕಿಸಿದ ಈ ಅರಚಾಟವನ್ನು ಜನಸಾಮಾನ್ಯರು ಮಾತ್ರವಲ್ಲ ನಿನ್ನೆಮೊನ್ನೆಯವರೆಗೂ ಬಿಜೆಪಿಯು ಪರಾಕು ಹಾಕುತ್ತಿದ್ದ ಮಾಧ್ಯಮಗಳ ಒಂದು ದೊಡ್ಡ ವಿಭಾಗವೂ ಹೀಗಳೆದಿದೆ.

ಬಿಜೆಪಿಯ ಅರಚಾಟ ಕಳೆದ ಆರು ವರ್ಷಗಳ ಕಾಲ ಪ್ರಭುತ್ವಯಂತ್ರದ ಮೇಲಿದ್ದ ತಮ್ಮ ಹತೋಟಿ ಈಗ ಕೈತಪ್ಪಿಹೋಯಿತಲ್ಲಾ ಎಂದು ಸಂಘ ಪರಿವಾರದ ಹತಾಶೆಯನ್ನು ಬಯಲಿಗೆಳೆದಿದೆಯಷ್ಟೆ ಅಲ್ಲ ಅದರ ಫ್ಯಾಸಿಸ್ಟ್ ಮಾದರಿ ವಾಸ್ತವತೆಯನ್ನು ಬೆಳಕಿಗೆ ತಂದಿದೆ. ಯಾವುದೇ ಫ್ಯಾಸಿಸ್ಟ್ ಮಾದರಿ ಸಂಘಟನೆಯಂತೆ. ಆರ್‌ಎಸ್‌ಎಸ್ ಕೂಡಾ ತನ್ನ ರಾಜಕೀಯ ಮುಖವಾಡದ ಬಿಜೆಪಿಯನ್ನು ಮತ್ತು ಮತದಾರರನ್ನು ಸೆಳೆಯಲು ಎತ್ತಿದ ವಿದೇಶಿ ಮೂಲದ ಪ್ರಶ್ನೆಯನ್ನು ನಿರ್ಣಾಯಕವಾಗಿ ತಿರಸ್ಕರಿಸಿದ ಜನರ ತೀರ್ಪನ್ನು ಒಪ್ಪಲು ಸಿದ್ಧವಿಲ್ಲ.

ಬಿಜೆಪಿಯ ಅರಚಾಟ ಕಳೆದ ಆರು ವರ್ಷಗಳ ಕಾಲ ಪ್ರಭುತ್ವಯಂತ್ರದ ಮೇಲಿದ್ದ ತಮ್ಮ ಹತೋಟಿ ಈಗ ಕೈತಪ್ಪಿಹೋಯಿತಲ್ಲಾ ಎಂದು ಸಂಘ ಪರಿವಾರದ ಹತಾಶೆಯನ್ನು ಬಯಲಿಗೆಳೆದಿದೆಯಷ್ಟೆ ಅಲ್ಲ ಅದರ ಫ್ಯಾಸಿಸ್ಟ್ ಮಾದರಿ ವಾಸ್ತವತೆಯನ್ನು ಬೆಳಕಿಗೆ ತಂದಿದೆ.

ಗುಜರಾತಿನ ಕಥೆ

ಈ ದೇಶದ ಜನತೆ ಬಿಜೆಪಿಯನ್ನು ಸಕಾರಾತ್ಮಕವಾಗಿ ನಿರ್ಣಾಯಕವಾಗಿ ತಿರಸ್ಕರಿಸಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ. ಈ ತಿರಸ್ಕಾರ ಕೇವಲ ಸಂಖ್ಯೆಯಲ್ಲಷ್ಟೇ ಅಲ್ಲ, ರಾಜಕೀಯವಾಗಿ ಕೂಡಾ. ಕಾಂಗ್ರೆಸ್ ಪಕ್ಷ ದೇಶಾದ್ಯಂತ ಹೆಚ್ಚು ಸ್ಥಾನಗಳನ್ನಷ್ಟೇ ಅಲ್ಲ, ಹೆಚ್ಚು ಮತಗಳನ್ನು ಪಡೆದಿದೆ. ಸಂಪೂರ್ಣ ಜಾತ್ಯತೀತ ಬಣವನ್ನು ಗಮನಕ್ಕೆ ತಗೊಂಡರೆ ಬಿಜೆಪಿಯ ನಷ್ಟ ಇನ್ನಷ್ಟು ಎದ್ದು ಕಾಣುತ್ತದೆ. ಈ ಪಕ್ಷ ಮತ್ತು ಅದರ ಮಿತ್ರರು ಆಂಧ್ರಪ್ರದೇಶ, ತಮಿಳುನಾಡು, ಪಶ್ಚಿಮ ಬಂಗಾಳ, ಝಾರ್ಖಂಡ್, ದಿಲ್ಲಿ, ಹರ್‍ಯಾಣ ಮತ್ತು ಹಿಮಾಚಲ ಪ್ರದೇಶದಲ್ಲಿ ಸಂಪೂರ್ಣ ಪರಾಭವ ಉಂಡಿದ್ದಾರೆ.

ಈ ಕೇಸರೀ ಪಕ್ಷ ರಾಜಕೀಯವಾಗಿ ಅನುಭವಿಸಿದ ನಷ್ಟ ಇನ್ನಷ್ಟು ಅರ್ಥಪೂರ್ಣ. ಹಿಂದುತ್ವದ ಪ್ರಯೋಗಶಾಲೆಯೆಂದು ಹೇಳಲಾದ ಗುಜರಾತಿನ ಉದಾಹರಣೆಯನ್ನೇ ತಗೊಳ್ಳಿ. ಇತ್ತೀಚೆಗಷ್ಟೇ ವಿಹೆಚ್‌ಪಿ ಮುಖಂಡ ಅಶೋಕ್ ಸಿಂಘಾಲ್ ಮುಸ್ಲಿಮ್‌ರ ಸಾಮೂಹಿಕ ಹತ್ಯಾಕಾಂಡ ಒಂದು ಯಶಸ್ವಿ ಪ್ರಯೋಗ, ಅದನ್ನು ಇತರ ರಾಜ್ಯಗಳಲ್ಲೂ ಪುನರಾವರ್ತಿಸಬೇಕು ಎಂದಿದ್ದರು. ಸಹಜವಾಗಿಯೇ ಬಿಜೆಪಿ ತನ್ನ ಬಲವನ್ನು 21 (26 ರಲ್ಲಿ) ರಿಂದ 23 ಅಥವಾ 24 ಕ್ಕೆ ಏರಿಸುವ ನಿರೀಕ್ಷೆಯಿಟ್ಟುಕೊಂಡಿತ್ತು. ಆದರೆ ಕೊನೆಗೆ ಕಂಡದ್ದೇನು? ಪ್ರಭುತ್ವಯಂತ್ರವನ್ನು ಬಳಸಿ ಎಷ್ಟೇ ಭಯ ಹುಟ್ಟಿಸಲು ಪ್ರಯತ್ನಿಸಿದರೂ ಜಾತ್ಯಾತೀತ ಮನೋಭಾವದ ಜನ ದೊಡ್ಡ ಸಂಖ್ಯೆಯಲ್ಲಿ ಬಿಜೆಪಿಯ ವಿರುದ್ಧ ಮತನೀಡಿದರು. ಅದರ ಬಲ 14 ಕ್ಕೆ ಇಳಿಯಿತು. ಅಷ್ಟೇ ಅಲ್ಲ ಇದರಲ್ಲಿ 6 ಸ್ಥಾನಗಳಲ್ಲಿ ಅದರ ನಿಜವಾದ ಅಂತರ 10,000 ಕ್ಕಿಂತಲೂ ಕಡಿಮೆ. ಅದರಲ್ಲಿ 4 ರಲ್ಲಿ 5000 ಕ್ಕಿಂತಲೂ ಕಡಿಮೆ. ಕಾಂಗ್ರೆಸ್ 182 ರಲ್ಲಿ 92 ವಿಧಾನಸಭಾ ಕ್ಷೇತ್ರಗಳಲ್ಲಿ ಮುಂದಿದ್ದರೆ ಬಿಜೆಪಿ 90 ರಲ್ಲಿ ಮಾತ್ರ ಮುಂದಿತ್ತು. ಕಾಂಗ್ರೆಸ್ ಈ ರಾಜ್ಯದಲ್ಲಿ ಇನ್ನಷ್ಟು ಐಕ್ಯತೆಯಿಂದಿದ್ದರೆ ಬಿಜೆಪಿಯ ಪರಾಭವ ಇನ್ನಷ್ಟು ಆಳವಾಗಿರುತ್ತಿತ್ತು.



ಗುಜರಾತಿನ ಗಾಂಧಿನಗರದಲ್ಲಿ ಉಪ ಪ್ರಧಾನಿಮಂತ್ರಿ ಎಲ್.ಕೆ.ಅಡ್ವಾಣಿಯವರೇನೋ ಗೆದ್ದರು. ಆದರೆ ಅಲ್ಲಿ ನಡೆದ ಮತದಾನ ಕೇವಲ ಶೇ 37 ಮಾತ್ರ. ಅವರ ಬಾಸ್ ಅಂದರೆ ಎ.ಬಿ.ವಾಜಪೇಯಿಯವರ ಲಕ್ನೌ ಕ್ಷೇತ್ರದಲ್ಲಿ ನಡೆದ ಮತದಾನ ಇನ್ನೂ ಕಡಿಮೆ - ಶೇ 35. ಬಿಜೆಪಿಯ ಬಗ್ಗೆ ಜನಗಳಲ್ಲಿ ಇರುವ ಉತ್ಸಾಹ ಎಷ್ಟು ಎಂಬುದನ್ನು ಇದು ತೋರಿಸುತ್ತದೆ.

ಬಿಜೆಪಿಯ ಕೋಮುವಾದಿ ಮತ್ತು ಸೋದರ ಹತ್ಯೆಯ ರಾಜಕೀಯದ ಬಗ್ಗೆ ಜನಗಳಲ್ಲಿ ಮೌನವಾಗಿ ಎಷ್ಟು ಆಳವಾದ ಜುಗುಪ್ಸೆ ಉಂಟಾಗಿತ್ತು ಎಂಬುದನ್ನು ಗುಜರಾತಿನ ಫಲಿತಾಂಶ ತೋರಿಸುತ್ತದೆ. ಅವಕಾಶ ಸಿಕ್ಕ ಕೂಡಲೇ ಅವರು ಅದನ್ನು ವ್ಯಕ್ತಪಡಿಸಿದ್ದಾರೆ. ಬಿಜೆಪಿಗೆ ಈ ಏಟು ನೀಡಿದ್ದು ಮುಸ್ಲಿಂ ಮತದಾರರಷ್ಟೇ ಅಲ್ಲ. ವಾಸ್ತವವಾಗಿ ಬಹಳಷ್ಟು ಮುಸ್ಲಿಂರು ಭಯದ ವಾತಾವರಣದಿಂದಾಗಿ ಮತಗಟ್ಟೆಗಳಿಗೆ ಹೋಗಲಿಲ್ಲ. ವಾಸ್ತವವಾಗಿ ಬಿಜೆಪಿಗೆ ಏಟು ನೀಡಿದ್ದು ಹಿಂದೂಗಳು ಸೇರಿದಂತೆ ಜಾತ್ಯತೀತ ಮನೋಭಾವದ ಜನತೆ. ಬೆಸ್ಟ್ ಬೇಕರಿ ಮೊಕದ್ದಮೆಯಲ್ಲಿ ಸುಪ್ರಿಂಕೋರ್ಟ್‌ನ ಆದೇಶ ಗುಜರಾತಿನ ಜಾತ್ಯತೀತ ಜನಸಮೂಹಗಳ ನೈತಿಕ ಸ್ಥೈರ್ಯವನ್ನು ಇನ್ನಷ್ಟು ಹೆಚ್ಚಿಸಿತು.

ಕೋಮುವಾದಕ್ಕೆ ತಿರಸ್ಕಾರ

ಬಿಜೆಪಿಯ ಸೋದರಹತ್ಯೆಯ ರಾಜಕೀಯವನ್ನು ಜನತೆ ತಿರಸ್ಕರಿಸಿದ್ದು ಗುಜರಾತಿನಲ್ಲಷ್ಟೇ ಅಲ್ಲ. ಈ ಕಥೆ ದೇಶದ ಇತರೆಡೆಗಳಲ್ಲೂ ಕಂಡುಬಂತು. ದೇವಸ್ಥಾನ ಆಂದೋಲನದ ಘಟಾನುಘಟಿಗಳಲ್ಲಿ ಒಬ್ಬರಾದ ಹಾಗೂ ಕೇಸರೀಕರಣದ ದಪ್ಪ ಚರ್ಮದ ಪ್ರತಿಪಾದಕರಲ್ಲೊಬ್ಬರಾದ ಮುರಳಿ ಮನೋಹರ ಜೋಶಿ ಅಲಹಾಬಾದಿನಲ್ಲಿ ಸೋತಿದ್ದರೆ, ಬಿಜೆಪಿಯ ಉತ್ತರ ಪ್ರದೇಶ ಅಧ್ಯಕ್ಷ ವಿನಯ್ ಕಟಿಯಾರ್ ಸುರಕ್ಷಿತ ಸ್ಥಳ ಎಂದು ಲಖಿಮ್‌ಪುರಕ್ಕೆ ಹೋದರೆ ಅಲ್ಲಿಯೂ ಸೋಲಬೇಕಾಯಿತು. ದೇವಸ್ಥಾನ ಆಂದೋಲನದ ಇತರ ಕೆಲವು ಪ್ರತಿಷ್ಟಿತರಾದ ಡಿ.ಬಿ.ರಾಯ್, ವೇದಾಂತಿ, ಸ್ವಾಮಿ ಚಿನ್ಮಯಾನಂದರಂತವರು ಸೋತಿದ್ದಾರೆ. ಕಲ್ಯಾಣ್ ಸಿಂಗ್ ಮತ್ತು ಅಂತಹ ಇನ್ನೂ ಕೆಲವರು ಕಡಿಮೆ ಅಂತರದಿಂದ ಹೇಗೋ ಗೆದ್ದುಬಂದಿದ್ದಾರೆ.

ಅಷ್ಟೇ ಅಲ್ಲ ಫೈಜಾಬಾದ್, ಮಥುರಾ ಮತ್ತು ವಾರಣಾಸಿಗಳಲ್ಲೂ ಬಿಜೆಪಿ ಪರಾಭವಗೊಂಡಿದೆ. ಧ್ವಂಸಗೊಂಡ ಬಾಬ್ರಿ ಮಸೀದಿ ಇದ್ದದ್ದು ಫೈಜಾಬಾದ್ ಕ್ಷೇತ್ರದಲ್ಲಿ ಎಂದು ನೆನಪಿಸಬೇಕಾಗಿಲ್ಲ. ಮಥುರಾ, ವಾರಣಾಸಿಗಳಲ್ಲಿನ ಮಸೀದಿಗಳ ವಿರುದ್ಧವೂ ಸಂಘ ಪರಿವಾರ ಕೋಮು ಭಾವೋದ್ವೇಗವನ್ನು ಬಡಿದೆಬ್ಬಿಸಲು ಪ್ರಯತ್ನಿಸಿತ್ತು.

ದೇಶದೆಲ್ಲೆಡೆ ಜನತೆ ಹೇಗೆ ಬಿಜೆಪಿ ಮತ್ತು ಅವರ ರಾಜಕೀಯವನ್ನು ಸಕಾರಾತ್ಮಕವಾಗಿ ತಿರಸ್ಕರಿಸಿದ್ದಾರೆ ಎಂಬುದಕ್ಕೆ ಇನ್ನೊಂದು ಸಾಕ್ಷಿಯಿದೆ. ಸ್ಪರ್ಧೆಯಲ್ಲಿದ್ದ ಎನ್‌ಡಿಎ ಮಂತ್ರಿಗಳೆಲ್ಲಾ ದುಸ್ವಪ್ನವನ್ನು ಕಾಣುತ್ತಿದ್ದಾರೆ, ಇವರಲ್ಲಿ ಹಲವು ತಲೆಗಳುರುಳಿದರೆ ಆಶ್ಚರ್ಯ ವಿಲ್ಲ. ಅತಿ ಹೆಚ್ಚು ಮಂತ್ರಿಗಳು ಉರುಳಿದ ದಾಖಲೆಯನ್ನೇ ನಿರ್ಮಿಸ ಬಹುದೇನೋ ಎಂದು ನಾವು ಹೇಳಿದ್ದೆವು.

ಎಡಪಕ್ಷಗಳ ಪಾತ್ರ ಈ ಸರ್ಕಾರ ತನ್ನ ಅವಧಿಯನ್ನು ಪೂರೈಸುವಂತೆ ನೋಡಿ ಕೊಳ್ಳುವುದಕ್ಕೆ ಸೀಮಿತವಾಗಿರುವುದಿಲ್ಲ. ಇನ್ನೂ ದೊಡ್ಡ ಪಾತ್ರವಿದೆ - ಅದೆಂದರೆ ಕೋಮುವಾದಿ ಶಕ್ತಿಗಳು ಮತ್ತೆ ತಮ್ಮ ಹೊಲಸು ರಾಜಕೀಯ ತಲೆಯೆತ್ತದಂತೆ ನೋಡಿಕೊಳ್ಳುವುದು,

ಅದೇ ಈಗ ಆಗಿದೆ. ಎರಡು ಡಝನ್‌ಗಳಿಗೂ ಹೆಚ್ಚು ಮಂತ್ರಿಗಳು ಸೋತಿದ್ದಾರೆ. ಕಳೆದ 25 ವರ್ಷಗಳಲ್ಲಿ ಇಷ್ಟೊಂದು ಮಂತ್ರಿಗಳು ಸೋತಿರಲಿಲ್ಲ. ಇನ್ನೊಬ್ಬ ಮಂತ್ರಿ ನಿತೀಶ್ ಕುಮಾರ್ ಎರಡು ಕಡೆ ಸ್ಪರ್ಧಿಸಿದ್ದರಿಂದಷ್ಟೇ ಲೋಕಸಭೆ ಪ್ರವೇಶಿಸಲು ಸಾಧ್ಯವಾಯಿತು. ಬಿಜೆಪಿ ಮುಸ್ಲಿಂ ಮುಖವಾಡ ಶಾನವಾಜ್ ಖಾನ್ ಕಿಶನ್ ಗಂಜ್‌ನಿಂದ ಸೋತಿದ್ದಾರೆ. ಕಾಶ್ಮೀರವನ್ನು ಬಿಟ್ಟರೆ ಮುಸ್ಲಿಮರು ಬಹುಮತದಲ್ಲಿರುವ ಚುನಾವಣಾ ಕ್ಷೇತ್ರ ಇದೊಂದೇ.

ಸೋಲುಂಡ ಪ್ರಮುಖರಲ್ಲಿ ಲೋಕಸಭಾಧ್ಯಕ್ಷ ಮನೋಹರ ಜೋಷಿ, ಇನ್ನೊಬ್ಬ ಶಿವಸೇನಾ ಮುಖಂಡ ಸಂಜಯ್ ನಿರುಪಮ್ ಕೂಡಾ ಇದ್ದಾರೆ. ಅರಿಫ್ ಮಹಮ್ಮದ್ ಖಾನ್ ಭುಪೇನ್ ಹಜಾರಿಕಾರಂತಹ ಟೋಪಿ ಬದಲಿಸಿದವರೂ ಸೋತಿದ್ದಾರೆ.

ಫ್ಯಾಸಿಸ್ಟ್ ಮಾದರಿ ಮುಖ

ಹೀಗೆ ಜನತೆ ಬಿಜೆಪಿಯ ಕೋಮುವಾದವನ್ನು, ಜತೆಗೆ ಸೋನಿಯಾಗಾಂಧಿಯ ವಿದೇಶಿ ಮೂಲದ ಪ್ರಶ್ನೆಯನ್ನು ನಿರ್ಣಾಯಕವಾಗಿ ತಿರಸ್ಕರಿಸಿದ್ದಾರೆ. ವಾಸ್ತವವಾಗಿ ವಿದೇಶಿ ಮೂಲದ ಪ್ರಶ್ನೆ ಒಂದು ಪ್ರಶ್ನೆಯೇ ಅಲ್ಲ. ಮತ ಬಾಚಿಕೊಳ್ಳಲು ಬಿಜೆಪಿ ಅದನ್ನೊಂದು ಚುನಾವಣಾ ಪ್ರಶ್ನೆಯಾಗಿ ಮಾಡಿತ್ತು. "ಬಿಜೆಪಿ ರಣನೀತಿಕಾರರು ಚುನಾವಣೆಯನ್ನು ಸೋನಿಯಾರ ಮೂಲದ ಜನಾಭಿಪ್ರಾಯ ಸಂಗ್ರಹಣೆಯಾಗಿ ಪರಿವರ್ತಿಸುವ ಆಶಯ ಹೊಂದಿದ್ದರೆ, ಜನವೆ ಈ ಮತಿಹೀನ ಹುಸಿಭಯವನ್ನು ಅಷ್ಟೇ ದೃಢತೆಯ... ತಿರಸ್ಕರಿಸಿದಂತೆ ಕಾಣುತ್ತದೆ" ಎಂದಿದೆ ಮೆ... ರ ಟೈಂಸ್ ಆಫ್ ಇಂಡಿಯಾದ ಸಂಪಾದಕೀ...


ಶ್ರೀಮತಿ ಸೋನಿಯಾರನ್ನು ಕಾಂ... ಪ್ರಧಾನಮಂತ್ರಿ ಅಭ್ಯರ್ಥಿಯ... ಮುಂದಿಡದಿದ್ದರೂ ಬಿಜೆಪಿ 'ಸೋನಿಯಾ... ವಾಜಪೇಯಿ' ಎಂದು ಪ್ರಚಾರ ಮಾ... ಪ್ರಯತ್ನಿಸಿತ್ತು. ಈ ದೇಶದ ಜನತೆ ಅದನ್ನು ಪಕ್ಕಕ್ಕೆ ತಳ್ಳಿದ್ದಾರೆ. ಕಾಂಗ್ರೆಸ್‌ನ ಅನಿರೀಕ್ಷಿತ ಗೆ... ಈ ಪ್ರಶ್ನೆಯನ್ನು ಎಂದೆಂದಿಗೂ ಇತ್ಯರ್ಥ ಮಾ... ಎಂದು ಟೈಂಸ್ ಆಫ್ ಇಂಡಿ... ಸಂಪಾದಕೀಯ ಅಭಿಪ್ರಾಯ ಪಟ್ಟಿದೆ.

ಬಿಜೆಪಿ ಮುಖಂಡರಾದ ಶ್ರೀಮತಿ ಸು... ಸ್ವರಾಜ್ ತಾನು ಹಾಗೂ ತನ್ನ ಪತಿ ಶ್ರೀ... ಸೋನಿಯಾಗಾಂಧಿ ಪ್ರಧಾನಮಂತ್ರಿಯಾದರೆ ರಾಜ್ಯಸಭಾ ಸ್ಥಾನಗಳಿಗೆ ರಾಜೀನಾ... ಕೊಡುವುದಾಗಿ ಬೆದರಿಕೆ ಹಾಕಿದ್ದರೆ, ಅಜ್ಞಾತವಾಸದಲ್ಲೆಲ್ಲೋ ಇದ್ದ ಗೋವಿಂದಾಚಾ... 'ರಾಷ್ಟ್ರೀಯ ಸ್ವಾಭಿಮಾನ ಆಂದೋ... ಆರಂಭಿಸುವ ಬೆದರಿಕೆ ಹಾಕಿದ ಹಿನ್ನೆಲೆಯ... ಸಂಪಾದಕೀಯ ಹೀಗೆ ಹೇಳಿತ್ತು. ಈಗ ಕಾಂ... ಅಧ್ಯಕ್ಷರು ಈ ಸ್ಥಾನವನ್ನು ಸ್ವೀಕರಿಸ... ನಿಕಾರಿಸಿರುವುದರಿಂದ ಈ ಕೇಸರೀ ಮುಖ... ಆತ್ಮಗಳಿಗೆ ಚಿರಶಾಂತಿ ದೊರೆಯಲಿ! ಆದರೆ ಬೆದರಿಕೆ ಜನಾದೇಶದ ಮತ್ತು ಜನರ ಇಚ್... ಫ್ಯಾಸಿಸ್ಟ್ ಮಾದರಿಯ ತಿರ... ಎಂಬುದಂತೂ ವಾಸ್ತವ ಸಂ... ಆರ್‌ಎಸ್‌ಎಸ್ ಮತ್ತು ಅ... ಅಂಗ ಸಂಘಟನೆಗಳಿ... ಬೇರೇನೂ ತಾನೇ ನಿರೀಕ್ಷಿ... ಸಾಧ್ಯ?

ಕೇಸರೀ ಪಡೆ ತನ್ನ ಫ್ಯಾ... ಮಾದರಿಯ ಯೋಜ... ವ್ಯತಿರಿಕ್ತವಾದ ಯಾವು... ಪಾಠವನ್ನು ಕಲಿಯುವು... ಎಂಬುದು ರಾಜಕೀ... ಅರಿಪಿರುವ ಎಲ್ಲರಿಗೂ ತಿ... ವಿಷಯ. ಒಂದು ಉದಾಹ... ನೋಡಿ - ಉತ್ಪ್ರೇಕ್ಷೆ... ಮಾತುಗಳಿಗೆ ಹೆಸರಾದ ... ಶ್ರೀಮತಿ ಸುಷ್ಮಾಸ್ವರಾಜ್ ಇದೇ ಪ್ರಶ್ನೆಯ... ದೇಶಿ-ವಿದೇಶಿ ಪ್ರಶ್ನೆಯ ಮೇಲೆ ಬಳ್ಳಾರಿಯ... ಶ್ರೀಮತಿ ಸೋನಿಯಾ ವಿರುದ್ಧ ಸ್ಪರ್ಧಿಸಿ ಜನಗಳಿ... ಮುಖಭಂಗ ಅನುಭವಿಸಿ ದ್ದರು. ಹೀಗೆ ಶ್ರೀಮ... ಸ್ವರಾಜ್ ಮತ್ತು ಅವರಂತ ಹವರ ಬೊಬ್ಬೆ ಸಂ... ಪರಿವಾರದ ನಿಜವಾದ ಫ್ಯಾಸಿಸ್ಟ್ ಮಾ... ಮುಖವನ್ನು ಬಯಲಿಗೆಳೆದಿದೆ.

ಜುಗುಪ್ಸೆಯ ಭಾವನೆ


ಇದು ದೇಶದ ಸರಿಯಾದ ಯೋಚನೆ... ಜನಗಳನ್ನೆಲ್ಲಾ ಸಿಟ್ಟಿಗೆಬ್ಬಿಸಿದೆ. ಉದಾಹರಣೆ...



ಕೇಂದ್ರ ಕಾನೂನು ಮಂತ್ರಿ ಹಾಗೂ ಹಿರಿ... ಸುಪ್ರೀಂಕೋರ್ಟ್ ವಕೀಲ ಶಾಂತಿ ಭೂಷ... "ನನಗೆ 1977 ರಿಂದ ಸುಷ್ಮಾಸ್ವರಾಜ್ ಗೊತ್ತು... ಅವರ ಸಾಮರ್ಥ್ಯ, ಜ್ಞಾನ ಮತ್ತು ವಾಕ್ಪಟುತ್ವ... ಬಗ್ಗೆ ನನಗೆ ಗೌರವವಿದೆ. ಆದ್ದರಿಂದ ಈ ಬೊಬ್...

...ವಾದ ಹತಾಶ ಭಾವನೆ ಕಾರಣವಿರಬಹುದು ...ಸುತ್ತದೆ" ಎಂದು ಬರೆದಿದ್ದಾರೆ (ಹಿಂದೂ, ಮೇ ...)

ಭಾರತದ ಸಂವಿಧಾನದ ಸಂಬಂಧಪಟ್ಟ ...ಮುಗಳನ್ನು ಉದ್ಧರಿಸುತ್ತಾ ಈ ಕಾನೂನು ಪಟು ...ವಿಧಾನ ಎಲ್ಲಾ ಭಾರತೀಯ ನಾಗರಿಕರಿಗೆ ...ಮಾನ ಹಕ್ಕುಗಳನ್ನು ನೀಡುತ್ತದೆ, ಅದು ...ನ್ಮಸ್ಥಳದ ಆಧಾರದಲ್ಲಿ ನಾಗರಿಕರ ನಡುವೆ ...ಯಾವುದೇ ಬೇಧ ಮಾಡುವುದಿಲ್ಲ" ಎನ್ನುತ್ತಾರೆ.



'ನಾಗರಿಕರ ನಡುವೆ ಸಮಾನತೆ ಮತ್ತು ಜನ್ಮದ ಸ್ಥಳದ ಆಧಾರದಲ್ಲಿ ಬೇಧ ಮಾಡದಿರುವ ನೀತಿ, ನನ್ನ ಅಭಿಪ್ರಾಯದಲ್ಲಿ, ಸಂವಿಧಾನದ ಒಂದು ಮೂಲ ಲಕ್ಷಣ. ಇದು ಕಲಮು 368 ಸಂಸತ್ತಿಗೆ ನೀಡಿರುವ ತಿದ್ದುಪಡಿ ಅಧಿಕಾರದ ವ್ಯಾಪ್ತಿಯ ಹೊರಗಿದೆ" ಎಂದೂ ಅವರು ಹೇಳುತ್ತಾರೆ. ಬಹುಶಃ ತಾವು ಮತ್ತೆ ಅಧಿಕಾರಕ್ಕೆ ಬಂದರೆ ವಿದೇಶೀ ಮೂಲದ ವ್ಯಕ್ತಿಗಳನ್ನು ಉನ್ನತ ಸ್ಥಾನಗಳಿಗೆ ಅನರ್ಹಗೊಳಿಸುವಂತೆ ಸಂವಿಧಾನಕ್ಕೆ ತಿದ್ದುಪಡಿ ತರುತ್ತೇವೆ ಎಂಬ ಬಿಜೆಪಿಯ ಚುನಾವಣಾ - ಪೂರ್ವ ಬೆದರಿಕೆಯ ಬಗ್ಗೆ ಇಲ್ಲಿ ಹೇಳುತ್ತಿರಬೇಕು.

ಶ್ರೀಮತಿ ಸ್ವರಾಜ್ ಸಂವಿಧಾನದ ಹೆಸರಲ್ಲಿ ಸ್ವೀಕರಿಸಿದ ಪ್ರತಿಜ್ಞೆಯನ್ನು ಉಲ್ಲಂಘಿಸುತ್ತಿದ್ದಾರೆ ಎಂದು ಸ್ಪಷ್ಟವಾಗಿ ಆಪಾದಿಸುತ್ತಾರೆ. "ಶ್ರೀಮತಿ ಸುಷ್ಮಾಸ್ವರಾಜ್ ಬಯಸಿದಂತೆ ಅವರು ರಾಜ್ಯಸಭಾ ಸದಸ್ಯತ್ವದಿಂದ ರಾಜಿನಾಮೆ ನೀಡಿದರೂ ಸಂವಿಧಾನದ ಕಲಮು 51-ಓ ಅವರು ಬದ್ಧರಾಗಿದ್ದಾರೆ. ಈ ಕಲಮು ಪ್ರತಿನಾಗರಿಕನ/ಳ ಮೂಲಭೂತ ಕರ್ತವ್ಯಗಳನ್ನು ವಿಧಿಸುತ್ತದೆ. ಅದರಲ್ಲಿ ಮೊದಲ ಕರ್ತವ್ಯವೆಂದರೆ ಸಂವಿಧಾನಕ್ಕೆ ಬದ್ಧವಾಗಿರುವುದು ಮತ್ತು ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ಗೌರವಿಸುವುದು" ಎಂದು ಅವರು ಹೇಳುತ್ತಾರೆ.

ಇದರರ್ಥ ಸ್ಪಷ್ಟ - 'ಈ ಮಹಿಳೆ ಈಗ ತನ್ನ ರಾಜ್ಯಸಭಾ ಸ್ಥಾನವನ್ನು ಬಿಟ್ಟುಕೊಡದಿದ್ದರೂ, ಆಕೆ ಈ ಪ್ರಶ್ನೆಯನ್ನು ಮತ್ತೆ ಎತ್ತಿದರೆ ಆಗಲೂ ತನ್ನ ಪ್ರತಿಜ್ಞೆಯ ಉಲ್ಲಂಘನೆ ಮಾಡಿದ ಅಪರಾಧ ಎಸಗಿದಂತಾಗುತ್ತದೆ.

ಶಾಂತಿ ಭೂಷಣ್‌ರವರು ಇಲ್ಲಿ ವಿದೇಶಿ ಮೂಲದ ಪ್ರಶ್ನೆಯ ಮೇಲಿನ ಈ ಹೊಲಸು ಕೇಸರೀ ಆಟದ ಬಗ್ಗೆ ದೇಶದ ಜನತೆಯಲ್ಲಿ ಉಂಟಾಗಿರುವ ಆಳವಾದ ಜುಗುಪ್ಸೆಯ ಭಾವನೆಗೆ ದನಿ ನೀಡಿದ್ದಾರಷ್ಟೇ. ಮೇಲೆ ಹೇಳಿದ 'ಟೈಮ್ಸ್ ಆಫ್ ಇಂಡಿಯಾ' ಸಂಪಾದಕೀಯ ಹೇಳುವಂತೆ 'ಪರಿವಾರದಲ್ಲಿ ಬಹಳ ಮಂದಿಗೆ ಅನಿಸದಿದ್ದರೂ, ಈ ದೇಶದ ಬಹುಪಾಲು ಜನರಿಗೆ ಸೋನಿಯಾ ಸಾಕಷ್ಟು ಭಾರತೀಯಳೇ...'

ಅದೇನೇ ಇರಲಿ, ಈಗ ಶ್ರೀಮತಿ ಸೋನಿಯಾ ಪ್ರಧಾನಮಂತ್ರಿಯ ಸ್ಥಾನವನ್ನು ಯಾವುದೇ ಕಾರಣಕ್ಕಿರಲಿ ನಿರಾಕರಿಸಿರುವುದರಿಂದ ಕೇಸರೀ ಪಡೆಗೆ ಮುಂದಿನ ಐದು ವರ್ಷಗಳಲ್ಲಿ ಬಳಸಬಹುದಾಗಿದ್ದ ಇಂತಹ ಒಂದು ಮೊಂಡು ಆಯುಧವೂ ಇಲ್ಲದಂತಾಗಿದೆ. ಈಗಲಾದರೂ ಈ ಕೇಸರೀಪಡೆ ತನ್ನ ಸೋಲನ್ನು ವಿಶಾಲ ಮನಸ್ಸಿನಿಂದ ಒಪ್ಪಿಕೊಳ್ಳುತ್ತದೋ ಅಥವಾ ತನ್ನ ದೇಶ-ವಿರೋಧಿ ಆಟಗಳಿಗೆ ಹೊಸ ನೆಪಗಳನ್ನು ಹುಡುಕುತ್ತದೋ ...ನೋಡಬೇಕು.

ಮುಂಬರುವ ದಿನಗಳಲ್ಲಿ

ಈಗ ಕಾಂಗ್ರೆಸ್ ಕೇಂದ್ರದಲ್ಲಿ ಒಂದು ಸರ್ಕಾರವನ್ನು ಇತರ ಹಲವು ಪಕ್ಷಗಳ ಬೆಂಬಲದಿಂದ ರಚಿಸಲು ಸರ್ವಸಿದ್ಧವಾಗಿದೆ. ಬೆಂಬಲಿಸುವ ಪಕ್ಷಗಳಲ್ಲಿ ಕೆಲವು ಸರ್ಕಾರವನ್ನು ಸೇರಬಹುದು, ಕೆಲವು ಹೊರಗಿನಿಂದ ಬೆಂಬಲ ನೀಡಬಹುದು. ಆ ಸರ್ಕಾರ ತನ್ನ ಅವಧಿಯನ್ನು ಪೂರ್ಣಗೊಳಿಸುವ ಉತ್ತಮ ಅವಕಾಶವಿದೆ ಎಂಬುದಂತೂ ಸ್ಪಷ್ಟ. ತಾನು ಮಾತ್ರವೇ ಈ ದೇಶಕ್ಕೆ ಒಂದು ಸ್ಥಿರ ಸರ್ಕಾರ ಕೊಡಲು ಸಮರ್ಥ ಎಂಬ ಬಿಜೆಪಿ ಪ್ರಚಾರಕ್ಕೆ ಒಂದು ದೊಡ್ಡ ಪ್ರತ್ಯುತ್ತರವಾಗುತ್ತದೆ.


ಈಗ ಶ್ರೀಮತಿ ಸೋನಿಯಾ ಅಲ್ಲ, ಮನಮೋಹನ್ ಸಿಂಗ್ ಹೊಸ ಸರ್ಕಾರದ ನೇತೃತ್ವ ವಹಿಸುತ್ತಾರೆ ಎಂಬ ಸಂಗತಿಯಿಂದ ಪರಿಸ್ಥಿತಿಯಲ್ಲೇನೂ ವ್ಯತ್ಯಾಸವಾಗುವುದಿಲ್ಲ. ಏಕೆಂದರೆ ಇತರ ಪಕ್ಷಗಳ ಬೆಂಬಲ ನೀತಿಗಳನ್ನಾಧರಿಸಿದೆ, ವ್ಯಕ್ತಿಗಳನ್ನಲ್ಲ.

ಎಡ ಪಕ್ಷಗಳ ಪಾತ್ರ

ಈ ಹೊಸ ಸನ್ನಿವೇಶದಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಒಂದು ಅತ್ಯಂತ ಗುರುತರ ಹೊಣೆ ನಿರ್ವಹಿಸಬೇಕಾಗುತ್ತದೆ. ಈ ಬಾರಿ ಎಡಪಕ್ಷಗಳ ಸಾಧನೆ ಅತ್ಯುತ್ತಮವಾಗಿರುವುದರಿಂದ ದೇಶಾದ್ಯಂತ ಎಡಪಕ್ಷಗಳ ಬಗ್ಗೆ ಜನಗಳ ನಿರೀಕ್ಷೆ ಬಹಳ ಹೆಚ್ಚಿದೆ. ಎಡಪಕ್ಷಗಳು ಸರ್ಕಾರವನ್ನು ಸೇರದೆ ಹೊರಗಿನಿಂದ ಬೆಂಬಲಿಸಬೇಕು ಎಂದು ಒಟ್ಟಾಗಿ ನಿರ್ಧರಿಸಿದ್ದರೂ ಇದರರ್ಥ ಎಡಪಕ್ಷಗಳ ಪಾತ್ರ ಇಷ್ಟಕ್ಕೇ ಮುಗಿಯಿತೆಂದಲ್ಲ.

ಎಡಪಕ್ಷಗಳ ಪಾತ್ರ ಈ ಸರ್ಕಾರ ತನ್ನ ಅವಧಿಯನ್ನು ಪೂರೈಸುವಂತೆ ನೋಡಿಕೊಳ್ಳುವುದಕ್ಕೆ ಸೀಮಿತವಾಗಿರುವುದಿಲ್ಲ. ಇನ್ನೂ ದೊಡ್ಡ ಪಾತ್ರವಿದೆ - ಅದೆಂದರೆ ಕೋಮುವಾದಿ ಶಕ್ತಿಗಳು ಮತ್ತೆ ತಮ್ಮ ಹೊಲಸು ರಾಜಕೀಯ ತಲೆಯೆತ್ತದಂತೆ ನೋಡಿಕೊಳ್ಳುವುದು, ಮತ್ತು ಒಂದು ಕಡೆ ಗಲಭೆ, ಬೇರೊಂದು ಕಡೆ ಆತಂಕ ಸೃಷ್ಟಿಸುವ ಪ್ರಯತ್ನವನ್ನೇನಾದರೂ ಮಾಡುವ ಧೈರ್ಯ ತೋರಿದರೆ ಅವರ ಆಟವನ್ನು ಮೊಳಕೆಯಲ್ಲೇ ಚಿವುಟಿ ಹಾಕುವುದು.

ಇದಕ್ಕೆ ಎರಡು ವಿಷಯಗಳು ಬೇಕು. ಒಂದು, ಹಿಂದೆ ಕೆಲವು ಸಂದರ್ಭಗಳಲ್ಲಿ ಮಾಡಿದಂತೆ ಕಾಂಗ್ರೆಸ್ ಕೋಮುವಾದಿ ಶಕ್ತಿಗಳೆದುರು ಶರಣಾಗಬಾರದು. ಅದರ ಬದಲು, ರಾಷ್ಟ್ರೀಯ ಐಕ್ಯತೆಗೆ, ಕೋಮುಸಾಮರಸ್ಯಕ್ಕೆ ಬೆದರಿಕೆ ಬಂದಾಗ ಒಂದು ಅಸಂದಿಗ್ಧ ನಿಲುವು ಅಂಗೀಕರಿಸಬೇಕು, ಕೋಮುವಾದಿ ಶಕ್ತಿಗಳಿಗೆ ಮುಖಾಮುಖಿಯಾಗಿ ನಿಲ್ಲಬೇಕು. ಎರಡನೆಯದು, ಸರ್ಕಾರಕ್ಕೆ ಸೇರುವ, ಬೆಂಬಲ ನೀಡುವುದಕ್ಕಿಂತ ಹೆಚ್ಚಾಗಿ ಇತರ ಜಾತ್ಯತೀತ, ಪ್ರಜಾಪ್ರಭುತ್ವವಾದಿ ಪಕ್ಷಗಳು ಕೋಮುವಾದಿ ಶಕ್ತಿಗಳ ಎದುರು ಒಂದು ಬಲಿಷ್ಠ ಮೈತ್ರಿಕೂಟ ರಚಿಸಲು ಮುಂದಾಗಬೇಕು. ಸ್ಪಷ್ಟವಾಗಿ ಹೇಳಬೇಕೆಂದರೆ, ಕಾಂಗ್ರೆಸ್ ಮತ್ತು ಇತರ ಎಲ್ಲಾ ಪಕ್ಷಗಳು ದೇಶದ ವರ್ತಮಾನ ಮಾತ್ರವಲ್ಲ, ಭವಿಷ್ಯದ ಬಗ್ಗೆಯೂ ಗಮನ ನೀಡಬೇಕು. ಇಲ್ಲಿ ಯಾವುದೇ ರೀತಿಯ ಸಂಕುಚಿತ ಮನೋಭಾವಕ್ಕೆ, ಪಂಥವಾದಕ್ಕೆ ಅವಕಾಶವಿಲ್ಲ.



ಅದೇ ವೇಳೆಗೆ ಆರ್ಥಿಕ ನೀತಿಗಳೂ ಒಂದು ದೇಶದ ಬದುಕು ಮತ್ತು ಯೋಜನೆಗಳನ್ನು ರೂಪಿಸುವಲ್ಲಿ ದೊಡ್ಡ ಪಾತ್ರ ವಹಿಸುತ್ತವೆ. ಕೋಮುವಾದ, ಕೇಸರೀಕರಣ ಹಾಗೂ ಭ್ರಷ್ಟಾಚಾರ ಜೊತೆಗೆ ಬಿಜೆಪಿ-ಎನ್‌ಡಿಎ ಆರ್ಥಿಕ ನೀತಿಗಳು ಆಂಧ್ರ ಪ್ರದೇಶದಂತಹ ರಾಜ್ಯಗಳಲ್ಲೂ ಪರಾಭವಕ್ಕೆ ಕಾರಣವಾದವು. ಕೇಂದ್ರ ಸರ್ಕಾರಕ್ಕಿಂತ ಭಿನ್ನವೇನೂ



ಆಗಿರದ ಆರ್ಥಿಕ ನೀತಿಗಳನ್ನು ಕಾಂಗ್ರೆಸ್ ಆಡಳಿತ ಅನುಸರಿಸಿದ ಕರ್ನಾಟಕದಲ್ಲೂ ಇದೇ ಕಥೆಯೇ ಪುನರಾವರ್ತನೆಯಾಯಿತು ಆ ಪಕ್ಷಕ್ಕೆ. ಆದ್ದರಿಂದ ರಾಜ್ಯದಲ್ಲಿ ನಷ್ಟವನ್ನು ಅನುಭವಿಸಬೇಕಾಯಿತು. ಕೇಂದ್ರದಲ್ಲಿನ ಹೊಸ ಆಡಳಿತ ಅವೇ ವಿಶ್ವಾಸ ಕಳಕೊಂಡ ನೀತಿಗಳನ್ನು ಅನುಸರಿಸಿದರೆ ಅದರಿಂದ ಕೋಮುವಾದಿ ಶಕ್ತಿಗಳಿಗೆ ಹೊಸ ಜೀವ ಸಿಕ್ಕಂತಾಗುತ್ತದೆಯಷ್ಟೆ.

ನಾವು ಮುದ್ರಣಕ್ಕೆ ಹೋಗುವ ವೇಳೆಗೆ ಕಾಂಗ್ರೆಸ್ ಒಂದು ಕನಿಷ್ಠ ಸಾಮಾನ್ಯ ಕಾರ್ಯಕ್ರಮದ ಕರಡು ತಯಾರಿಸುವಲ್ಲಿ ತೊಡಗಿದೆ. ಈ ಕರಡಿನ ಬಗ್ಗೆ ಕಾಂಗ್ರೆಸ್ ಮಿತ್ರಪಕ್ಷಗಳೊಂದಿಗೆ ಸಮಾಲೋಚನೆ ನಡೆಸಬೇಕೆಂಬ ವಿಚಾರವಿದೆ. ಆದ್ದರಿಂದ ಈ ಬಗ್ಗೆ ಸದ್ಯಕ್ಕೆ ನಿರ್ದಿಷ್ಟವಾಗಿ ಏನೂ ಹೇಳಲು ಸಾಧ್ಯವಿಲ್ಲ. ನಾವು ಜನತೆಯ ನೈಜ ಹಿತಾಸಕ್ತಿಗಳ ಪ್ರಹರಿಗಳಾಗಿರುತ್ತೇವೆ, ಕನಿಷ್ಠ ಸಾಮಾನ್ಯ ಕಾರ್ಯಕ್ರಮ ಜನರ ನ್ಯಾಯಬದ್ಧ ಆಕಾಂಕ್ಷೆಗಳನ್ನು ಬಿಂಬಿಸುವಂತೆ ಮಾಡುತ್ತೇವೆ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳು ಮತ್ತು ಅವರ ಸಂಸ್ಥೆಗಳು ನಮ್ಮ ಮೇಲೆ ಸವಾರಿ ಮಾಡಲು ಅವಕಾಶ ಸಿಗದಂತೆ ನೋಡಿಕೊಳ್ಳುತ್ತೇವೆ ಎಂದು ಜನತೆಗೆ ಆಶ್ವಾಸನೆಯಂತೂ ಕೊಡುತ್ತೇವೆ. ನಾವು ಭ್ರಷ್ಟಾಚಾರದ ವಿರುದ್ಧವೂ ಖಡಾಖಂಡಿತವಾದ ಹೋರಾಟ ನಡೆಯುವಂತೆಯೂ ನೋಡಿಕೊಳ್ಳುತ್ತೇವೆ. ಏಕೆಂದರೆ ಈ ಭ್ರಷ್ಟಾಚಾರ ಸಾರ್ವಜನಿಕ ಕಲ್ಯಾಣಕ್ಕೆ ಬಳಸಬಹುದಾದ ಸಂಪನ್ಮೂಲಗಳನ್ನು ತಿಂದುಹಾಕಿ ನಮ್ಮ ಜನಗಳ ಜೀವ-ಬದುಕಿನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಇನ್ನೊಂದು ನಾವು ಗಮನ ಹರಿಸಬೇಕಾದ ಅಂಶವೆಂದರೆ ನಮ್ಮ ಹಿಂದಿನ, ಸಮಯದ ಒರೆಗಲ್ಲಲ್ಲಿ ಪುಟಗೊಂಡ ಅಲಿಪ್ತ ವಿದೇಶಾಂಗ ನೀತಿಯನ್ನು ಮತ್ತೆ ಸಂಪೂರ್ಣವಾಗಿ ತರುವುದು.

ಒಟ್ಟಿನಲ್ಲಿ ಇದು ಪಯಣದ ಅಂತ್ಯವಲ್ಲ. ಒಂದು ದೀರ್ಘ ಹಾಗೂ ಕಠಿಣ ಹೋರಾಟ ಇನ್ನೂ ಉಳಿದಿದೆ. ಜನಗಳ ಆಂತರಿಕ ಮತ್ತು ಹೊರಗಿನ ಶತ್ರುಗಳನ್ನು ಸೋಲಿಸಲು, ಸಂಪೂರ್ಣ ಪರಾಭವಗೊಳಿಸಲು ದೇಶದ ಎಡ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳು ಅತ್ಯಂತ ಜಾಗರೂಕರಾಗಿರಬೇಕು.

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





'ಎಲ್ಲರಿಗೂ ಆರೋಗ್ಯ ಈಗಲೇ'

ಜನಾರೋಗ್ಯಕ್ಕೆ ಜನಾಂದೋಲನ (ಮುಂಬೈ ಘೋಷಣೆ)

ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿಯ ಬೌದ್ಧಿಕ ಆಸ್ತಿ ಹಕ್ಕು ಜಾರಿಗೆ ಬರದಂತೆ ಚಳುವಳಿ ಅಗತ್ಯ. ಬಹುರಾಷ್ಟ್ರೀಯ ಕಂಪನಿಗಳು ಹಾಗೂ ವಿಶ್ವ ವ್ಯಾಪಾರ ಸಂಘಟನೆಗಳು ಈ ಆಸ್ತಿ ಹಕ್ಕು ಪಡೆದು, ಸಾಂಪ್ರದಾಯಿಕ ಚಿಕಿತ್ಸೆಗಳನ್ನು ತ ಮ್ಮದಾಗಿಸಿಕೊಳ್ಳುವುದಾಗಲೀ, ಮಾರುವುದಾಗಲೀ ಮಾಡದಂತೆ ತಡೆಯಬೇಕು.

ಜನಾರೋಗ್ಯ ಚಳುವಳಿಯ ಕಾರ್ಯಕರ್ತರು ಆರೋಗ್ಯ ನೀತಿ ಸಂಹಿತೆ ರೂಪುಗೊಳ್ಳುವ ಸಭೆಗಳಲ್ಲಿ ಪಾಲ್ಗೊಂಡು ನಿರ್ಧಾರ ತೆಗೆದುಕೊಳ್ಳುವ ಅವಕಾಶವಿರಬೇಕು.

ತಂಬಾಕು ಕಂಪನಿಗಳು ಅನೇಕ ಸರ್ಕಾರಿ ಹಾಗೂ ವಿದ್ಯಾ ಸಂಸ್ಥೆಗಳಿಗೆ ಅನುದಾನ ಹಾಗೂ ತಾತ್ಕಾಲಿಕ ಸಹಾಯ ನೀಡುತ್ತಾ ಬಂದು ಯುವಕರನ್ನು ಗುರಿ ಮಾಡುವ ತಮ್ಮ ಜಾಹಿರಾತನ್ನು ಮುಂದುವರೆಸಿದೆ. ಇದು ಜನಾರೋಗ್ಯ ಹಿತದೃಷ್ಟಿಗೆ ಮಾರಕವಾಗಿದೆ. ಆದ್ದರಿಂದ ಇಂತಹ ಅನುದಾನವನ್ನು ಸಂಘ ಸಂಸ್ಥೆಗಳು ತಿರಸ್ಕರಿಸಬೇಕು.

ಸಾಮಾಜಿಕ ಕ್ಷೇತ್ರವಾದ ಆರೋಗ್ಯ, ಶಿಕ್ಷಣ ಹಾಗೂ ಸಾರಿಗೆ ಸಂಸ್ಥೆಗಳಲ್ಲಿ ಬಂಡವಾಳ ಹೂಡಲು ಮುಂದಾಗಿರುವ ಸಂಸ್ಥೆಗಳನ್ನು ದೇಶಕ್ಕೆ ಬರಮಾಡಿಕೊಳ್ಳುವಾಗ ಆ ಸಂಸ್ಥೆಗಳು ಆರೋಗ್ಯ ಕ್ಷೇತ್ರದ ಬದಲು ತಮ್ಮ ಲಾಭ ಹಾಗೂ ವ್ಯಾಪಾರಕ್ಕೆ ಮಹತ್ವ ಕೊಡುತ್ತಿದೆಯೇ ಎಂದು ಪರಿಶೀಲಿಸಿ ಸರ್ಕಾರ ಆ ಸಂಸ್ಥೆಗಳಿಗೆ ಪರವಾನಗಿ ಕೊಡಬೇಕು.

ಟ್ರಿಪ್ಸ್ ಒಪ್ಪಂದವನ್ನು ಹಿಮ್ಮೆಟ್ಟಿಸಬೇಕು. ಮುಕ್ತ ವ್ಯಾಪಾರದ ಒಪ್ಪಂದಗಳು ಪಾರದರ್ಶಕತೆಯೊಂದಿಗೆ ಪ್ರಜಾಸತ್ತಾತ್ಮಕವಾಗಿರುವಂತೆ ಜವಾಬ್ದಾರಿ ವಹಿಸಬೇಕು.

ಆರೋಗ್ಯಕ್ಕೆ ಅಗತ್ಯವಾದ ಉದ್ದಿಮೆ ಗಳನ್ನು ಖಾಸಗೀಗೊಳಿಸಬಾರದು, ಅದರ ಬದಲು ಈ ಉದ್ದಿಮೆಗಳನ್ನು ರಾಷ್ಟ್ರೀಕರಣಗೊಳಿಸಬೇಕು.

ಯುದ್ಧ ಹಾಗೂ ಆಕ್ರಮಣಗಳನ್ನು ಕೊನೆಗೊಳಿಸಿ

ಇಸವೀ 2000ದಿಂದ ಯುದ್ಧ ಆಕ್ರಮಣ ಹಾಗೂ ಸೈನ್ಯಾಡಳಿತ ಕ್ರಿಯೆಗೆ ಕೆಲವು ರಾಷ್ಟ್ರಗಳು ಹಾತೊರೆಯುತ್ತಿವೆ. ಈ ಕೆಲವು ರಾಷ್ಟ್ರಗಳು ಸಾಮ್ರಾಜ್ಯಶಾಹಿ ನೀತಿಯನ್ನು ಜಾರಿಗೊಳಿಸಲು ಪ್ರಯತ್ನಿಸುತ್ತಿವೆ. ಇದರಿಂದಾಗಿ ಸಾವು, ನೋವು, ಸಾಮಾಜಿಕ ಅಸಮಾನತೆ, ಪರಿಸರ ನಾಶ ಜಗತ್ತಿನಾದ್ಯಂತ ಹೆಚ್ಚುತ್ತಿವೆ. ಜನಾರೋಗ್ಯ ದೃಷ್ಟಿಯಿಂದ ಯುದ್ಧ ನೀತಿಯನ್ನು ಖಂಡಿಸಬೇಕು ಹಾಗೂ ಬದಲಿಸಬೇಕು.


ಮುಂದುವರಿಯುವುದು

ಷೇರಿಗೆ ಸವ್ವಾ ಸೇರು

ರೈತರು ಆತ್ಮಹತ್ಯೆಗೀಡಾಗುತ್ತಿರುವಾಗ, ಕಾರ್ಮಿಕರು ಬೀದಿಗೆ ಬಿದ್ದಾಗ, ನಿರುದ್ಯೋಗಿ ಅಂಡಲೆಯುವಾಗ, ಕೂಲಿಕಾರರು ಹಸಿವೆಯಿಂದ ಬೀಳುವಾಗ, ಈ ಷೇರು ಪೇಟೆಯಲ್ಲಿ ಕುಸಿತವಾಗಿಲ್ಲ!? ಆದರೆ ಕೇಂದ್ರದಲ್ಲಿ ಹೊಸ ಸರ್ಕಾರ ಬರುತ್ತಿದೆ ಎಂದಾಗ, ಎಡಪಕ್ಷಗಳ ಅಧಿಕ ಸ್ಥಾನ ಪಡೆದು ದೇಶ ಉಳಿಸುವ ಮಾತುಗನ್ನಾಡಿದಾಗ ಕುಸಿದೇ ಹೋಯಿತಲ್ಲಾ... ಆಹಾ ! ಎಂತಹ ಚಮತ್ಕಾರ...

ಕೆ.ಎಸ್.ರವಿಕುಮಾರ್, ಹಾಸನ

ಮೊನ್ನೆ ಸೋಮವಾರ (17.05.2004) 6 ಗಂಟೆಗೆ ಎನ್‌ಡಿ ಟಿ.ವಿ ಛಾನಲ್‌ನಲ್ಲಿ ವಾರ್ತಾ ಪ್ರಸಾರ ವೀಕ್ಷಿಸುತ್ತಿದ್ದೆ. ಆ ದಿನ ಷೇರುಪೇಟೆಯ sensex ಪಾಯಿಂಟ್ ಕುಸಿದಿದ್ದು ದೊಡ್ಡ ಸುದ್ದಿಯಾಗಿತ್ತು. ಅದೇ ವೇಳೆ ಕೆಳಗೆ ಚಲಿಸುವ ಸುದ್ದಿ ಗೆರೆಯಲ್ಲಿ ಬಿಜಾಪುರ ಜಿಲ್ಲೆಯ ರೈತನೊಬ್ಬ ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದ ಸುದ್ದಿ ಪ್ರಸಾರವಾಯಿತು. ಎಂತಹ ವಿಚಿತ್ರ ಸಮೀಕರಣ! ಒಂದು ಕಡೆ ಷೇರುಪೇಟೆ ಕುಸಿತ, ಇನ್ನೊಂದೆಡೆ ರೈತನ ಆತ್ಮಹತ್ಯೆ. ಭಾರತಾಂಬೆಯ ಮಡಿಲಲ್ಲಿ ಈತನಕ ಷೇರುಪೇಟೆ ಕುಸಿದು ಯಾವ ಬಂಡವಾಳದಾರನೂ ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಯಿಲ್ಲ. ಆದರೆ ಬೆಳೆನಷ್ಟದಿಂದ ಕೆಲವು ಸಾವಿರ ಸಾಲ ತೀರಿಸಲಾಗದ ರೈತನಿಗೆ ತನ್ನ ಅಮೂಲ್ಯ ಬದುಕೇ ಭಾರವಾಗಿಬಿಡುತ್ತದೆ.



ಈ ದೇಶದ ಸಾವಿರಾರು ರೈತರು ಮತ್ತು ನೇಕಾರರು ಕಳೆದ ಐದು ವರ್ಷಗಳಿಂದೀಚೆಗೆ ಆತ್ಮಹತ್ಯೆ ಮಾಡಿಕೊಂಡಾಗ ಷೇರು ಬೆಲೆಗಳು ಕುಸಿಯಲಿಲ್ಲ. ಪೆಟ್ರೋಲ್, ಡೀಸಲ್, ಸೀಮೆ ಎಣ್ಣೆ, ಅಡುಗೆ ಅನಿಲಗಳ ಬೆಲೆ ಮಿತಿಮೀರಿ ಏರಿದಾಗ ಷೇರುಪೇಟೆ ಕುಸಿಯಲಿಲ್ಲ. ಬಂಡವಾಳ ಹಿಂಪಡೆತ ನೀತಿಯಿಂದ ಕಾರ್ಮಿಕರು ಬೀದಿಗೆ ಬಿದ್ದಾಗ ಷೇರುಪೇಟೆ ಕುಸಿಯಲಿಲ್ಲ. ಬರಗಾಲದಿಂದ ಜನ ಬಳಲಿದಾಗ ಷೇರುಪೇಟೆ ಕುಸಿಯಲಿಲ್ಲ. ಹಲವು ರಾಜ್ಯಗಳಲ್ಲಿ ಹಸಿವಿನಿಂದ ಮಕ್ಕಳು, ಮುದುಕರು ಸತ್ತಾಗ ಷೇರುಪೇಟೆ ಕುಸಿಯಲಿಲ್ಲ. ಜಾನುವಾರುಗಳಿಗೆ ನೀರು, ಮೇವುಗಳ ಕೊರತೆಯಾದಾಗ ಷೇರುಪೇಟೆ ಕುಸಿಯಲಿಲ್ಲ. ನಾಚಿಕೆಗೆಟ್ಟ ಆಮದು ನೀತಿಯಿಂದ ಸಣ್ಣ ಉದ್ದಿಮೆಗಳು ನೆಲಸಮವಾದಾಗ ಷೇರುಪೇಟೆ ಕುಸಿಯಲಿಲ್ಲ. ಕೋಟ್ಯಾಂತರ ನಿರುದ್ಯೋಗಿಗಳು ನಿಟ್ಟುಸಿರು ಬಿಟ್ಟಾಗ ಷೇರುಪೇಟೆ ಕುಸಿಯಲಿಲ್ಲ. ಆದರೆ ಈಗ ಹೊಸ ಸರ್ಕಾರ ಅಧಿಕಾರ ವಹಿಸಿಕೊಳ್ಳುವ ವೇಳೆ ಕುಸಿಯುತ್ತಿದೆ.

ಹೊಸ ಸರ್ಕಾರಕ್ಕೆ ಬೆಂಬಲ ನೀಡಿರುವ ಎಡಪಕ್ಷಗಳು ಬಂಡವಾಳ ಹಿಂಪಡೆತ ನೀತಿಯನ್ನು ಪರಿಷ್ಕರಿಸಬೇಕು ಎಂದ ಕೂಡಲೇ ಷೇರುಪೇಟೆ ಕುಸಿಯುತ್ತಿದೆ. ಹೊಸ ಸರ್ಕಾರ ರೈತಪರ ನೀತಿಗಳಿಗೆ ಆದ್ಯತೆ ನೀಡಲಿ ಎಂದ ಕೂಡಲೇ ಷೇರುಪೇಟೆ ಕುಸಿಯುತ್ತಿದೆ. ಆರ್ಥಿಕ ದುರ್ಬಲರಿಗೆ ಮತ್ತೆ ಪಡಿತರ ವ್ಯವಸ್ಥೆ ಜಾರಿಯಾಗಲಿ ಎಂದ ಕೂಡಲೇ ಷೇರುಪೇಟೆ ಕುಸಿಯುತ್ತಿದೆ. ಕಾರ್ಮಿಕ ಕಾಯಿದೆಗೆ ತರುತ್ತಿರುವ ಪಕ್ಷಪಾತದ ತಿದ್ದುಪಡಿ ಬೇಡ ಎಂದ ಕೂಡಲೇ ಷೇರುಪೇಟೆ ಕುಸಿಯುತ್ತಿದೆ. ಇದೆಂತಹ ಚೋದ್ಯ ನೋಡಿ! ಎಡಪಕ್ಷಗಳು ಜೀವ ವಿರೋಧಿ ಯಾದ ಸಲಹೆಗಳನ್ನೇನೂ ನೀಡಿಲ್ಲ. ಹಾಗೆ ನೋಡಿದರೆ ಹಿಂದಿನ ಅನೇಕ ಸರ್ಕಾರಗಳು 'ವಿಶೇಷ ರಿಯಾಯಿತಿಗಳ ಮೂಲಕ ರೈತರನ್ನು ಓಲೈಸಲು ಯತ್ನಿಸಿದ್ದವು. ಕಾರ್ಮಿಕರ ಮನಸ್ಸು ಗೆಲ್ಲಲು ಯತ್ನಿಸಿದ್ದವು. ಸಾಧ್ಯವಾದಷ್ಟು ಕಡಿಮೆ ದರದಲ್ಲಿ ಪಡಿತರ ಧಾನ್ಯ ಒದಗಿಸುವ ಆಮಿಷ ತೋರಿಸಿದ್ದವು. ಹೊಸ ಹೊಸ ನೇಮಕಾತಿಗಳನ್ನು ಮಾಡುವ ಆಶ್ವಾಸನೆಗಳನ್ನು ನೀಡಿದ್ದವು. ಆಗೆಲ್ಲ ಷೇರುಪೇಟೆ ಕುಸಿದಿರಲಿಲ್ಲ. ಷೇರುಪೇಟೆಯ ತೇಜಿ ಕಡಿಮೆಯಾಗಿರಲಿಲ್ಲ. ಆದರೆ ವಾಜಪೇಯಿ ಸರ್ಕಾರ ದೇಶದ ಅಭಿವೃದ್ಧಿಯೆಂದರೆ ಷೇರುದಾರರ ಸಂತೃಪ್ತಿಯ ಮುಗುಳುನಗೆ ಎಂದು ಪರಿಗಣಿಸಿಕೊಂಡು ಬಂದಿದ್ದರಿಂದ ಷೇರುಪೇಟೆ ಈಗ ಕುಸಿಯತೊಡಗಿದೆಯೇ? ಜನತೆ ಷೇರುಪೇಟೆಯ ಮಹತ್ವವನ್ನು ಈ ಚುನಾವಣೆಯಲ್ಲಿ ಸ್ಪಷ್ಟವಾಗಿ ನಿರಾಕರಿಸಿದ್ದಾರೆ.

ಎಲ್ಲೋ ಯುದ್ಧವಾದರೆ ಇಲ್ಲಿ ಷೇರುಪೇಟೆ ಕುಸಿಯುತ್ತದೆ. ಎಲ್ಲೋ ಬಾಂಬ್ ಸ್ಫೋಟವಾದರೆ ಇಲ್ಲಿ ಷೇರುಪೇಟೆ ಅದುರುತ್ತದೆ. ನಿಯಂತ್ರಣದ ಸಣ್ಣ ಸಣ್ಣ ಗುಸುಗುಸು, ಪಿಸುಮಾತುಗಳಿಗೂ ತತ್ತರಿಸುತ್ತದೆ. ಜನಪರ ಯೋಜನೆಗಳಿಗೆ ಕೈಹಾಕಿದ ಕೂಡಲೇ ತನಗೆ ಪ್ರಾಮುಖ್ಯತೆ ಕಡಿಮೆಯಾಯಿತೆಂದು ತಳಮಳಿಸುತ್ತದೆ. ಇಂತಹ ನಿಶ್ಯಕ್ತ ಅಂತಃಸತ್ವವಿಲ್ಲದ ಷೇರುಪೇಟೆಯ ವ್ಯವಸ್ಥೆ ದೇಶದ ಭವಿಷ್ಯ ನಿರ್ಧರಿಸುತ್ತದೆಯಂತೆ. ಬರಿ ಹೇಳಿಕೆಗಳಿಗೆ ಹೌಹಾರುವ ಷೇರುಪೇಟೆಗೆ ವಿಶೇಷ ಕಾಳಜಿ ನೀಡುವುದರಲ್ಲಿ ಅರ್ಥವಿಲ್ಲ.

ಷೇರುಪೇಟೆ ನಿರ್ದಯಿ ಅದೃಷ್ಟದ ಮೇಲೆ ನಿಂತಿದೆ. ಅಲ್ಲಿ ಅಂಕಿ ಸಂಖ್ಯೆಗಳದೆ ಕಾರುಬಾರು. ಅವುಗಳ ಏರುಪೇರಿನದೆ ದರ್ಬಾರು. ಹೂಡಿಕೆದಾರರು ಬಯಸಿದರೆ ಷೇರು ಮೌಲ್ಯ ಏರುತ್ತದೆ ಉದಾಸೀನವಾದಾಗ ಕೆಳಗಿಳಿಯುತ್ತದೆ. ಷೇರುದಾರರ ಕ್ರೂರ ಸ್ವಾರ್ಥವೆ ಷೇರು ವ್ಯವಹಾರವನ್ನು ನಿರ್ಧರಿಸುತ್ತದೆ. ಷೇರುಪೇಟೆಯಲ್ಲಿ ಹಣ ಎಲ್ಲೂ ಭೌತಿಕ ರೂಪದಲ್ಲಿ ಭಾಗವಹಿಸುವುದಿಲ್ಲ. ಸೂಚ್ಯಾಂಕಗಳ ಮೇಲೆ ಸವಾರಿ ಮಾಡುತ್ತಿರುತ್ತದೆ. ಷೇರೆಂದರೆ ಅದೃಷ್ಟದ ಜೂಜಾಟವೆಂದೇ ಅರ್ಥ. ಇಸ್ಪೀಟ್ ಆಡುವವನಿಗೆ ಒಮ್ಮೆ ಹಣ ಒದ್ದುಕೊಂಡು ಬರಬಹುದು. ಇನ್ನೊಮ್ಮೆ ಅವನನ್ನೇ ಒದ್ದು ಹೋಗಬಹುದು. ಷೇರುಪೇಟೆಯ ಜೂಜಾಟದಲ್ಲಿ ಏರುಪೇರುಗಳೇ ಬಂಡವಾಳ. ಹೇಗೆ ಇಸ್ಪೀಟ್ ಆಡುವವನ ಮೇಲೆ ಆತನ ಕುಟುಂಬ ವಿಶ್ವಾಸ, ನಿರೀಕ್ಷೆಗಳನ್ನು ಇಟ್ಟುಕೊಳ್ಳುವುದಿಲ್ಲವೋ ಹಾಗೆ ಒಂದು ದೇಶದ ಬಹುಸಂಖ್ಯಾತ ಶ್ರಿ ಸಾಮಾನ್ಯ ಷೇರುಪೇಟೆಯ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ.

ಷೇರುಪೇಟೆಯಲ್ಲಿ ಲಾಭದ ಊಹೆ, ಅಸ್ವಾಭಾವಿಕ ಮುಖಮೌಲ್ಯ (face value)ದ ಏರಿಕೆಗಳಿಗೆ ವಿಶೇಷ ಮಹತ್ವ. ಷೇರುದಾರನೊಬ್ಬ ತನಗನುಕೂಲವಾಗುವಂತೆ ಷೇರು ಬೆಲೆಗಳನ್ನು ಕೃತಕ ಊಹೆಗಳ ಮೂಲಕ ಏರಿಸಬಲ್ಲ. ಷೇರುಪೇಟೆ ಒಂದು ಬಗೆಯಲ್ಲಿ FRAUD ಆಗಿದೆ. ಹರ್ಷದ್ ಮೆಹತಾ, ಕೇತನ್ ಪಾರಿಖ್‌ರಂತಹವರು ಆಡಿದ ಆಟಗಳಿಂದ ಷೇರುಪೇಟೆ ಹಗರಣಗಳು ಜರುಗಿದವು. ಷೇರಿನಲ್ಲಿ ತನ್ನೆಲ್ಲ ಲಾಭ ತೊಡಗಿಸಿ ಗುಜರಾತಿನ ಮಾಧವಪುರ ಮರ್ಕಂಟೈಲ್ ಬ್ಯಾಂಕ್ ಪೂರಾ ದಿವಾಳಿಯೆದ್ದು ತನ್ನ ಠೇವಣಿದಾರರಿಗೆ ಮಂಕುಬೂದಿ ಎರಚಿತು. 220 ವರ್ಷಗಳ ಇತಿಹಾಸವಿದ್ದ ಇಂಗ್ಲೆಂಡ್ ಮೂಲದ ಬೇರಿಂಗ್ಸ್ ಬ್ಯಾಂಕ್ ತನ್ನ ನಿರ್ದೇಶಕನೊಬ್ಬ ಕುಳಿತಲ್ಲೇ ಕಂಪ್ಯೂಟರಿನಲ್ಲಿ ನಡೆಸಿದ ಆನ್‌ಲೈನ್ ಬಿಡ್ಡಿಂಗ್ ಮೂಲಕ ಮುಳುಗಿ ಹೋಯಿತು. **ಅಸ್ಥಿರತೆಯ ಜೀವಾಳವಾದ ಷೇರುಪೇಟೆಯನ್ನು ಆರಾಧಿಸುವು ದೆಂದರೆ ಮರಳುಗಾಡಿನಲ್ಲಿ ಮೃಗಜಲಕ್ಕೆ ಮರುಳಾದಂತೆ.**

ಷೇರಿನಲ್ಲಿ ಹಣ ಹೂಡುವವರು ಯಾರು? ಈ ದೇಶದಲ್ಲಿ ಶೇ.70 ಭಾಗವಿರುವ ರೈತ ಸಮುದಾಯ ಹಣ ಹೂಡುವುದಿಲ್ಲ. ನಿತ್ಯ ಬದುಕು ನಡೆದರೆ ಸಾಕೆನ್ನುವ ಶ್ರಮಿಕವರ್ಗ ಹಣ ಹೂಡುವುದಿಲ್ಲ. ನಿರುದ್ಯೋಗಿಗಳು ಹಣ ತೊಡಗಿಸುವುದಿಲ್ಲ. ಇನ್ನುಳಿದಂತೆ ಶೇ5.8 ರಷ್ ಆರ್ಥಿಕವಾಗಿ ಸಬಲರಾಗಿರುವವರು ಮಾತ್ರ ಷೇರುಪೇಟೆಯಲ್ಲಿ ಜೂಜಾಡುತ್ತಾರೆ. ಮೇಲ್ ಮಧ್ಯಮವರ್ಗ, ವಿ.ಆರ್.ಎಸ್. ಫಲಾನುಭವಿಗಳು, ದೊಡ್ಡ ಹಣಕಾಸು ಸಂಸ್ಥೆಗಳ ಏಜೆಂಟರು, ಉದ್ಯಮಿಗಳು, ದೊಡ್ಡ ಬೆಳೆಗಾರರು, ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಲಕ್ಷಾಂತರ ಸಂಬಳ ಪಡೆಯುವವರು, ವ್ಯಾಪಾರೀವರ್ಗದವರು, ಸಿರಿವಂತ ರಾಷ್ಟ್ರೀಯವಾದಿ ಕೋಮು ಉನ್ಮಾದಿಗಳು ಮುಂತಾದವರು ಷೇರುಪೇಟೆಯ ಸಟ್ಟಾ ವ್ಯವಹಾರದ ಪಾತ್ರದಾರಿಗಳು.

ಬ್ಯಾಂಕುಗಳಲ್ಲಿ ಬಡ್ಡಿದರ ಕಡಿಮೆಯಾಗಿರುವುದರಿಂದ ಮಧ್ಯಮವರ್ಗದ ನೌಕರರು, ನಿವೃತ್ತಿದಾರರು ಮತ್ತಿತರರು ತಮ್ಮ ಉಳಿತಾಯವನ್ನು ಷೇರುಗಳಲ್ಲಿ ತೊಡಗಿಸಿದವರು ಇದ್ದಾರೆ. ಆದರೆ ಅವರ ಸಂಖ್ಯೆ ಕಡಿಮೆ.

ಈಗ ಷೇರುಪೇಟೆಯ ಸೆನ್ಸೆಕ್ಸ್ ಕುಸಿದಿದ್ದಕ್ಕೆ 'ಭಾರತ ಪ್ರಕಾಶಿಸುತ್ತಿದೆ' ಜಾಹೀರಾತುಗಳನ್ನು ಪಡೆದು ಲಕ್ಷಾಂತರ ಲಾಭ ಮಾಡಿರುವ ರಾಜ್ಯ ಹಾಗೂ ರಾಷ್ಟ್ರಮಟ್ಟದ ಪತ್ರಿಕೆಗಳು ಎಡಪಕ್ಷಗಳನ್ನು ಟೀಕಿಸುತ್ತಿವೆ. ಬಲಪಂಥೀಯ, ಫ್ಯಾಸಿಸ್ಟ್ ಧೋರಣೆಯ, ಭಾರತದ ಬ್ರಿಟೀಷರಂತಿರುವ ಬಿಜೆಪಿಗಳು ಹಾಗೂ ಸಂಘಪರಿವಾರದವರೂ ಎಡಪಕ್ಷಗಳನ್ನೇ ದೂರುತ್ತಿವೆ. ಸಹಜವಾಗಿಯೇ ಅವು ತಳಮಳಿಸಿವೆ. ಬಿಜೆಪಿಗೆ ದೊಡ್ಡ ವರ್ತಕರು, ಉದ್ಯಮಿಗಳು ಮತ್ತು ವಿದೇಶಿ ಹೂಡಿಕೆದಾರರೇ ಆಮ್ಲಜನಕ ತುಂಬುತ್ತ ಬಂದವರಲ್ಲವೆ. ಅವರು ಖುಷಿಯಾಗಿದ್ದರೆ ಸಾಕು, ಈ ಮಂದಿಗೆ.

ವಾಜಪೇಯಿ ಸರ್ಕಾರ ಷೇರುಪೇಟೆಯ ದಲ್ಲಾಳಿಗಳಿಗಾಗಿ, ಉದ್ಯಮಿಗಳಿಗಾಗಿ, ವಿದೇಶಿ ಹೂಡಿಕೆದಾರರಿಗಾಗಿ ಭಾರತೀಯ ರೈತರನ್ನು ನಿರ್ಲಕ್ಷಿಸಿತು. ಕೆಳ ಮಧ್ಯಮವರ್ಗದವರನ್ನು ನಿರ್ಲಕ್ಷಿಸಿತು. ಭಾರತೀಯ ಕಾರ್ಮಿಕವರ್ಗವನ್ನು ನಿರ್ಲಕ್ಷಿಸಿತು. ಕಂಪ್ಯೂಟರ, ಇಂಟರ್‌ನೆಟ್, ಸೆಲ್‌ಫೋನ್ ಕ್ರಾಂತಿಗಾಗಿ, ನಿರುದ್ಯೋಗಿ ಯುವಜನತೆ ಮತ್ತು ಗ್ರಾಮೀಣವಾಸಿಗಳ ಬದುಕಿನ ಕನಸುಗಳನ್ನು ಒತ್ತೆಯಿಟ್ಟಿತು. ಈ ನಿರ್ಲಕ್ಷ್ಯದ ಪರಿಣಾಮವಾಗಿ ಮೊನ್ನೆಯ ಚುನಾವಣೆಯಲ್ಲಿ ಹೀನಾಯ ಸೋಲು ಕಂಡಿತು. ಭಾರತೀಯರ ನಾಡಿಮಿಡಿತ ಅರ್ಥವಾಗದವರು ಮೂಲೆ ಗುಂಪಾಗಲೇಬೇಕು. ಬದುಕಿಗೆ ಕನಿಷ್ಠ ಭದ್ರತೆಯ ಭರವಸೆಗಳನ್ನು ಕಾಣಿಸಲಾಗದ ಆಡಳಿತಗಾರರು ಇತಿಹಾಸವಾಗಲೇಬೇಕು. ವಾಜಪೇಯಿ ನಡೆದ ದಾರಿಯಲ್ಲಿ ಸೋನಿಯಾ ಮತ್ತು ಅವರ ಸಂಗಡಿಗರು ನಡೆದರೆ ಅವರ ಸರ್ಕಾರವೂ ಜನರಿಂದ ದೂರವಾದೀತು. ಈಗಿನ ಸರ್ಕಾರದ ಆದ್ಯತೆ ಷೇರುಪೇಟೆಯ ಹೋರಿ, ಕರಡಿಗಳನ್ನು ಕೊಬ್ಬಿಸುವುದಲ್ಲ. ಕೋಟ್ಯಾಂತರ ರೈತರಿಗೆ ಮತ್ತೆ ತಮ್ಮ ಒಕ್ಕಲುತನದ ಮೇಲೆ ವಿಶ್ವಾಸ ಮೂಡುವಂತೆ ಮಾಡುವುದರಲ್ಲಿ ಹೊಸ ಸರ್ಕಾರದ ಆದ್ಯತೆಯಿದೆ. ಈ ನಿಟ್ಟಿನಲ್ಲಿ ಹೊಸ ಸರ್ಕಾರ ಯಶಸ್ವಿಯಾಗಬಹುದೆಂಬ ಆಶಯ ಶ್ರೀಸಾಮಾನ್ಯನದು.

ತಪ್ಪಿಸಬಹುದಾಗಿದ್ದ ಶೇರುಮಾರುಕಟ್ಟೆ ಕುಸಿತ

ಮೇ 17ರ ಶೇರು ಮಾರುಕಟ್ಟೆ ಕುಸಿತ ದೊಡ್ಡ ಭರಾಟೆಯನ್ನೇ ಸೃಷ್ಟಿಸಿತು. ಟಿ.ವಿ. ಮತ್ತು ಪತ್ರಿಕೆಗಳನ್ನೇ ನಂಬುವುದಾದರೆ, ಮೇ17ರ ಶೇರು ಮಾರುಕಟ್ಟೆ ಕುಸಿತ 'ಅತ್ಯಂತ ಆಘಾತಕಾರಿ'. ಅದನ್ನು ಕರಾಳದಿನವೆಂದೇ ಬಣ್ಣಿಸಲಾಯಿತು. 'ಬ್ಲಾಕ್ ಮಂಡೇ', 'ಬ್ಲಡಿ ಮಂಡೇ'. ಎಂದೆಲ್ಲಾ ಕರೆಯಲಾಯಿತು. ಎಡಪಕ್ಷಗಳ ಮುಖಂಡರ ಹೇಳಿಕೆಯೇ ಇದಕ್ಕೆಲ್ಲ ಕಾರಣ ಎಂಬಂತೆ ಚಿತ್ರಿಸಲಾಯಿತು. 17ನೇ ತಾರೀಖಿನ ಶೇರು ಮಾರುಕಟ್ಟೆ ಕುಸಿತ 'ಮಾನವ ನಿರ್ಮಿತ' ಎಂಬುದು ನಂತರವಷ್ಟೇ ತಿಳಿಯಿತು. ಮರುದಿನವೇ ತೀವ್ರವಾಗಿ ಸುಧಾರಿಸಿದ ಮಾರುಕಟ್ಟೆ ಮುಂದಿನ ಒಂದೆರಡು ದಿನಗಳಲ್ಲಿ ಸಹಜಸ್ಥಿತಿಗೆ ಮರಳಿತು.

ಮೇ17ರ ಶೇರು ಮಾರುಕಟ್ಟೆ ಕುಸಿತದಿಂದ ಜನಸಾಮಾನ್ಯರಿಗೆ ನಷ್ಟವಾಗಿರಲಿಲ್ಲ ಎಂಬುದನ್ನು ಗಮನಿಸಬೇಕು. ಏಕೆಂದರೆ, ಮೇ 14 ರಂದು ಶೇರು ಮಾರುಕಟ್ಟೆಯಲ್ಲಿ ಸೂಚ್ಯಾಂಕ 5070 ಪಾಯಿಂಟ್ ಇತ್ತು. 15 ಮತ್ತು 16 ರಂದು ಮಾರುಕಟ್ಟೆಗೆ ರಜೆ. 17ರಂದು ತೀವ್ರ ಕುಸಿತ ಕಂಡರೂ (4505 ಪಾಯಿಂಟ್) ನಂತರ 4900 ಮತ್ತು 5000 ಸೂಚ್ಯಾಂಕದ ನಡುವೆ ಇದೆ.

ಶೇರು ಬಜಾರಿನ ಈ ಜೂಜಾಟ ಹೇಗೆಲ್ಲಾ ನಡೆಯುತ್ತದೆ?


ಆದರೆ ಹರ್ಷದ್ ಮೆಹತಾ, ಕೇತನ್ ಪರೇಖ್, ಯು.ಟಿ.ಐ. ಹಗರಣಗಳಲ್ಲಿ ಜನಸಾಮಾನ್ಯರಿಗೆ ತೀವ್ರ ನಷ್ಟವುಂಟಾಗಿತ್ತು. ಹರ್ಷದ್ ಮೆಹ್ತಾ ಹಗರಣದಲ್ಲಿ 300ಕ್ಕೂ ಹೆಚ್ಚು ಉದ್ಯೋಗಿಗಳನ್ನು ಹೊಂದಿದ್ದ ಬ್ಯಾಂಕ್ ಆಫ್ ಕರಾಡ್ ಮುಚ್ಚಬೇಕಾಗಿಬಂದು ಲಕ್ಷಾಂತರ ಠೇವಣಿದಾರರ ಹಣವನ್ನು ಇನ್ನೂ ಪಾವತಿಸಿಲ್ಲ. ಕೇತನ್ ಪರೇಖ್ ಹಗರಣದಲ್ಲಿ 2-3 ಸಹಕಾರಿ ಬ್ಯಾಂಕುಗಳು ಮುಚ್ಚಲ್ಪಟ್ಟವು. ಯು.ಟಿ.ಐ. ಹಗರಣದಲ್ಲಿ ಜನರು ತೊಡಗಿಸಿದ ಹಣ ವಾಪಾಸು ಪಡೆಯಬೇಕೆಂದರೆ ತಿಂಗಳುಗಟ್ಟಲೆ ಕಾಯಬೇಕಾಯಿತು. ಈ ಮೂರು ಹಗರಣಗಳ ಸಂದರ್ಭದಲ್ಲಿ ತಿಂಗಳುಗಟ್ಟಲೆ ಕುಸಿತ ಉಂಟಾದುದರಿಂದ ಸಣ್ಣ ಹೂಡಿಕೆದಾರರು ನಷ್ಟ ಅನುಭವಿಸಬೇಕಾಯ್ತು.

ಆದರೂ ಮೇ17ರ ಮಾರುಕಟ್ಟೆ ಕುಸಿತವನ್ನು ಉಸ್ತುವಾರಿ ಹೊತ್ತಿದ್ದ ಎನ್.ಡಿ.ಎ. ಸರಕಾರ ತಪ್ಪಿಸಬಹುದಾಗಿತ್ತು. ಆದರೆ ಜನತೆಯಿಂದ ಸೋಲುಂಡ ಬಿಜೆಪಿ ನೇತೃತ್ವದ ಸರಕಾರ, ಸರಕಾರ ರಚನೆಗೆ ಮುಂದಾಗುತ್ತಿರುವ ಕಾಂಗ್ರೆಸ್ ಪಕ್ಷವನ್ನು ಹಾಗೂ ಕೋಮುವಾದಿಗಳನ್ನು ದೂರ ಇಡುವುದಕ್ಕಾಗಿ ಬಾಹ್ಯ ಬೆಂಬಲವನ್ನು ನೀಡುತ್ತಿರುವ ಎಡಪಕ್ಷಗಳನ್ನು ದೂಷಿಸಲು ಬಳಸಿಕೊಂಡಿತು. ಆದ್ದರಿಂದಲೇ ಶೇರುಮಾರುಕಟ್ಟೆಯಲ್ಲಿ ಏಲಂ ಕೂಗುತ್ತಿದ್ದ ದಲ್ಲಾಳಿಗಳು, "ಕಾಂಗ್ರೆಸ್ ಸರಕಾರ ವಾಪಸ್ಸು ಹೋಗಲಿ ಸೋನಿಯಾ ಗಾಂಧಿ ಹಾಯ್, ಹಾಯ್" ಎಂದು ಘೋಷಣೆ ಕೂಗುತ್ತಿದ್ದರು. ಹಾಗೂ ಕೆಲವು ಉದ್ದಿಮೆದಾರರು, ವಿದೇಶಿ ಹಣಕಾಸು ಬಂಡವಾಳದಾರರು ಎಡಪಕ್ಷಗಳ ಮೇಲೆ ಆರೋಪ ಹೊರಿಸಿದರು.

ಕುಸಿತ ತಪ್ಪಿಸುವುದು ಹೇಗೆ?

ಚುನಾವಣಾ ಫಲಿತಾಂಶಗಳು ಹೊರಬೀಳುತ್ತಿರುವಂತೆ ಶೇರು ಮಾರುಕಟ್ಟೆ ಕುಸಿತಗೊಂಡಿತ್ತು. ಮೇ 14 ರಂದು 5358.35 ಇದ್ದ ಸೂಚ್ಯಾಂಕ 13 ರಂದು ಬೆಳಿಗ್ಗೆ 5400ಕ್ಕೆ ಏರಿ ಮತ್ತೆ ಫಲಿತಾಂಶ ಬರುತ್ತಲೇ ಕುಸಿತ ಆರಂಭಗೊಂಡು

ಪುಟ 11 ಕ್ಕೆ



ಚುರುಚು ಗಾಂಚಾಣ

ಜಿ.ಎಸ್.ಮಣಿ

ಕಣ್ಮುಚ್ಚಿಕೊಂಡವರು ಕಣ್ತೆರೆದಾಗ.....

ಕಣ್ಮುಚ್ಚಿಕೊಂಡವರು ಕಣ್ತೆರೆದರೆ ಎದುರಿಗಿರುವ ಜಗತ್ತು ಕಾಣುತ್ತದೆ ಎಂಬುದು ಸರಳ ಸತ್ಯ. ಈ ಸತ್ಯ ಇಲ್ಲಿ ಯಾರಿಗೆ ಅನ್ವಯವಾಗುತ್ತದೆಂದಿರಾ? ಇದು ನಮ್ಮ ಬೂರ್ಝ್ವ ಸಮೂಹ ಮಾಧ್ಯಮಗಳಿಗೆ ಅನ್ವಯಿಸುತ್ತದೆ. ಎಡಪಕ್ಷಗಳ ಸಾಧನೆಗಳ ಬಗ್ಗೆ ಸದಾ ಕಣ್ಮುಚ್ಚಿಕೊಂಡೇ ಇರುವ ಈ ಮಾಧ್ಯಮಗಳು ಈಗ ದೇಶದಲ್ಲಿ ಸರ್ಕಾರ ರಚಿಸುವಲ್ಲಿ ಎಡಪಕ್ಷಗಳ ಬೆಂಬಲ ಅತ್ಯಂತ ಮಹತ್ವದ್ದು ಎಂದು ಅರಿತಾಗ ಕಣ್ತೆರೆದಿದ್ದಾರೆ. ಈ ತೆರೆದ ಕಣ್ಣುಗಳಿಂದಲೂ ಅವರಿಗೆ ಎಷ್ಟು ಬೇಕೋ ಅಷ್ಟು ಮಾತ್ರವೇ ನೋಡುತ್ತಾರೆ ಎಂಬುದು ಬೇರೆ ಮಾತು.

ಹೀಗೆ ಕಣ್ತೆರೆದಾಗ ಪ.ಬಂಗಾಳದಲ್ಲಿ ಎಡರಂಗ ಸರ್ಕಾರ ಔದ್ಯಮೀಕರಣದ ಸಲುವಾಗಿ ಮಾಡಿರುವ ಕೆಲಸಗಳು ಇವರ ಕಣ್ಣಿಗೆ ಬಿದ್ದಿದೆ. ಅವರ ಕಣ್ಣಿಗೆ ಬಿದ್ದ ಕೆಲವು ವಿಷಯಗಳು ಹೀಗಿವೆ.

ಪಶ್ಚಿಮ ಬಂಗಾಳ ಭಾರತದಲ್ಲೇ ಅತಿ ಹೆಚ್ಚು ಜಪಾನಿ ಹೂಡಿಕೆಯನ್ನು ಆಕರ್ಷಿಸಿರುವ ರಾಜ್ಯವಾಗಿದೆ. ಬಹಳ ಕಠಿಣ ವ್ಯವಹಾರಸ್ಥರೆಂದೇ ಜಗತ್ತಿನಾದ್ಯಂತ ಹೆಸರು ಪಡೆದಿರುವ ಜಪಾನಿಯರನ್ನು ಈ ಪ್ರಮಾಣದಲ್ಲಿ ಆಕರ್ಷಿಸಲು ಬೇರೆ ರಾಜ್ಯಗಳಿಗೆ ಸಾಧ್ಯವಾಗಿಲ್ಲ.

ಈ ಜಪಾನಿ ಕಂಪನಿಗಳ ಹೂಡಿಕೆಗಳು ಹಾಲ್ದಿಯಾ ಪಟ್ಟಣದ ಸುತ್ತಮುತ್ತಲೇ ಆಗಿವೆ. ಇದು ಮುಖ್ಯ ಔದ್ಯಮಿಕ ಕೇಂದ್ರವಾಗಿಯೂ ಹೊಮ್ಮುತ್ತಿದೆ.

ಈ ಹಾಲ್ದಿಯಾ ಎಲ್ಲ ತರಹದ ಬಂದ್‌ಗಳಿಂದ ಮುಕ್ತವಾಗಿರುತ್ತದೆ.

ಬಂದ್ ದಿನಗಳಲ್ಲಿ ಮಾಹಿತಿ ತಂತ್ರಜ್ಞಾನದ ವೃತ್ತಿಗಳಲ್ಲಿರುವವರು (ಇವರು ಹೆಚ್ಚಾಗಿ ಕಲ್ಕತ್ತದ ಸಾಲ್ಟ್ ಲೇಕ್ ಸಿಟಿಯಲ್ಲಿರುತ್ತಾರೆ) ಹೆಚ್ಚಿನ ಸರ್ಕಾರಿ ಗಮನವನ್ನು ಪಡೆಯುತ್ತಾರೆ. ಅಂದರೆ ಅವರ ಕೆಲಸಕ್ಕೆ ಅಡ್ಡಿಗಳಿರುವುದಿಲ್ಲ.

ಬೇರೆ ರಾಜ್ಯಗಳಲ್ಲಿನಂತೆ ಇಲ್ಲಿ ಆರ್ಥಿಕ ಸುಧಾರಣೆಗಳ ಬೊಬ್ಬಾಟವಿರುವುದಿಲ್ಲ. ಯಾಕೆಂದರೆ ಎಡರಂಗ ಸರ್ಕಾರ ಹೆಚ್ಚು ಪ್ರಚಾರವಿಲ್ಲದೆ "ಕೆಲಸ" ಮಾಡುತ್ತದೆ.

ಎಡರಂಗ ಸರ್ಕಾರ ಬಹುರಾಷ್ಟ್ರೀಯ ಕಂಪನಿಗಳ ಹೂಡಿಕೆ ವಿಷಯದಲ್ಲಿ ಆಯ್ಕೆ ಮಾಡುತ್ತದೆ. ಎಲ್ಲ ತರಹದ ಹೂಡಿಕೆಗಳನ್ನು ಬಯಸುವುದಿಲ್ಲ. ಮೆಕ್ ಡೊನಾಲ್ಡ್‌ಗಳು ಕೆಂಟಕ ಫ್ರೈಡ್ ಚಿಕನ್, ಪಿಜ್ಜಾ ಹಟ್‌ಗಳಿಗೆ ಇಲ್ಲಿ ಜಾಗವಿಲ್ಲ. ಆದರೆ ಪೆಪ್ಸಿ ಇಲ್ಲ ಆಲೂಗಡ್ಡೆ ಸಂಸ್ಕರಣ ಘಟಕ ತೆರೆಯಲಿದೆ. ಯಾಕೆಂದರೆ ಪ.ಬಂಗಾಳದಲ್ಲಿ ಆಲೂಗಡ್ಡೆಯ ಉತ್ಪಾದನೆ ಬಹಳ ಹೆಚ್ಚಾಗಿದೆ. ರೈತರಿಗೆ ಸೂಕ್ತ ಬೆಲೆ ದೊರೆಯುತ್ತಿಲ್ಲ.

ಗುಜರಾತ್ ಅಂಬುಜಾ ಸಿಮೆಂಟ್ಸ್ ಪಶ್ಚಿಮ ಬಂಗಾಳದಲ್ಲಿ ಒಂದು ಘಟಕವನ್ನು ಯಾವುದೇ ತೊಂದರೆಯಿಲ್ಲದೆ ತೆರೆದಿದೆ.

ಹಲವು ಉದ್ಯಮಿಗಳ ಪ್ರಕಾರ ಪಶ್ಚಿಮ ಬಂಗಾಳ ಉದ್ದಿಮೆಗಳಿಗೆ ಸುರಕ್ಷಿತ ಸ್ಥಳ.

ನಷ್ಟ ಅನುಭವಿಸುತ್ತಿರುವ ಸರ್ಕಾರಿ ಉದ್ಯಮಿಗಳನ್ನು ಬಹಳ ಎಚ್ಚರದಿಂದ ಮುಚ್ಚಲಾಗುತ್ತಿದೆ. ಕೆಲಸಗಾರರಿಗೆ ಬದಲಿ ಉದ್ಯೋಗದ ದಾರಿಗಳನ್ನು ತೆರೆಯಲಾಗಿದೆ.

ಇದು ಬೂರ್ಝ್ವಾ ಮಾಧ್ಯಮಗಳಿಗೂ ಕಂಡ ಸತ್ಯ.

ಜನವಿರೋಧಿ ನೀತಿಗಳಿಗೆ ಜನರ ಉತ್ತರ

ನಮ್ಮ ಸಮೂಹ ಮಾಧ್ಯಮಗಳು, ...ಮೀಕ್ಷೆಗಾರರು ತಾವೇ ಸೃಷ್ಟಿಸಿದ ಸುಳ್ಳುಗಳ ...ಳಿಯಲ್ಲಿ ಮುಳುಗಿಹೋಗಿದ್ದರು. ಲೋಕಸಭಾ ...ನಾವಣೆಗಳಲ್ಲಿ ಎನ್‌ಡಿಎ ಅಧಿಕಾರಕ್ಕೆ ಬರುತ್ತದೆ. ...ಲ್ಲವೇ ಅದು ಅಧಿಕಾರದ ಹತ್ತಿರಕ್ಕೆ ಬರುತ್ತದೆ ...ಂದಿದ್ದರು. ಈ ಸುಳ್ಳುಗಳಿಗೆ ಉದಾರೀಕರಣ ...ಂದ, ಕೋಮು ವಾದದಿಂದ, ಫ್ಯಾಸಿಸ್ಟ್ ...ೋರಣೆಗಳಿಂದಾಗಿ ನೋವುಂಡ ಜನ ಸ್ಪಷ್ಟ ಉತ್ತರ ...ೀಡಿದ್ದಾರೆ. "ನಿಮ್ಮ ನೀತಿಗಳಿಗೆ ದಿಕ್ಕಾರ" ಅಧಿಕಾರ ...ಮಗೆ ಸಲ್ಲದು"

ಮುಖ್ಯವಾಗಿ ಕಳೆದೈದು ವರ್ಷಗಳಲ್ಲಿ ...ದಾರೀಕರಣವಾದಿಗಳು ಎಂತಹ ಹುಯಿಲೆ ...ಸಿದ್ದರೆಂದರೆ ಶ್ರೀಮಂತರ ಪರ ನೀತಿಗಳೇ ...ನ್ನೆಂದೂ ಶಾಶ್ವತವಾಗಿ ಜಾರಿಯಲ್ಲಿರುವುದು. ...ಡಜನತೆಗೆ ಶೋಷಣೆಗೆ ಒಳಗಾಗುವ ದಾರಿ ...ಒಂದೇ ಇರುವುದು. ಇನ್ನೆಂದೂ ಬಂಡವಾಳ ...ಾಹಿಗಳೇ ಈ ದೇಶವನ್ನು ತಮ್ಮ ಮನಬಂದಂತೆ ...ಳುವುದು ಎಂಬ ಧೋರಣೆ ಸಮೂಹ ...ಮಾಧ್ಯಮಗಳಲ್ಲೆಲ್ಲ ಬಿಂಬಿತವಾಗತೊಡಗಿತ್ತು.

ಬಿಜೆಪಿ, ವಿಶ್ವಹಿಂದೂ ಪರಿಷತ್ ಮತ್ತು ...ರೆಸ್ಸೆಸ್‌ನ ಜನ ರಾಕ್ಷಸರಂತೆ ಅಟ್ಟಹಾಸ ...ಮಾಡತೊಡಗಿದ್ದರು. ಅಧಿಕಾರದ ದುರುಪಯೋಗ ...ಭ್ರಷ್ಟಾಚಾರ ಎಲ್ಲಕ್ಕೂ ಶಾಶ್ವತ ಗೆಲುವು ...ದೊರೆತಿದೆಯೇನೋ ಎಂಬಂತೆ ಕಾಣುತ್ತಿತ್ತು.

ಕೆಲಸ ಕಳೆದುಕೊಂಡು ಹೊಟ್ಟೆಪಾಡಿನ ದಾರಿಯೇ ಕಾಣದೇ ನರಳುವವರ, ಬೆಳೆದ ಬೆಳೆಗೆ ಬೆಲೆ ದೊರೆಯದೇ ಸಾಲದ ಹೊರೆಯಡಿ ನರಳುವವರ, ಆತ್ಮಹತ್ಯೆ ಮಾಡಿಕೊಳ್ಳುವವರ, ಬಡತನದಿಂದ ಬರುವ ಹಲವು ತರಹದ ನೋವುಗಳನ್ನು ಅನುಭವಿಸುವವರ ಸಂಖ್ಯೆ ಬೆಳೆಯುತ್ತಲೇ ಹೋಯಿತು. ಒಂದೇ ಮಾತಿನಲ್ಲಿ ಹೇಳುವುದಾದರೆ ಬಡವರ ಸಂಖ್ಯೆ ಹೆಚ್ಚುತ್ತಲೇ ಹೋಯಿತು. ಕೆಲವೇ ಕೆಲವು ಶ್ರೀಮಂತರ ಶ್ರೀಮಂತಿಕೆ ಹೆಚ್ಚುತ್ತ ಹೋಯಿತು. ಬಡವ, ಶ್ರೀಮಂತರ ನಡುವಿನ ಅಂತರವೂ ಸಹ ಹೆಚ್ಚುತ್ತ ಬಂತು. ಈಗ ಈ ನೀತಿಗಳಿಗೆ ಸ್ಪಷ್ಟ, ಉತ್ತರನ್ನು ಈ ದೇಶದ ಶ್ರಮಿಕ ಜನ ನೀಡಿದ್ದಾರೆ. ಇಂತಹ ನೀತಿಗಳಿಗೆ ದಿಕ್ಕಾರವಿರಲಿ.

ದೇಶದಾದ್ಯಂತ ಇಂತಹ ನೀತಿಗಳ ನೋವನ್ನು ಮೌನವಾಗಿ ಉಂಡವರು ಸಿಡಿಲಿನಂತೆ ಉತ್ತರ ನೀಡಿದ್ದಾರೆ. ಎನ್‌ಡಿಎ ಪಕ್ಷಗಳಿಗೆ ಅವರ ಸ್ಥಳವನ್ನು ತೋರಿಸಿದ್ದಾರೆ.

ದುಡಿವ ಜನರ ಹೋರಾಟಗಳನ್ನು ಸಂಘಟಿಸಿರುವ ಎಡಪಕ್ಷಗಳಿಗೂ ಜನ ತಮ್ಮ ಮತಗಳ ಪ್ರೋತ್ಸಾಹ ನೀಡಿದ್ದಾರೆ. ಜನರ ಈ ತೀರ್ಪನ್ನು ಸರ್ಕಾರ ರಚಿಸುವ ಕಾಂಗ್ರೆಸ್ ಸರಿಯಾಗಿ ಅರ್ಥ ಮಾಡಿಕೊಂಡು ನಡೆಯುತ್ತದೆ ಎಂದುಕೊಳ್ಳೋಣವೇ?

ತಪ್ಪಿಸಬಹುದಾಗಿದ್ದ ಶೇರುಮಾರುಕಟ್ಟೆ ಕುಸಿತ

ಪುಟ 10 ರಿಂದ

14ನೇ ತಾರೀಖಿನಂದು 5069.87ಕ್ಕೆ ಇಳಿದಿತ್ತು. ಅಂದರೆ ಸುಮಾರು 350 ಪಾಯಿಂಟುಗಳ ಕುಸಿತ ಕಂಡಿತ್ತು. ಅಂದರೆ ಕಾರಣ ಇಷ್ಟೆ. ಲಾಭದಾಯಕ ಉದ್ದಿಮೆಗಳನ್ನು ಖಾಸಗೀಕರಿಸುವ, ಬಂಡವಾಳ ಹಿಂತೆಗೆದುಕೊಳ್ಳುವ ಪ್ರಕ್ರಿಯೆಗೆ ಗಂಡಾಂತರ ಉಂಟಾಗುತ್ತದೆ ಎಂದು ಮನಗಂಡ ಲಾಭಕೋರ ವಿದೇಶಿ ಹಣಕಾಸು ಬಂಡವಾಳವು ಲಾಭವನ್ನು ಹುಡುಕುತ್ತಾ ಬೇರೆ ದೇಶಗಳ ಕಡೆಗೆ ಲಗ್ಗೆ ಹಾಕಿತ್ತು. ಆದರೆ ಅದೇ ಸಂದರ್ಭದಲ್ಲಿ ಸರಕಾರದ ಸ್ವಾಮ್ಯದಲ್ಲಿರುವ ಬ್ಯಾಂಕು, ಎಲ್.ಐ.ಸಿ. ಮತ್ತಿತರ ಹಣಕಾಸು ಸಂಸ್ಥೆಗಳ ಮೂಲಕ ಮಾರುಕಟ್ಟೆಗೆ ಪ್ರವೇಶಿಸಿ ಶೇರುಗಳನ್ನು ಕೊಳ್ಳುವುದರ ಮೂಲಕ ಕುಸಿತವನ್ನು ತಪ್ಪಿಸಬಹುದಾಗಿತ್ತು. ಆದರೆ ಹೊಸ ಸರಕಾರಕ್ಕೆ ಮಸಿ ಬಳಿಯಲು ಯತ್ನಿಸಿದ ಬಿಜೆಪಿ ನೇತೃತ್ವದ ಸರಕಾರದ ಹಣಕಾಸು ಮಂತ್ರಿ ಜಸ್ವಂತ್ ಸಿಂಗ್‌ರವರು 'ನಿದ್ದೆ' ಬಂದಿರುವವರಂತೆ ನಟಿಸಿ, ತೆಪ್ಪಗಾದರು. 17ನೇ ತಾರೀಖಿನಂದು ಮಧ್ಯಾಹ್ನ ನಿಯೋಜಿತ ಪ್ರಧಾನಮಂತ್ರಿ ಡಾ|| ಮನಮೋಹನ್ ಸಿಂಗ್‌ರವರು ದೂರವಾಣಿ ಮೂಲಕ ಮಾತನಾಡುವವರೆಗೂ ಸುಮ್ಮನಿದ್ದ ಜಸ್ವಂತ್ ಸಿಂಗ್ ಶೇರುಗಳನ್ನು ಖರೀದಿಸಲು ಸರಕಾರಿ ಹಣಕಾಸು ಸಂಸ್ಥೆಗಳಿಗೆ ನಿರ್ದೇಶಿಸುವ ಮೂಲಕ ಮಾರುಕಟ್ಟೆ ಚೇತರಿಸಿಕೊಂಡಿತು. ಇಲ್ಲಿಯೂ ಕುಸಿತವನ್ನು ತಡೆದದ್ದು, ಮಾರುಕಟ್ಟೆಯನ್ನು ರಕ್ಷಿಸಿದ್ದು, ವಿದೇಶಿ ಬಂಡವಾಳವಲ್ಲ ಅಥವಾ ದೇಶೀಯ ಖಾಸಗಿ ಬಂಡವಾಳವೂ ಅಲ್ಲ- ಬದಲಾಗಿ ಸರಕಾರಿ ಸ್ವಾಮ್ಯದ ಹಣಕಾಸು ಸಂಸ್ಥೆಗಳು.

ಶೇರು ಮಾರುಕಟ್ಟೆ ಕುಸಿತ ಆರಂಭಗೊಂಡಿದ್ದು ಚುನಾವಣಾ ಫಲಿತಾಂಶ ಬಂದಮೇಲೆ ಮಾತ್ರವಲ್ಲ, ಚುನಾವಣಾ ಪ್ರಚಾರ ನಡೆಯುತ್ತಿದ್ದಂತೆ, ಅದರಲ್ಲೂ ವಿಶೇಷವಾಗಿ ಮತಪೆಟ್ಟಿಗೆ ಸಮೀಕ್ಷೆ(Exit Poll)ಯಲ್ಲಿ ಎನ್.ಡಿ.ಎ. ಸರಕಾರಕ್ಕೆ ಬಹುಮತ ಸಿಗುತ್ತಿಲ್ಲ ಎಂಬುದು ಖಾತ್ರಿಯಾಗುತ್ತಿದ್ದಂತೆ ಕುಸಿತ ಆರಂಭಗೊಂಡಿತ್ತು. ಉದಾಹರಣೆಗೆ ಏಪ್ರಿಲ್ 26ರ ಎರಡನೇ ಹಂತ, ಮೂರನೇ ಹಂತದ ಚುನಾವಣೆ ಮುಗಿಯುತ್ತಿದ್ದಂತೆ, ಮತಪೆಟ್ಟಿಗೆ ಸಮೀಕ್ಷೆಯಿಂಜ ಎನ್.ಡಿ.ಎ. ಸರಕಾರ ಅಧಿಕಾರಕ್ಕೆ ಬರುವುದಿಲ್ಲ ಎಂಬ ಅನುಮಾನ ವ್ಯಕ್ತಪಡಿಸಿತು. ಆದ್ದರಿಂದ ಏಪ್ರಿಲ್ 27ರ ಶೇರು ಮಾರುಕಟ್ಟೆಯಲ್ಲಿ 213 ಪಾಯಿಂಟುಗಳ ಕುಸಿತ ಕಂಡಿತು.

ಸಟ್ಟಾ ವ್ಯಾಪಾರಿಗಳಿಗೆ ಪಟ್ಟ

ಎನ್.ಡಿ.ಎ. ಸರಕಾರದ 'ಭಾರತ ಪ್ರಕಾಶಿಸುತ್ತಿದೆ', 'ಹಿತಾನುಭವ' ಘೋಷಣೆ ಯಾರ ಪರವಾಗಿತ್ತು ಎಂಬುದು ಚುನಾವಣೆಯಲ್ಲಿ ಸಾಕಷ್ಟು ಚರ್ಚಿತಗೊಂಡಿದೆ. ಅದು ಫಲಿತಾಂಶದಲ್ಲೂ ಬಿಂಬಿಸಿದೆ. ಶ್ರೀಮಂತ ಉದ್ದಿಮೆದಾರರಿಗೆ ಹೆಚ್ಚು ಹೆಚ್ಚು ರಿಯಾಯಿತಿಗಳನ್ನು ನೀಡಿದ ವಾಜಪೇಯಿ ಸರಕಾರ, ಶೇರು ಮಾರುಕಟ್ಟೆಯ ಸಟ್ಟಾ ವ್ಯಾಪಾರಿಗಳಿಗೂ ಹಬ್ಬದೂಟವನ್ನೇ ನೀಡಿತ್ತು. ಈ ಸರಕಾರದ ಅಡಿಯಲ್ಲಿ ಜಾರಿಗೆ ಬಂದ 'ಡೇ ಟ್ರೇಡಿಂಗ್'(ಒಂದೇ ದಿನದಲ್ಲಿ ಮುಗಿಸುವ ವ್ಯವಹಾರ) ಅಥವಾ 'ಶೋರ್ಟ್ ಸೆಲ್ಲಿಂಗ್' ಪ್ರಕಾರ, ತಮ್ಮಲ್ಲಿ ಹಣವಿಲ್ಲದೆಯೇ ಸಟ್ಟಾ ವ್ಯಾಪಾರಿಗಳಾದ ಶೇರು ದಲ್ಲಾಲಿಗಳು ಕೋಟಿಗಟ್ಟಲೆ ಹಣ ಸಂಪಾದಿಸಬಹುದು. ಅಂದರೆ ಈ ಶೇರು ದಲ್ಲಾಳಿಗಳಿಗೆ, ಹೂಡಿಕೆದಾರರಿಗೆ ಮಾರುಕಟ್ಟೆಯಲ್ಲಿ ದರಹೆಚ್ಚಾದರೂ ಲಾಭವಾಗುತ್ತದೆ. ಕುಸಿತ ಕಂಡರೂ ಲಾಭದ ಕೊಳ್ಳೆ ಹೊಡೆಯುತ್ತಾರೆ.

ಅದು ಹೇಗೆಂದರೆ, 'ಸೆಬಿ' (STOCK AND EXCHANGE BOARD OF INDIA) ನಿಯಮ ಪ್ರಕಾರ, ಯಾವುದೇ ದಲ್ಲಾಳಿಯ ಬಳಿಯಲ್ಲಿ ತಾನು ಜಮಾ ಮಾಡಿದ್ದ 10 ಪಟ್ಟು ಹಣದಷ್ಟು ಶೇರುಗಳನ್ನು ಖರೀದಿಸಬಹುದು ಅಥವಾ ಮಾರಾಟ ಮಾಡಬಹುದು. ಅಂದರೆ, ದಲ್ಲಾಳಿಯ ಬಳಿಯಲ್ಲಿ 1 ಕೋಟಿ ರೂ. ಜಮಾ ಮಾಡಿದರೆ 10 ಕೋಟಿ ರೂ. ಶೇರುಗಳನ್ನು ಖರೀದಿಸಬಹುದು ಅಥವಾ ಮಾರಾಟ ಮಾಡಬಹುದು. ಹಾಗೆಯೇ ಒಂದೇ ದಿನದಲ್ಲಿ 2-3 ಅಥವಾ ಇನ್ನೂ ಹೆಚ್ಚು ಬಾರಿ ಖರೀದಿ, ಮಾರಾಟ ಮಾಡಬಹುದು. ಅಂದರೆ ಹಣವಿಲ್ಲದೆಯೇ ರೂ 9 ಕೋಟಿ (10-1)'ಕಲ್ಪನೆಯ ಹಣ' (fantasy money) ದ ಮೂಲಕ ತನ್ನ ಮೂಲ ಬಂಡವಾಳದ ಐದು ಪಟ್ಟು, ಹತ್ತು ಪಟ್ಟು ಹಣ ಮಾಡಿಕೊಳ್ಳುತ್ತಾನೆ. ಆ ಮೂಲಕ ಮಾರುಕಟ್ಟೆಯ ಕುಸಿತಕ್ಕೆ ಅಥವಾ ಏರುವಿಕೆಗೆ ಕಾರಣವಾಗುತ್ತಾನೆ.



ಈ ಕೈಚಳಕದಲ್ಲಿ ಏನೆಲ್ಲಾ ಅಡಗಿದೆ?

ತಮ್ಮಲ್ಲಿ 1 ಕೋಟಿ ಮಾತ್ರ ಹಣವಿದ್ದರೂ, 10 ಕೋಟಿ ರೂ.ನ ಶೇರುಗಳನ್ನು ದಲ್ಲಾಳಿಗಳ ಮುಲಕ ಖರೀದಿಸಿ ಮಾರುಕಟ್ಟೆಗೆ ಹಾಕುತ್ತಾರೆ. ಒಂದೇ ಸಾರಿ ಜಾಸ್ತಿ ಶೇರು ಮಾರುಕಟ್ಟೆಗೆ ಬಂದಾಗ ಕುಸಿತ ಉಂಟಾಗುತ್ತದೆ. ತೀವ್ರ ಕುಸಿತ ಆದಾಗ ಖರೀದಿ ಮಾಡಿ ದಲ್ಲಾಳಿಯ ಶೇರುಗಳನ್ನು ವಾಪಾಸು ನೀಡಿ ತಾವು ಲಾಭ ಮಾಡಿಕೊಳ್ಳುತ್ತಾರೆ.


ಆದ್ದರಿಂದ ಮೇ 17ರ ಮಾರುಕಟ್ಟೆ ಕುಸಿತದಲ್ಲಿ ಸ್ಥಾಪಿತ ಹಿತಾಸಕ್ತಿ ಉಳ್ಳ ದಲ್ಲಾಳಿಗಳ ಕೂಟವೇ (bear cartel) ಕಾರಣವೆಂದು ಎಡಪಕ್ಷಗಳು ಆರೋಪಿಸಿದ್ದು ಸಮಗ್ರ ತನಿಖೆ ನಡೆಯಬೇಕೆಂದು ಒತ್ತಾಯಿಸಿವೆ. ಕೆಲವು ಹಿರಿಯ ದಲ್ಲಾಳಿಗಳು ಸಹ ಈ ಬಗ್ಗೆ ಸಮಗ್ರ ತನಿಖೆ ನಡೆಯಬೇಕೆಂದು ಒತ್ತಾಯಿಸಿವೆ.

ಅಮೇರಿಕಾದ ಅನುಭವ

2001ರ ಸೆಪ್ಟೆಂಬರ್ 11 ರಂದು ನ್ಯೂಯಾರ್ಕ್‌ನಲ್ಲಿ ವಿಶ್ವ ವ್ಯಾಪಾರ ಕೇಂದ್ರ(WTC)ದ ಮೇಲೆ ಭಯೋತ್ಪಾದಕ ದಾಳಿ ನಡೆದಾಗ ನ್ಯೂಯಾರ್ಕ್ ಶೇರುಮಾರುಕಟ್ಟೆ ತೀವ್ರ ಕುಸಿತ ಕಂಡಿತ್ತು. ಆದರೆ ಅಲ್ಲಿನ ಸರಕಾರ 3 ದಿನಗಳವರೆಗೆ ಮಾರುಕಟ್ಟೆಯನ್ನು 'ಬಂದ್' ಮಾಡಿತು. ಪರಿಸ್ಥಿತಿ ತಿಳಿಯಾದ ನಂತರ ಮಾರುಕಟ್ಟೆ ತೆರೆದಾಗ ತೀವ್ರ ಏರುಪೇರು ಉಂಟಾಗಲಿಲ್ಲ. ಪ್ರತಿಯೊಂದಕ್ಕೂ ಅಮೇರಿಕಾದ ಕುರಿತು ಮಾತನಾಡುವ ವಾಜಪೇಯಿ, ಅಡ್ವಾನಿ, ಜಸ್ವಂತ್ ಬಳಗ ಮೇ 17 ರಂದು ಮಧ್ಯೆ ಪ್ರವೇಶಿಸಿ ಮಾರುಕಟ್ಟೆ ಕುಸಿತ ತಡೆಯುವುದರ ಬದಲಾಗಿ ತನ್ನ ವಿರೋಧಿ ರಾಜಕೀಯ ಪಕ್ಷಗಳಿಗೆ ಮಸಿ ಬಳಿಯಲು ಯತ್ನಿಸಿತು. ಇಂತಹ ಸನ್ನಿವೇಶದಲ್ಲಿ ಶೇರು ಮಾರುಕಟ್ಟೆ ಲಾಭಕೋರರಿಂದ ದೂರವಿರಿಸಲು ಕೇಂದ್ರ ಸರ್ಕಾರದಿಂದ ಸೂಕ್ತ ಕಾನೂನು ಕ್ರಮ ಹಾಗೂ ಮಧ್ಯ ಪ್ರವೇಶ ಅಗತ್ಯ.

■ ಬಾಲಕೃಷ್ಣ ಶೆಟ್ಟಿ, ಶಿರ್ವ

ನನ್ನ ಭೂಗತ ಜೀವನದ ದಿನಗಳು



ಪುಟಗಳಿಂದ

1936 ರಿಂದ 1942 ರ ನಡುವೆ ಕಮ್ಯುನಿಸ್ಟ್ ಪಕ್ಷವನ್ನು ಬಹಿಷ್ಕರಿಸಿದ್ದ ಅವಧಿಯಲ್ಲಿ ಪೋಲೀಸರು ಒಂದು ನೆಪವೊಡ್ಡಿ ಕಮ್ಯುನಿಸ್ಟ್ ಕಾರ್ಯಕರ್ತರನ್ನು ಭೇಟೆಯಾಡುತ್ತಿದ್ದರು. ನಾಯನಾರ್ ಅವರು ಅತ್ಯಂತ ಕೋಲಾಹಲಕಾರಿಯಾದ 'ಮೊರಾಜಾ' ಮತ್ತು ಕಯ್ಯೂರು' ಪ್ರಕರಣಗಳಲ್ಲಿ ಪೋಲೀಸರಿಗೆ ಬೇಕಾಗಿದ್ದರು. ನಿಷ್ಠಾವಂತ ಸಂಗಾತಿಗಳ ಗುಪ್ತಜಾಲದ ಸಹಾಯದಿಂದ ಕಾಂ. ನಾಯನಾರ್ ಕಣ್ಣು ತಪ್ಪಿಸಿ ದಿನಗಳನ್ನು ಕಳೆದರು. 1940 ರ ಸೆಪ್ಟೆಂಬರ್ 15 ರಂದು ಉತ್ತರ ಮಲಬಾರ್ ಒಂದು ರಣರಂಗವಾಗಿತ್ತು. ಮೊರಾಜಾ ಮಟ್ಟನ್ನೂರ್, ತಲ್ಲಿಚೇರಿ ಮತ್ತು ಕೂತುಪರಂಪುಗಳಲ್ಲಿ ಲಾಠಿ ಚಾರ್ಜ್, ಗೋಲೀಬಾರುಗಳು ನಡೆದವು. ಅಬು ಎಂಬೊಬ್ಬ ರೈತ ಹಾಗೂ ಚಾತುಕುಟ್ಟಿಯೆಂಬ ಕಾರ್ಮಿಕನೊಬ್ಬನು ಗೋಲಿಬಾರಿಗೆ ಆಹುತಿಯಾದರು. 1927 ಆನಂತರ ಇವರೇ ಪ್ರಥಮ ಹುತಾತ್ಮರು. ಕರ್ನಾಟಕದಲ್ಲಿ ಕಳೆದ ಭೂಗತ ಜೀವನದ ಕೆಲವು ಘಟನೆಗಳು ಇಲ್ಲಿವೆ.


ಅಂಚಂಪೀಡಿಕಾದಲ್ಲಿ ನಡೆದ ಪ್ರಕರಣದ ಸುದ್ದಿ ದೇಶದಾದ್ಯಂತ ಕಾಡ್ಗಿಚ್ಚಿನಂತೆ ಹಬ್ಬಿತು. ಸಬ್‌ಇನ್ಸ್‌ಪೆಕ್ಟರ್ ಕುಟ್ಟಿ ಕೃಷ್ಣ ಮೆನನ್ ಸ್ಥಳದಲ್ಲೇ ಮೃತಪಟ್ಟನು. ಹೆಡ್‌ಕಾನ್ಸ್‌ಟೆಬಲ್ ಗೋಪಾಲನ್ ನಾಯರ್ ಆಸ್ಪತ್ರೆಯಲ್ಲಿ ಅಸುನೀಗಿದನು. ಮೊರಾಜಾಕ್ಕೆ ಒಂದು ಪೋಲೀಸ್ ಪಡೆ ಬಂದು ಮನೆಮನೆಗೆ ನುಗ್ಗಿ ಕೈಗೆ ಸಿಕ್ಕಿದವರನ್ನೆಲ್ಲಾ ಹೊಡೆದರು. ಸಭೆ ನಡೆದ ಸ್ಥಳದಲ್ಲಿ ಬಿದ್ದಿದ್ದ ಲಾಠಿಗಳನ್ನು ವಶಪಡಿಸಿಕೊಂಡು ತಮ್ಮ ತನಿಖೆ ಪ್ರಾರಂಭಿಸಿದರು. ನಾನು ಎತ್ತರವಾದ ಮತ್ತು ದಷ್ಟಪುಷ್ಟವಾದ ಶರೀರದವನಾದ್ದರಿಂದ ಗುಂಪಿನಲ್ಲಿ ನನ್ನನ್ನು ಗುರುತಿಸುವುದು ಬಹಳ ಸುಲಭವಾಗಿತ್ತು. ಈ ಸಮಸ್ಯೆಯಿಂದಾಗಿ ನಾನು ಬಹಳ ಎಚ್ಚರದಿಂದಿರಬೇಕಾಯಿತು. ಭೂಗತನಾಗಿ ತಲೆಮರೆಸಿಕೊಂಡಿರುವುದು ಮತ್ತಷ್ಟು ಕಷ್ಟದ ಕೆಲಸವಾಗಿತ್ತು.

ಹೊಸದುರ್ಗದ ಮಾರ್ಗವಾಗಿ ನಾನು ತಕ್ಷಣ ಕರ್ನಾಟಕಕ್ಕೆ ಹೊರಟೆನು. ಇಡೀ ದೂರವನ್ನು ಕಾಲುದಾರಿಗಳನ್ನನುಸರಿಸಿ ರಾತ್ರಿಯಲ್ಲೇ ಬಹುಎಚ್ಚರಿಕೆಯಿಂದ ಕ್ರಮಿಸಬೇಕಾಯಿತು. ಹಗಲು ವೇಳೆಯಲ್ಲಿ ರೈತ ಚಳುವಳಿಗೆ ಸಂಬಂಧಿಸಿದ ಯಾರದಾದರೊಬ್ಬರ ಮನೆಯಲ್ಲಿ ಕಳೆಯಬೇಕಾಯಿತು. ಪೊಲೀಸರ ಚಲನೆ ಮತ್ತಿತರ ವಿಷಯಗಳ ಬಗ್ಗೆ ನಾನು ಸುದ್ದಿಗಳನ್ನು ಪಡೆಯಬಹುದಿತ್ತು. ಕಾಡಿನಲ್ಲಿ ನಡೆಯಬೇಕಾಗಿದ್ದ ಈ ಕಾಲದಲ್ಲಿ ನಾನು ಬೂಟು (ಷೂ) ಹಾಕಲು ಪ್ರಾರಂಭಿಸಿದ್ದು ಇಲ್ಲವಾದರೆ ಜಿಗಣೆ, ಮುಳ್ಳುಗಳಿಂದ ರಕ್ಷಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಭೂಗತ ಜೀವನದ ದಿನಗಳನ್ನು ಕಳೆಯುತ್ತ ಷೂ ಹಾಕುವುದು ಅಭ್ಯಾಸವಾಯಿತು. ನನ್ನ ಪ್ರಯಾಣದ ನಾಲ್ಕನೆಯ ದಿನ ರೈತಸಂಘದ ಕಾರ್ಯಕರ್ತರೊಬ್ಬರ ಮನೆಗೆ ಹೋದೆನು. ಹಗಲು ವೇಳೆಯನ್ನು ಬೆಟ್ಟದ ಇಳಿಜಾರಿನಲ್ಲಿದ್ದ ಈ ಮನೆಯಲ್ಲಿ ಕಳೆಯಬೇಕೆಂದು ನನಗೆ ಸೂಚನೆ ನೀಡಲಾಗಿತ್ತು.

ಊಟ ತಿಂಡಿಗಳಿಲ್ಲದೆ ಬಹುದೂರದ ನಡೆದದ್ದರಿಂದ ನಾನು ಬಹಳ ದಣಿದಿದ್ದೆನು. ನಾನು ತಂಗಿದ್ದ ರೈತನ ಗುಡಿಸಲಿನಲ್ಲಿ ಎರಡು ಕೋಣೆಗಳು ಮಾತ್ರ ಇದ್ದವು. ಅದರಲ್ಲೊಂದನ್ನು ಅಡಿಗೆ ಮನೆಯನ್ನಾಗಿ ಉಪಯೋಗಿಸಲಾಗಿತ್ತು. ನನ್ನ ಆಶ್ರಯದಾತ, ಅವನ ಹೆಂಡತಿ ಮತ್ತು ಅವರ ಪುಟ್ಟ ಮಗು ಮತ್ತೊಂದು ಕೊಠಡಿಯನ್ನು ಮಲಗುವ ಕೋಣೆಯಾಗಿ ಉಪಯೋಗಿಸುತ್ತಿದ್ದರು. ಆ ಕೋಣೆಯಲ್ಲೇ ಒಂದು ಮೂಲೆಯಲ್ಲಿ ನಾನು ಮಲಗಲು ಒಂದು ಚಾಪೆ ಹಾಸಿದರು. ದಂಪತಿ ಗಳಿಬ್ಬರು ಅಡಿಗೆ ಮನೆಯಲ್ಲಿ ಮತ್ತೊಂದು ಚಾಪೆ ಹಾಕಿಕೊಂಡರು. ವಿಪರೀತ ದಣಿದಿದ್ದರಿಂದ ನಾನು ಮಲಗಿದ ಕೂಡಲೇ ಗಾಢ ನಿದ್ರೆ ಆವರಿಸಿತು.

ಇದ್ದಕ್ಕಿದ್ದಂತೆ ಯಾರೋ ನನ್ನನ್ನು ಅಲುಗಾಡಿಸಿದರು. ನಾನು ಎಚ್ಚರಗೊಂಡು "ಏನಿದು?" ಎಂದು ಕೇಳಿದೆ. 'ಯಾರೋ ಬರುತ್ತಿದ್ದಾರೆ.' ಎಂದು ಉತ್ತರ ಬಂದಿತು.

ಬೆಳದಿಂಗಳ ರಾತ್ರಿಯಾದ್ದರಿಂದ ದೂರದಿಂದ ಯಾರೇ ಬಂದರೂ ನೋಡಬಹುದಿತ್ತು. 'ನಾವು ಒಂದು ಉಪಾಯ ಮಾಡಿದ್ದೇವೆ. ನೀವು ಯಾರೇ ಕರೆದರೂ ನಿಶ್ಯಬ್ಧವಾಗಿ ಮಲಗಿ'. ನನಗೆ ಏನೊಂದು ಗೊತ್ತಾಗಲಿಲ್ಲ. ಆದರೆ ಪೊಲೀಸರು ಬರುತ್ತಿದ್ದಾರೆಂದು, ಬೆಳದಿಂಗಳಲ್ಲಿ ಹೊರಗ ಹೋಗುವುದು ಅಪಾಯವೆಂದು ತಿಳಿಯಿತು. ಆದ ಕಾರಣ ನಾನು ಒಪ್ಪಿದೆನು. ಅವನು ತನ್ನ



ದೇಶಾಭಿಮಾನಿ ಹೊಸ ಆವೃತ್ತಿ ಬಿಡುಗಡೆ. ಕಾಂ. ಸುರ್ಜಿತ್‌ರೊಂದಿಗೆ...

ಪಂಚೆಯನ್ನು ನನ್ನ ಮೇಲೆ ಹೊದಿಸಿದನು. ಮಗುವನ್ನು ನನ್ನ ಪಕ್ಕದಲ್ಲಿ ಮಲಗಿಸಿದನು. ಅವನ ಹೆಂಡತಿ ಮಗುವಿನ ಪಕ್ಕದಲ್ಲಿ ಮಲಗಿದರು. ನನಗೆ ತೀರಾ ಅಪರಿಚಿತರಾಗಿದ್ದ ಮಹಿಳೆಯೊಬ್ಬರ ಸಂಗಡ ಒಂದೇ ಚಾಪೆಯಲ್ಲಿ ಮಲಗಲು ಸ್ವಲ್ಪ ಮುಜುಗರವಾಯಿತು. ರೈತನು ಹಿಂಬಾಗಿಲಿನಿಂದ ಮನೆಯಿಂದ ಹೊರಬಿದ್ದು ಅದೃಶ್ಯನಾದನು. ನಾನು ನಿಶ್ಯಬ್ದನಾಗಿ, ನಿಶ್ಚಲನಾಗಿ ಮಲಗಿದೆ.

ಕೆಲವು ಕ್ಷಣಗಳಾದ ಮೇಲೆ ಹೆಜ್ಜೆಯ ಸಪ್ಪಳ ಕೇಳಿಬಂದಿತು. ಟಾರ್ಚೊಂದರ ಬೆಳಕನ್ನು ಕಂಡೆನು. ನಾನು ಮಲಗಿದ ಕೋಣೆಯತ್ತಲೇ ಬೆಳಕು ಚಲ್ಲಿತ್ತು. 'ನೋಡಿ, ಅವನು, ಅವನ ಹೆಂಡತಿ ಮತ್ತು ಮಗು ಮಾತ್ರ ಇರುವುದು.' ಅಲ್ಲಿ ಮತ್ತಾರು ಇಲ್ಲ. ಇಷ್ಟು ದೂರ ಬಂದಿದ್ದು ವ್ಯರ್ಥ.' ಎಂದು ಯಾರೋ ಹೇಳಿದ್ದು ಕೇಳಿಸಿತು. 'ಇಲ್ಲಿ ಯಾರೋ ಬಂದರೆಂದು ನಮಗೆ ಯಾರು ಹೇಳಿದ್ದು?' ಎಂದು ಹೇಳಿ ಬಾಗಿಲನ್ನು ತಟ್ಟಿದರು. ಆಗ ರೈತನ ಪತ್ನಿ ಎದ್ದು ನಿದಾನವಾಗಿ ಕದವನ್ನು ಸ್ವಲ್ಪ ತೆರೆದು ಕೇಳಿದಳು. 'ಯಾರದು ಸ್ವಾಮಿ? ಈ ಮದ್ಯರಾತ್ರಿಯಲ್ಲಿ ನೀವು ಇಲ್ಲಿಗೇಕೆ ಬಂದಿರಿ?'. 'ನಿನ್ನ ಕೋಣೆಯಲ್ಲಿ ಯಾರಿದ್ದಾರೆ?' ಎಂದು ಯಾರೋ ಕೋಪದಿಂದ ಕೇಳಿದರು. ' ಏಕೆ? ನನ್ನ ಗಂಡ ಎರಡು ದಿನಗಳಿಂದಜ್ವರ ಬಂದು ಮಲಗಿದ್ದಾರೆ. ಗಂಜಿಯನ್ನು ಸಹ ಕುಡಿದಿಲ್ಲ. ಸದ್ಯ ನನ್ನ ಮಗುವಿಗೂ ಅವನ ಜ್ವರ ತಗುಲದಿರಲೆಂದು ಪ್ರಾರ್ಥಿಸುತ್ತೇನೆ' ಎಂದು ಹೇಳಿ ಆಕೆ ಕದವನ್ನು ಪೂರ್ತಿ ತೆರೆದು ಹೊರಗೆ ಹೋದರು. ಬಂದಿದ್ದವರು ಕೋಣೆಯ ಮೂಲೆಮೂಲೆಗೂ ಟಾರ್ಚ್ ಬೆಳಕು ಚಲ್ಲಿ ಯಾರಾದರೂ ಇದ್ದಾರೇನೆಂದು ನೋಡಿದರು. ' ಅವರು ನಾಳೆ ಕೆಲಸಕ್ಕೆ ಬರುವುದಿಲ್ಲ. ನಾಳೆ ಮಾತ್ರವಲ್ಲ ಈ ವಾರ ಪೂರ್ತಿ ಬರುವುದಿಲ್ಲ. ಅವರು ಮೆಣಸು ನೀರನ್ನು ಮಾತ್ರ ಕುಡಿಯುತ್ತಿದ್ದಾರೆ. ಏನು ಸುದ್ದಿ? ಅವರನ್ನು ಏಳಿಸಲೇ?'

'ಈ ಕಡೆ ಯಾರಾದರೂ ಈ ದಿನ ಬಂದಿದ್ದರೇ?'

'ಈ ದಿನ ಸಂಜೆ ಯಾರೋ ಆ ಕೆಳಗಿನ ರಸ್ತೆಯಲ್ಲಿ ಉತ್ತರದ ಕಡೆ ಹೋಗುತ್ತಿದ್ದುದನ್ನು ನೋಡಿದೆ'.

'ಅವನು ಇಲ್ಲಿಲ್ಲ. ಬೇರೆ ಎಲ್ಲೋ ಹೋಗಿರಬೇಕು ನಾವಿನ್ನು ಹೋಗೋಣ' ಎಂದು ಯಾರೋ ಹೇಳಿದರು.

ಮಗು ಎದ್ದು ಕುಳಿತು ಅಳಲಾರಂಭಿಸಿತು. 'ಅಳಬೇಡ, ನಾನು ಬರುತ್ತಿದ್ದೇನೆ. ನೀನು ಅತ್ತು ಅಪ್ಪನನ್ನು ಎಬ್ಬಿಸಿಬಿಟ್ಟೀಯಾ'.

'ಹೋಗು, ಮಗುವನ್ನು ಸಮಾಧಾನಪಡಿಸು ಹೋಗು' ಎಂದು ಯಾರೋ ಹೇಳಿದರು.

'ಪ್ರಾರಬ್ಧ'. ಆಕೆ ಕೋಣೆಯೊಳಗೆ ಬಂದು ಜೋರಾಗಿ ಕದವನ್ನು ಮುಚ್ಚಿದಳು.

ಸ್ವಲ್ಪ ಸಮಯದ ನಂತರ ನನ್ನ ಆಶ್ರಯದಾತ ಬಂದನು. ಕೂಡಲೇ ನನ್ನನ್ನು ಬೇರೊಂದು ಮನೆಗೆ ಕರೆದೊಯ್ದನು.

ಕೈಯ್ಯೂರು ಬಂಡಾಯದ ಮುಂಚಿನ ದಿನಗಳ ಮತ್ತೊಂದು ಘಟನೆ ನನಗೆ ನೆನಪಾಗುತ್ತದೆ :

"ನನ್ನ ಸಂಗಾತಿಗಳು ಸಣ್ಣ ಗುಡಿಸಲೊಂದರಲ್ಲಿ ನನಗೆ ತಂಗಲು ವ್ಯವಸ್ಥೆ ಮಾಡಿದ್ದರು. ಅದರಲ್ಲಿ ತೆಂಗಿನ ಗರಿಗಳ ತಡಿಕೆಯ ಒಂದು ಕೋಣೆಯಿತ್ತು. ನಾನು ಸಣ್ಣ ದೀಪವೊಂದರ ಬೆಳಕಿನಲ್ಲಿ ಓದುತ್ತಿದ್ದೆ. ಆ ರಾತ್ರಿಯೂ ಬೆಳದಿಂಗಳ ರಾತ್ರಿಯಾಗಿತ್ತು. ನಾನು ಬೀಡಿಗಳನ್ನು ಸೇದುತ್ತ ಓದುತ್ತಿದ್ದೆನು. ರಾತ್ರಿ ಸುಮಾರು ಹತ್ತು ಗಂಟೆಯಿರಬಹುದು. ಯಾರೋ ಗುಡ್ಡವನ್ನು ಹತ್ತಿ ಬರುತ್ತಿರುವ ಸಪ್ಪಳ ಕೇಳಿದಂತಾಯಿತು. ನಾನು ದೀಪವನ್ನಾರಿಸಿ ನಿಶ್ಚಲನಾದೆ. ಬರುತ್ತಿರುವ ಆಗಂತುಕ ವ್ಯಕ್ತಿ ಅಪಾಯಕಾರಿ ಮನುಷ್ಯನಲ್ಲವೆಂದು ತಕ್ಷಣ ಹೊಳೆಯಿತು. ಇಲ್ಲವಾದಲ್ಲಿ ಗುಡ್ಡದ ಕೆಳಗಿದ್ದ ಸಂಗಾತಿಗಳು ಅಗತ್ಯ ಮುನ್ನೆಚ್ಚರಿಕೆ ನೀಡುತ್ತಿದ್ದರು. ಯಾರೋ ಒಬ್ಬ ವ್ಯಕ್ತಿ ಹೊರಗಿನಿಂದ ಕದವನ್ನು ತಟ್ಟಿದನು. ನನಗೆ ಆಶ್ರಯ ನೀಡಿದಾಕೆ ಸ್ವಲ್ಪವೂ ಸದ್ದಾಗದಂತೆ ಕದವನ್ನು ತೆರೆದಳು. ಅವನು ಒಳಗೆ ಬಂದ ನಂತರ ಇಬ್ಬರ ನಡುವೆಯೂ ವಾದ ಪ್ರಾರಂಭವಾಯಿತು. ಈ ಚರ್ಚೆಯನ್ನು ಕೇಳಿದ ನಂತರ ನಾನು ಆಶ್ರಯ ಪಡೆದಿದ್ದ ಆ ಮನೆಯೂ ವೇಶ್ಯಾಗೃಹವೆಂದು ಆಗ ಅರ್ಥವಾಯಿತು. ಅವರು ರೇಟಿನ ಬಗ್ಗೆ ವಾದಿಸುತ್ತಿದ್ದಾಗ ನಾನು ಸದ್ದಿಲ್ಲದೆ ಹೊರಬಿದ್ದೆ. ಬೆಳದಿಂಗಳಲ್ಲಿ ಗುಡ್ಡ ಮತ್ತು ಸುತ್ತಮುತ್ತಲಿನ ಪ್ರದೇಶದ ಕಡೆ ಕಣ್ಣಾಯಿಸಿದೆ. ನಾನೊಂದು ಎಚ್ಚರಿಕೆಯ ಸೂಚನೆ ನೀಡಿದೆ. ತಕ್ಷಣ ಪಕ್ಕದ ಮನೆಯಿಂದ ಒಬ್ಬ ಸಂಗಾತಿ ಬಂದನು. ನಾನು ಆ ಮನೆಯಲ್ಲಿರಲು ಸಾಧ್ಯವಿಲ್ಲವೆಂದು ಅವನಿಗೆ ಹೇಳಿ ನನ್ನ ವಸ್ತುಗಳನ್ನು ಕಟ್ಟಿಕೊಂಡು ಬರುವುದಾಗಿ ತಿಳಿಸಿದೆನು. ಬೇರೊಂದು ಆಶ್ರಯ ದೊರಕಿಸುವಂತೆ ನಾನು ಕೇಳಿದಾಗ ಆತನು ಹುಡುಕಲು ಹೊರಟನು. ನಾನು ಕೊಠಡಿಗೆ ಹಿಂತಿರುಗಿ ಚೀಲಕ್ಕೆ ನನ್ನ ವಸ್ತುಗಳನ್ನೆಲ್ಲ ತುಂಬಿಕೊಂಡು ಸದ್ದಿಲ್ಲದೆ ಹೊರಬಂದೆನು. ಅವರಿನ್ನೂ ಪರಸ್ಪರ ವಾದಿಸುತ್ತಲೇ ಇದ್ದರು.

ನನ್ನ ಸಂಗಾತಿಗಳು ಬಂದರು. ನಾನು ಅವರೊಡನೆ ಸೇರಿಕೊಂಡೆನು. ಸ್ವಲ್ಪ ದೂರ ನಡೆದ ಮೇಲೆ ರಸ್ತೆಯ ಪಕ್ಕದಲ್ಲಿದ್ದ ಎರಡಂತಸ್ತಿನ ಹಳೆಯ ಮನೆಯೊಂದರ ಬಳಿ ತಲುಪಿದೆವು. ಮಹಡಿಯ ಮೇಲೆ ಏರಲು ಹೇಗೋ ಅವರು ನನಗೆ ಸಹಾಯ ಮಾಡಿದರು. ಅಲ್ಲಿ ಒಂದು ಚಾಪೆ ಮತ್ತು ದಿಂಬು ಇದ್ದುದನ್ನು ಕಂಡೆನು. ಈ ಮಹಡಿಗೆ ಮೆಟ್ಟಿಲುಗಳೇ ಇರಲಿಲ್ಲ. ಈ ಪಾಳು ಮನೆಗೆ ಯಾರೋ ಬರಲಾರರೆಂಬ ಭರವಸೆಯಿಂದ ನಿಶ್ಚಿಂತನಾಗಿ ಮಲಗಿದೆ. 'ದೀಪವನ್ನು ಹೊತ್ತಿಸಬೇಡಿ, ಇದು ರಸ್ತೆ ಬದಿಯಲ್ಲಿರುವ ಮನೆ' ಎಂದು ನನ್ನ ಸಂಗಾತಿಗಳು ಹೇಳಿ ಹೋದರು. ಬೆಳಗಾದಾಗ ರಸ್ತೆಯಲ್ಲಿ ಜನರ ಸಪ್ಪಳ ಕೇಳಿಬಂದಿತು. ನಾನು ಬಿಟ್ಟುಬಂದ ತಕ್ಷಣ ಪೊಲೀಸರು ನನ್ನನ್ನು ಹುಡುಕಿಕೊಂಡು ಹೋಗಿದ್ದರೆಂದು ಎರಡು ಮೂರು ದಿನಗಳ ಬಳಿಕ ನನಗೆ ತಿಳಿಯಿತು. ಯಾರೋ ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದರು. ಆಗ ಅಲ್ಲಿದ್ದ ಗಂಡಸನ್ನು ನಾನೆಂದು ತಪ್ಪು ತಿಳಿದು ಹಿಡಿದುಕೊಂಡರು. ಅವನನ್ನು ಹೊಡೆದಾಗ ತಾನು ಯಾರೆಂದು ತಿಳಿಸಿದನು. ಪೊಲೀಸರು ಮನೆಯನ್ನೆಲ್ಲಾ ಪರಿಶೀಲಿಸಿದಾಗ ಪಕ್ಕದ ಕೋಣೆಯಲ್ಲಿ ಯಾರೋ ಒಬ್ಬ ವ್ಯಕ್ತಿ ಮಲಗಿ ಹೋಗಿದ್ದಾನೆಂದು ತಿಳಿದುಬಂದಿತು. ಅಲ್ಲಿ ಯಾರೋ ತಂಗಿದ್ದರೆಂದು ಪೋಲಿಸರಿಗೆ ಖಾತರಿಯಾಗಿ ಆ ಮಹಿಳೆಯನ್ನು ಪ್ರಶ್ನಿಸಿದರು. ಎಷ್ಟೇ ಹಿಂಸೆ ಕೊಟ್ಟು ಬೆದರಿಸಿದರೂ ನಾನು ನಾಲ್ಕು ದಿನಗಳ ಕಾಲ ಆ ಮನೆಯಲ್ಲಿ ಅಡಗಿಕೊಂಡಿದ್ದೆನೆಂಬ ಗುಟ್ಟನ್ನು ಆಕೆ ಬಿಟ್ಟುಕೊಡಲಿಲ್ಲ.

☐ (1982 ರ ಐಕ್ಯರಂಗದಿಂದ)
ಅನುವಾದ: ಎಸ್.ಆರ್.ಆರಾಧ್ಯ,
'ಔಟ್‌ಲುಕ್' ನಿಂದ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಾಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH